ಬೆಂಗಳೂರು ಶುಕ್ರವಾರ, 1 ಮೇ 2026 ಸಂಪುಟ 33, ಸಂಚಿಕೆ 180, ಪುಟಗಳು 16+4 hosadigantha.com ₹5
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ RNI: 58231/94 REG No.KA/BG GPO/2532/2021-23

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಇಂದು ವಿಶ್ವ ಕಾರ್ಮಿಕರ ದಿನ

ಪಾಕ್‌ನಲ್ಲಿ ಐಟಿ ಎಂದರೆ ಇಂಟರ್‌ನ್ಯಾಷನಲ್ ಟೆರರಿಸಂ: ರಾಜನಾಥ್

ಐಟಿಗೆ ಟೆರರ್‌ನ ಅರ್ಥ

• **ಹೊಸದಿಲ್ಲಿ:** ಭಾರತ ಮತ್ತು ಪಾಕಿಸ್ತಾನ ಒಂದೇ ಸಮಯದಲ್ಲಿ ಸ್ವಾತಂತ್ರ್ಯ ಪಡೆದವು. ಆದರೆ ಇಂದು ಭಾರತವು ಇನ್ಫಾರ್ಮೇಶನ್ ಟೆಕ್ನಾಲಜಿಗಾಗಿ ಜಗತ್ತಿನಲ್ಲಿ ಪ್ರಸಿದ್ಧವಾಗಿದ್ದರೆ, ಪಾಕಿಸ್ತಾನ ಇಂಟರ್‌ನ್ಯಾಷನಲ್ ಟೆರರಿಸಮ್‌ಗಾಗಿ ಗುರುತಿಸಿಕೊಂಡಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕಿಡಿಕಾರಿದರು.

ಭಯೋತ್ಪಾದನೆ ಎಂಬುದು 'ವಿಕೃತ ಹಾಗೂ ವಕ್ರ ಮನೋಭಾವದಿಂದ' ಹುಟ್ಟಿಕೊಳ್ಳುವ ದುಷ್ಟ ಶಕ್ತಿಯಾಗಿದ್ದು, ಅದನ್ನು ಎದುರಿಸುವ ಹೋರಾಟವು ಕೇವಲ ರಾಷ್ಟ್ರೀಯ



ಭದ್ರತೆಗಾಗಿ ಮಾತ್ರವಲ್ಲ, ಮಾನವೀಯ ಮೌಲ್ಯಗಳನ್ನು ರಕ್ಷಿಸುವ ಮೂಲ ಹೋರಾಟವಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಭಯೋತ್ಪಾದನೆ ವಿರುದ್ಧ ಭಾರತದ ಹೋರಾಟದ ದೃಷ್ಟಿಕೋನದಲ್ಲಿ ಮಹತ್ವದ ಬದಲಾವಣೆ ಉಂಟಾಗಿದೆ ಎಂದು ಅವರು ತಿಳಿಸಿದ್ದಾರೆ.

ಆಪರೇಷನ್ ಸಿಂದೂರ ಮೂಲಕ ಭಾರತವು ಇನ್ನು ಮುಂದೆ ಕೇವಲ ರಾಜತಾಂತ್ರಿಕ ಹೇಳಿಕೆಗಳಲ್ಲೇ ಸೀಮಿತವಾಗಿರುವ ದೇಶವಲ್ಲ ಎಂಬುದನ್ನು ವಿಶ್ವಕ್ಕೆ ಸ್ಪಷ್ಟ ಸಂದೇಶ ನೀಡಿದೆ ಎಂದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮಾತಿನ ಮಟ್ಟದಲ್ಲೇ ಉಳಿಯದೆ, ದೃಢವಾದ ಕ್ರಮಗಳ ಮೂಲಕ ತನ್ನ ಬದ್ಧತೆಯನ್ನು ತೋರಿಸಿದೆ ಎಂದು ಅವರು ಹೇಳಿದರು.

ಸಮನ್ವಯದ ಸಾಧನೆ: ಆಪರೇಶನ್ ಸಿಂಧೂರ್ ಅನ್ನು ಭಾರತೀಯ ರಕ್ಷಣಾ ಪಡೆಗಳ ಸಮನ್ವಯ ಹಾಗೂ ಏಕತೆಯ ಉಜ್ವಲ ಉದಾಹರಣೆಯಾಗಿದೆ ಎಂದು ಹೇಳಿದರು. ಭಾರತೀಯ ಸೇನೆ, ನೌಕಾಪಡೆ ಮತ್ತು ವಾಯುಪಡೆಯು ಏಕೀಕೃತ ಯೋಜನೆಯಲ್ಲಿ ಕಾರ್ಯನಿರ್ವಹಿಸಿ, ಭಾರತವು ಈಗ ಒಗ್ಗಟ್ಟಿನ ಜಾಗತಿಕ ಶಕ್ತಿಯಾಗಿ ಹೊರಹೊಮ್ಮಿದೆ ಎಂದರು. ➡ಪುಟ ೭



- ಭಾರತದಲ್ಲಿ ಐಟಿ ಅಂದ್ರೆ ಇನ್ಫರ್ಮೇಶನ್ ಟೆಕ್ನಾಲಜಿ
- ಪಾಕಿಸ್ತಾನದಲ್ಲಿ ಐಟಿ ಅಂದ್ರೆ ಇಂಟರ್‌ನ್ಯಾಷನಲ್ ಟೆರರಿಸಂ
- ಪಾಕಿಸ್ತಾನ ಭಯೋತ್ಪಾದನೆಗೆ ಕೇಂದ್ರ: ರಕ್ಷಣಾ ಸಚಿವರ ಟೀಕೆ
- ಆಪರೇಷನ್ ಸಿಂದೂರ ಮೂಲಕ ವಿಶ್ವಕ್ಕೆ ಹೊಸ ಭಾರತ ಸಂದೇಶ
- 72 ಗಂಟೆಗಳ ಆಪರೇಶನ್ ಸಿಂದೂರ ಯಶಸ್ಸು
- ರಕ್ಷಣಾ ಉತ್ಪನ್ನ ರಫ್ತು 38,424 ಕೋಟಿ ರೂ.ಗೆ ಏರಿಕೆ

ಉತ್ಪಾದನಾ ಕ್ಷೇತ್ರದ ಸಾಧನೆ

ಭಾರತದ ರಕ್ಷಣಾ ಉತ್ಪಾದನಾ ಕ್ಷೇತ್ರವೂ ವೇಗವಾಗಿ ಬೆಳೆಯುತ್ತಿದ್ದು, 2025-26 ಹಣಕಾಸು ವರ್ಷದಲ್ಲಿ ರಕ್ಷಣಾ ಉತ್ಪನ್ನಗಳ ರಫ್ತು 38,424 ಕೋಟಿ ರೂ.ಗೆ ಏರಿಕೆಯಾಗಿದೆ. ➡ಪುಟ ೭

ಉಗ್ರವಾದ ಸಹಿಸಲ್ಲ

ಯಾವ ಸಂದರ್ಭದಲ್ಲಾದರೂ ಭಯೋತ್ಪಾದನೆಯನ್ನು ಸಹಿಸುವ ಪ್ರಶ್ನೆಯೇ ಇಲ್ಲ ಎಂಬ ದೃಢ ನಿಲುವನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಅವರು ಪುನರುಚ್ಚರಿಸಿದರು. "ಭಯೋತ್ಪಾದನೆ ಮಾನವಕುಲದ ಮೇಲೆ ಕಪ್ಪು ಮಸಿ ಎರಚುವಂತಹುದು. ಇದು ಪ್ರತಿಯೊಂದು ಮಾನವೀಯ ಮೌಲ್ಯಕ್ಕೂ ವಿರುದ್ಧವಾಗಿರುವ ಕ್ರೂರ ಚಿಂತನೆ" ಎಂದರು. ಇದೇ ವೇಳೆ, ಭಯೋತ್ಪಾದನೆಗೆ ಧಾರ್ಮಿಕ ಬಣ್ಣ ನೀಡುವುದು ಅಥವಾ ನಕ್ಸಲಿಸಂ ಮೊದಲಾದ ಹಿಂಸಾತ್ಮಕ ಸಿದ್ಧಾಂತಗಳೊಂದಿಗೆ ಸಂಪರ್ಕಿಸುವುದು ಅತ್ಯಂತ ಅಪಾಯಕರ ಎಂದು ಅವರು ಎಚ್ಚರಿಸಿದರು. ಇದು ಭಯೋತ್ಪಾದಕರಿಗೆ ಪರೋಕ್ಷ ಬೆಂಬಲ ನೀಡುವಂತಾಗುತ್ತದೆ ಎಂದರು.

ಅಣ್ವಸ್ತ್ರ ದಾಳಿ ಬೆದರಿಕೆಗೆ ಭಾರತ ತಲೆಬಾಗಿಲ್ಲ

ಭಾರತವು ಯಾವುದೇ ಅಣು ದಾಳಿಯ ಬೆದರಿಕೆಗೆ ತಲೆಬಾಗದೆ ತನ್ನ ಗುರಿಗಳನ್ನು ಸಾಧಿಸಿದೆ. ಅಗತ್ಯವಿದ್ದರೆ ದೀರ್ಘಕಾಲದ ಸಂಘರ್ಷಕ್ಕೂ ಸಿದ್ಧವಾಗಿರುವ ಸಾಮರ್ಥ್ಯ ಭಾರತಕ್ಕಿದೆ. ಪರಮಾಣು ದಾಳಿ ಬೆದರಿಕೆಗೆ ನಾವು ಹೆದರಿಕೊಂಡು ಸಿಂದೂರ ಕಾರ್ಯಾಚರಣೆಯನ್ನು ಅರ್ಧಕ್ಕೆ ಸ್ಥಗಿತಗೊಳಿಸಿಲ್ಲ ಎಂದೂ ರಾಜನಾಥ್ ಗುಡುಗಿದ್ದಾರೆ.

ಮೋದಿ ನಾಯಕತ್ವಕ್ಕೆ ಶ್ಲಾಘನೆ

ಪ್ರಧಾನಿ ನರೇಂದ್ರ ಮೋದಿ ನಾಯಕತ್ವವನ್ನು ಕೊಂಡಾಡಿ, ಭಯೋತ್ಪಾದನೆ ಬಗ್ಗೆ ಶೂನ್ಯ ಸಹಿಷ್ಣುತೆಯ ಮೋದಿ ಸರಕಾರದ ಧೋರಣೆ ಪ್ರಶಂಸಾರ್ಹ. ಭಾರತ ಯಾವ ಕಾರಣಕ್ಕೂ ಪರಮಾಣು ದಾಳಿ ಬೆದರಿಕೆಗಳಿಗೆ ಹೆದರಲ್ಲ, ಜಗ್ಗಲ್ಲವೆಂದು ಪುನರುಚ್ಚರಿಸಿದರು.

ಸುಪ್ರೀಂ ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ ಅಭಿಯಾನ

• **ಬೆಂಗಳೂರು:** ದೇಶಾದ್ಯಂತ ಬಾಕಿ ಇರುವ ಪ್ರಕರಣಗಳ ಸೌಹಾರ್ದಯುತ ಇತ್ಯರ್ಥಕ್ಕಾಗಿ ಸಮಾಧಾನ ಸಮಾರೋಹ ವಿಶೇಷ ಲೋಕ ಅದಾಲತ್ ಅಭಿಯಾನವನ್ನು ಸುಪ್ರೀಂಕೋರ್ಟ್ ಹಮ್ಮಿಕೊಂಡಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಆರ್.ದೇವದಾಸ್ ತಿಳಿಸಿದರು.

ಹೈಕೋರ್ಟ್‌ನ ಕಾರ್ಯನಿರ್ವಾಹಕ ಮುಖ್ಯಸ್ಥರ ಸಭಾ ಕೊಠಡಿಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾನ್ಯವಾಗಿ ಲೋಕ್ ಅದಾಲತ್‌ಗಳ ಮೂಲಕ ಪ್ರಕರಣಗಳ ವಿಲೇವಾರಿ ನಡೆಯುತ್ತದೆಯಾದರೂ, ಈ ಬಾರಿ ವಿಶೇಷವಾಗಿ ಸುಪ್ರೀಂ ಕೋರ್ಟ್ ಪ್ರಕರಣಗಳಿಗಾಗಿಯೇ ಪ್ರಥಮವಾಗಿ ಈ ಪ್ರತ್ಯೇಕ ಅಭಿಯಾನವನ್ನು ರೂಪಿಸಲಾಗಿದೆ. ಆಗಸ್ಟ್ 21, 22 ಮತ್ತು 23ರಂದು ನಡೆಯಲಿದ್ದು, ಇದಕ್ಕೆ ಪೂರಕವಾದ ಪೂರ್ವ ಸಮಾಧಾನ ಪ್ರಕ್ರಿಯೆಗಳು ಈಗಾಗಲೇ ಆರಂಭಗೊಂಡಿವೆ ಎಂದು ತಿಳಿಸಿದರು.

ಕರ್ನಾಟಕದಿಂದ 4,328 ಪ್ರಕರಣ: ಈ ಮಹತ್ವದ ಅಭಿಯಾನದಲ್ಲಿ, ಕರ್ನಾಟಕಕ್ಕೆ ಸಂಬಂಧಿಸಿದಂತೆ ಒಟ್ಟು 4,328 ಪ್ರಕರಣಗಳನ್ನು ಪೂರ್ವ ಸಮಾಧಾನ ಪ್ರಕ್ರಿಯೆಗಾಗಿ ಗುರುತಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಅತಿ ಹೆಚ್ಚು 1,245 ಪ್ರಕರಣಗಳು ಹಾಗೂ ಬೆಳಗಾವಿಯಲ್ಲಿ 517, ಚಾಮರಾಜನಗರ ಜಿಲ್ಲೆಯಲ್ಲಿ ಕನಿಷ್ಠ 4 ಪ್ರಕರಣಗಳು ಹಾಗೂ ಯಾದಗಿರಿಯಲ್ಲಿ 14 ಪ್ರಕರಣಗಳು ಪಟ್ಟಿಯಲ್ಲಿವೆ.



> ಸುಪ್ರೀಂ ಕೋರ್ಟ್ ಪ್ರಕರಣಗಳ ಇತ್ಯರ್ಥಕ್ಕೆ ಇದೊಂದು ಸುವರ್ಣಾವಕಾಶ. ಈಗಾಗಲೇ 4,128 ಪ್ರಕರಣಗಳನ್ನು ಗುರುತಿಸಲಾಗಿದ್ದು, ಪಟ್ಟಿಯಲ್ಲಿ ಹೆಸರಿಲ್ಲದಿದ್ದರೂ ರಾಜಿ ಸಂಧಾನಕ್ಕೆ ಆಸಕ್ತಿ ಇರುವವರು ಅರ್ಜಿ ಸಲ್ಲಿಸಬಹುದು.
>
> ■ **ನ್ಯಾ. ದೇವದಾಸ್, ಹೈಕೋರ್ಟ್ ಜಡ್ಜ್**

ಇವುಗಳಲ್ಲಿ ಸರ್ಕಾರವೇ ಒಂದು ಪಕ್ಷಕಾರರಾಗಿರುವ 937ಕ್ಕೂ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಕ್ಕೆ ಯೋಗ್ಯವೆಂದು ಗುರುತಿಸಲಾಗಿದೆ.

ಇತ್ಯರ್ಥಕ್ಕೆ ಲಭ್ಯವಿರುವ ಪ್ರಕರಣಗಳ ವಿಧಗಳು: ಬ್ಯಾಂಕಿಂಗ್ ಮತ್ತು ವಿಮೆ, ಮೋಟಾರು ಅಪಘಾತ ಪರಿಹಾರ, ನಾಗರಿಕ ಕಾನೂನು, ಗ್ರಾಹಕ ವ್ಯಾಜ್ಯಗಳು, ಕ್ರಿಮಿನಲ್ ಪ್ರಕರಣಗಳು, ಕೌಟುಂಬಿಕ ವಿವಾದಗಳು, ಭೂಸ್ವಾಧೀನ, ಆಸ್ತಿ ತೆರಿಗೆ ಮತ್ತು ಸೇವಾ ಕಾನೂನುಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಈ ಅದಾಲತ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಲು ಅವಕಾಶವಿದೆ.

ಪ್ರಕ್ರಿಯೆ ಮತ್ತು ಸೌಲಭ್ಯಗಳು: ಪಕ್ಷಕಾರರ ಅನುಕೂಲಕ್ಕಾಗಿ ಸ್ಥಳೀಯ ಜಿಲ್ಲಾ ಮತ್ತು ತಾಲೂಕು ಕಾನೂನು ಸೇವಾ ಪ್ರಾಧಿಕಾರಗಳಲ್ಲಿ ಭೌತಿಕವಾಗಿ ಅಥವಾ ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಲು ವ್ಯವಸ್ಥೆ ಮಾಡಲಾಗಿದೆ. ಒಂದು ವೇಳೆ ಪಕ್ಷಕಾರರು ಬೇರೆ ರಾಜ್ಯಗಳಲ್ಲಿ ವಾಸಿಸುತ್ತಿದ್ದರೂ ಸಹ ವರ್ಚುವಲ್ ವಿಧಾನದ ಮೂಲಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದು.

ಲೋಕ ಅದಾಲತ್‌ನ ಲಾಭಗಳು: ಈ ಪ್ರಕ್ರಿಯೆಯಲ್ಲಿ ಯಾವುದೇ ನ್ಯಾಯಾಲಯದ ಶುಲ್ಕವಿರುವುದಿಲ್ಲ, ಒಂದು ವೇಳೆ ಈಗಾಗಲೇ ಶುಲ್ಕ ಪಾವತಿಸಿದ್ದರೆ, ಪ್ರಕರಣ ಇತ್ಯರ್ಥವಾದ ನಂತರ ಅದನ್ನು ಹಿಂದಿರುಗಿಸಲಾಗುತ್ತದೆ. ಲೋಕ ಅದಾಲತ್‌ನಲ್ಲಿ ನೀಡಲಾಗುವ ಆದೇಶವು ಅಂತಿಮವಾಗಿದ್ದು, ಇದನ್ನು ಮತ್ತೆ ಎಲ್ಲಿಯೂ ಪ್ರಶ್ನಿಸಲು ಅವಕಾಶವಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ: ವಕೀಲರು ಮತ್ತು ಪಕ್ಷಕಾರರು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್‌ಸೈಟ್ (www.kslsa.kar.nic.in) ಅಥವಾ ಸುಪ್ರೀಂ ಕೋರ್ಟ್‌ನ ಅಧಿಕೃತ ಜಾಲತಾಣದಲ್ಲಿ ಹೆಚ್ಚಿನ ವಿವರ ಪಡೆಯಬಹುದು.



ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನಕ್ಕೆ 50 ವರ್ಷ ತುಂಬಿದ ಸವಿನೆನಪಿಗಾಗಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವದ ಸ್ಟಿಕ್ಕರ್‌ನ್ನು ಶಿವಮೊಗ್ಗದ ಬಿಜೆಪಿ ಕಚೇರಿಯಲ್ಲಿ ಬಿಡುಗಡೆಗೊಳಿಸಲಾಯಿತು. ಸಂಸದ ಬಿ.ವೈ. ರಾಘವೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಕೆ. ಜಗದೀಶ್, ಪ್ರಮುಖರಾದ ದತ್ತಾತ್ರಿ, ಧನಂಜಯ ಸರ್ಜಿ, ಜ್ಯೋತಿಪ್ರಕಾಶ್, ಎಂ.ಬಿ. ಹರಿಕೃಷ್ಣ ಮತ್ತಿತರರಿದ್ದರು.

ಕಿರುಸುದ್ದಿ

ಆದಿತ್ಯ ಪ್ರಕರಣ ಸಿಬಿಐಗೆ ವಹಿಸಲು ಬೆಲ್ಲದ ಆಗ್ರಹ

• **ಧಾರವಾಡ:** ವಿದ್ಯಾರ್ಥಿ ಆದಿತ್ಯ ಮ್ಯಾಗೇರಿ ಆತ್ಮಹತ್ಯೆ ಪ್ರಕರಣದಲ್ಲಿ ಮೂವರನ್ನು ಅಮಾನತು ಮಾಡಿದರೆ ಸಾಲದು. ಸಮಗ್ರ ತನಿಖೆಗೆ ಸಿಬಿಐ ಇಲ್ಲವೇ ನ್ಯಾಯಾಂಗ ತನಿಖೆಗೆ ಒಪ್ಪಿಸುವಂತೆ ವಿಧಾನಸಭೆ ವಿಪಕ್ಷದ ಉಪನಾಯಕ ಅರವಿಂದ ಬೆಲ್ಲದ ಆಗ್ರಹಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೊಲೀಸ್ ಕಿರುಕುಳದಿಂದ ಆದಿತ್ಯ ಮ್ಯಾಗೇರಿ ಆತ್ಮಹತ್ಯೆ ಮಾಡಿಕೊಂಡಿದ್ದು, ಕಾನ್ಸ್‌ಟೇಬಲ್‌ರನ್ನ ಅಮಾನತು ಮಾಡಲಾಗಿದೆ. ತಪ್ಪಿನ ಮೂಲ ಬೇರು ಪತ್ತೆ ಹಚ್ಚಲು ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡಿದರು.

ಸರ್ಕಾರಿ ನೌಕರಿ ನೀಡಿ: ಎರಡು ದಿನಗಳೊಳಗೆ ಸರ್ಕಾರ ಸೂಕ್ತ ತೀರ್ಮಾನ ಕೈಗೊಳ್ಳದಿದ್ದರೆ, ಧಾರವಾಡದಿಂದ ಹೋರಾಟ ಮಾಡುವ ಎಚ್ಚರಿಕೆ ನೀಡಿದ ಬೆಲ್ಲದ, ಮೃತನ ತಾಯಿಗೆ ಸರ್ಕಾರ 50 ಲಕ್ಷ ರೂ. ಪರಿಹಾರ ಹಾಗೂ ಸರ್ಕಾರಿ ನೌಕರಿ ನೀಡಬೇಕು ಎಂದು ಆಗ್ರಹಿಸಿದರು.

ಪತ್ನಿಯನ್ನು ಕೊಲೆ ಮಾಡಿ ಪೊಲೀಸರಿಗೆ ಶರಣಾದ ಪತಿ

• **ಮೈಸೂರು:** ಪತಿಯೇ ತನ್ನ ಪತ್ನಿಯನ್ನು ಕೊಡಲಿಯಿಂದ ಕೊಚ್ಚಿ ಕೊಲೆ ಮಾಡಿದ ಘಟನೆ ಮೈಸೂರಿನ ಹಳೆ ಕೆಸರೆ ಗ್ರಾಮದಲ್ಲಿ ನಡೆದಿದೆ. ಮಹೇಶ್ ಎಂಬಾತನೇ ತನ್ನ ಪತ್ನಿ ಪುಷ್ಪ ಎಂಬಾಕೆಯನ್ನು ಕೊಲೆ ಮಾಡಿದವ. ಖಾಸಗಿ ಬಟ್ಟೆ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಪುಷ್ಪ ಅವರು ಪ್ರತಿ ದಿನ ಕೆಲಸ ಮುಗಿಸಿ ರಾತ್ರಿ ಮನೆಗೆ ಬರುತ್ತಿದ್ದರು. ಎಂದಿನಂತೆ ಕಳೆದ ರಾತ್ರಿ ಪುಷ್ಪ ಕೆಲಸ ಮುಗಿಸಿ ಮನೆಗೆ ಬಂದಾಗ ದಂಪತಿ ನಡುವೆ ತೀವ್ರ ಜಗಳ ನಡೆದಿದೆ. ಜಗಳ ವಿಕೋಪಕ್ಕೆ ತಿರುಗುತ್ತಿದ್ದಂತೆ ಆಕ್ರೋಶಗೊಂಡ ಮಹೇಶ್ ಕೊಡಲಿಯಿಂದ ಕೊಚ್ಚಿ ಪುಷ್ಪಾಳನ್ನು ಕೊಲೆ ಮಾಡಿದ್ದಾನೆ. ಪತ್ನಿಯನ್ನು ಕೊಂದ ನಂತರ ಮಹೇಶ್, ಪೊಲೀಸ್ ಠಾಣೆಗೆ ತೆರಳಿ ಶರಣಾಗಿದ್ದಾನೆ. ವಿಷಯ ತಿಳಿಯುತ್ತಿದ್ದಂತೆ ನರಸಿಂಹರಾಜ ಠಾಣೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಆಯುಕ್ತರ ಕಚೇರಿಯಲ್ಲೇ ವ್ಯಕ್ತಿ ಆತ್ಮಹತ್ಯೆಗೆ ಯತ್ನ

• **ಬೆಳಗಾವಿ:** ಜಮೀನು ಭೂ ಪರಿವರ್ತನೆ(ಎನ್‌ಎ) ಸಂಬಂಧ ಸಮಸ್ಯೆ ಹಿನ್ನೆಲೆ ವ್ಯಕ್ತಿಯೊಬ್ಬರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಬೆಳಗಾವಿಯ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ನಡೆದಿದೆ. ಹಾವೇರಿ ಜಿಲ್ಲೆಯ ರಾಣೇಬೆನ್ನೂರಿನ ರುದ್ರಯ್ಯ ಅಮ್ಮಿನಬಾವಿಮಠ(50) ಎಂಬವರು ಎರಡು ಎಕರೆ ಜಮೀನನ್ನು ಎನ್‌ಎ ಮಾಡಲು ಅರ್ಜಿ ಸಲ್ಲಿಸಿ ಹಲವು ದಿನಗಳಿಂದ ಕಚೇರಿಗಳಿಗೆ ಅಲೆದಾಡುತ್ತಿದ್ದರು. ಹಾವೇರಿ ಡಿಸಿ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದರೂ, ಲ್ಯಾಂಡ್ ವಿದ್ ಚೇಂಜ್ ಆಗುವವರೆಗೂ ಎನ್‌ಎ ಮಾಡಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಳಗಾವಿಯ ಪ್ರಾದೇಶಿಕ ಆಯುಕ್ತರ ಕಚೇರಿಗೆ ಹಲವು ಬಾರಿ ಭೇಟಿ ನೀಡಿ ಮನವಿ ಮಾಡಿದ್ದ ರುದ್ರಯ್ಯ, ಗುರುವಾರ ಪ್ರಾದೇಶಿಕ ಆಯುಕ್ತ ಜಾನಕಿ ಅವರನ್ನು ಭೇಟಿ ಮಾಡಲು ಮತ್ತೊಮ್ಮೆ ಆಗಮಿಸಿದ್ದರು. ಆದರೆ, ಆಯುಕ್ತ ಕಚೇರಿಯಲ್ಲಿ ಲಭ್ಯವಿಲ್ಲ ಎಂಬ ಮಾಹಿತಿ ತಿಳಿದ ಬಳಿಕ ಮನನೊಂದು ಕಚೇರಿಯಲ್ಲೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ತಕ್ಷಣವೇ ಅವರನ್ನು ಬೆಳಗಾವಿಯ ಬಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮಾರ್ಕೆಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಕಾಲೊನಿಗಳ ಅಭಿವೃದ್ಧಿಗೆ 600 ಕೋಟಿ ರೂ.ಗಳ ಯೋಜನೆಗೆ ಅಸ್ತು

ಅಲ್ಪಸಂಖ್ಯಾತರಿಗೆ ಬಂಪರ್

• **ಬೆಂಗಳೂರು:** ರಾಜ್ಯದ ಅಲ್ಪಸಂಖ್ಯಾತರಿಗೆ ರಾಜ್ಯ ಸರ್ಕಾರ ಬಂಪರ್ ಕೊಡುಗೆ ನೀಡಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿಧಾನಸಭಾ ಕ್ಷೇತ್ರಗಳಲ್ಲಿ ಅಲ್ಪಸಂಖ್ಯಾತರು ವಾಸಿಸುತ್ತಿರುವ ಕಾಲೊನಿಗಳ ಅಭಿವೃದ್ಧಿಗೆ 600 ಕೋಟಿ ರೂ.ಗಳ ಕ್ರಿಯಾ ಯೋಜನೆ ರೂಪಿಸಿ ಕಾಮಗಾರಿಗಳನ್ನು ಅನುಷ್ಠಾನಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ಕುರಿತು ಕಾನೂನು ಸಚಿವ ಎಚ್.ಕೆ. ಪಾಟೀಲ್ ಮಾಧ್ಯಮದವರಿಗೆ ವಿವರ ನೀಡಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿನ ರಾಜ್ಯದ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರದೇಶಗಳಲ್ಲಿನ ಅತೀ ಹಿಂದುಳಿದ ಅಲ್ಪಸಂಖ್ಯಾತರು ವಾಸಿಸುತ್ತಿರುವ ನಗರ ಪ್ರದೇಶಗಳಲ್ಲಿ, ಅತೀ ಹಿಂದುಳಿದ ಕಾಲೊನಿಗಳನ್ನು ಮಾದರಿ ಕಾಲೊನಿಗಳನ್ನಾಗಿ ಅಭಿವೃದ್ಧಿ ಪಡಿಸಬೇಕಿದೆ. ಇದಕ್ಕಾಗಿ ರಾಜ್ಯದ 11 ಕಾರ್ಪೊರೇಷನ್‌ಗಳಲ್ಲಿ ಅಲ್ಪಸಂಖ್ಯಾತರ ಸ್ಲಂ ಅಥವಾ ಕಾಲೊನಿ ಅಭಿವೃದ್ಧಿ ಯೋಜನೆ ಹಾಗೂ ಮುಖ್ಯಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ 2026-27 ಮತ್ತು 2027-28ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯ ಒಪ್ಪಿಗೆಯಂತೆ 600 ಕೋಟಿ ರೂ.ಗಳಿಗೆ ಕ್ರಿಯಾ ಯೋಜನೆ ರೂಪಿಸಿದೆ ಎಂದರು.

ಹೈಸ್ಪೀಡ್ ರೈಲು ಕಾರಿಡಾರ್‌ಗೆ ತಾತ್ವಿಕ ಅನುಮೋದನೆ: ಕರ್ನಾಟಕ ರಾಜ್ಯದೊಳಗೆ ಹೈದರಾಬಾದ್-ಬೆಂಗಳೂರು ಹೈಸ್ಪೀಡ್ ರೈಲು ಕಾರಿಡಾರ್ ಕೈಗೊಳ್ಳಲು ಮತ್ತು ಅನುಷ್ಠಾನಗೊಳಿಸಲು ಸಚಿವ ಸಂಪುಟವು ತಾತ್ವಿಕ ಅನುಮೋದನೆ ನೀಡಿದೆ. ಅದರ ಅನುಷ್ಠಾನಕ್ಕೆ ಅಗತ್ಯವಾದ ಆಡಳಿತಾತ್ಮಕ ಮತ್ತು ಶಾಸನಬದ್ಧ ಬೆಂಬಲ ನೀಡಲು ಮೂಲಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಅಧಿಕಾರ ನೀಡಲಾಗಿದೆ. ಈ ಕಾರಿಡಾರ್ ಒಟ್ಟು 607.03 ಕಿ.ಮೀ. ಉದ್ದವಿದೆ. ತುಮಕೂರು, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ 101.03 ಕಿ.ಮೀ. ಕರ್ನಾಟಕದ ಒಳಗಡೆ ಇರುತ್ತದೆ. ಒಟ್ಟು 15 ನಿಲ್ದಾಣಗಳ ಪೈಕಿ 3 ನಿಲ್ದಾಣಗಳೆಂದರೆ ಅಲಿಪುರ, ದೇವನಹಳ್ಳಿ ಮತ್ತು ಕೋಡಿಹಳ್ಳಿ ಕರ್ನಾಟಕದಲ್ಲಿರುತ್ತವೆ ಎಂದು ತಿಳಿಸಿದರು.

ಅದೇ ರೀತಿ ಬೆಂಗಳೂರು-ಚೆನ್ನೈ ಹೈಸ್ಪೀಡ್ ರೈಲು ಕಾರಿಡಾರ್ ಕೈಗೊಳ್ಳುವುದಕ್ಕೂ ಸಚಿವ ಸಂಪುಟ ತಾತ್ವಿಕ ಅನುಮತಿ ನೀಡಿದೆ ಎಂದರು.

ಸಚಿವ ಸಂಪುಟದ ಇತರೆ ನಿರ್ಣಯಗಳು

- ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದಲ್ಲಿ 6 ಎಂಆರ್‌ಐ ಯಂತ್ರಗಳನ್ನು 81 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಖರೀದಿಸಿ, ಜಿಲ್ಲಾಸ್ಪತ್ರೆಗಳಿಗೆ ಪೂರೈಸಲು ಅನುಮೋದನೆ
- ಬೀದರ್-ಬೆಂಗಳೂರು ಮತ್ತು ಕಲಬುರಗಿ-ಬೆಂಗಳೂರು ಮಾರ್ಗಗಳಲ್ಲಿ ವಿಮಾನ ಸೇವೆಗಳಿಗೆ 28.47 ಕೋಟಿ ರೂ. ಸಬ್ಸಿಡಿ ಸಹಾಯ
- ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ 2026-27ನೇ ಸಾಲಿನಲ್ಲಿ 115.84 ಕೋಟಿ ರೂ.ಗಳ ವೆಚ್ಚದಲ್ಲಿ ಶಾಲಾ ಕಿಟ್‌ಗಳನ್ನು ಒದಗಿಸಲು ಒಪ್ಪಿಗೆ
- 2025-26ನೇ ಸಾಲಿನ ಮುಂಗಾರು ಹಾಗೂ ಹಿಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಲ್ಲಿ ರಾಜ್ಯದ ರೈತರಿಂದ ಬಿಳಿಜೋಳ ಖರೀದಿಸಲು ಅವಶ್ಯವಿರುವ ಹೆಚ್ಚುವರಿ ಗೋಣಿ ಚೀಲಗಳನ್ನು 21.35 ಕೋಟಿ ರೂ. ವೆಚ್ಚದಲ್ಲಿ ಖರೀದಿ ಮಾಡಲು ಸಮ್ಮತಿ
- ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಅವಶ್ಯವಿರುವ 80 ನಗರ ಸಾರಿಗೆ ಬಸ್ಸುಗಳನ್ನು 32 ಕೋಟಿ ರೂ. ವೆಚ್ಚದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ
- ಭಾರತ ಸರ್ಕಾರದ ಅರ್ಬನ್ ಚಾಲೆಂಜ್ ಫಂಡ್‌ನ ಕಾರ್ಯಕ್ರಮ ನಿರ್ವಹಣೆ ಮತ್ತು ಮೇಲ್ವಿಚಾರಣೆಗಾಗಿ ಮತ್ತು ರಾಜ್ಯ ಮಟ್ಟದ ತಾಂತ್ರಿಕ ಸಮಿತಿ ರಚಿಸಲು ಸಮ್ಮತಿ

ಉನ್ನತ ಶಿಕ್ಷಣ ಸಚಿವ ಸುಧಾಕರ್ ಮಾಹಿತಿ

ಶೈಕ್ಷಣಿಕ ಸಂಯೋಜಕ ಹುದ್ದೆಗೆ ಅತಿಥಿ ಶಿಕ್ಷಕರು

• **ಬೆಂಗಳೂರು:** ಯುಜಿಸಿ ಅರ್ಹತೆ ಪಡೆಯದೇ, ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕನಿಷ್ಠ 5 ವರ್ಷ ಕಾರ್ಯನಿರ್ವಹಿಸಿರುವಂತಹ ಉಪನ್ಯಾಸಕರಿಗೆ ಮುಂದಿನ ಶೈಕ್ಷಣಿಕ ಸಾಲಿನಿಂದ ಮೂರು ವರ್ಷಗಳ ಕಾಲ ರಾಜ್ಯ ಸರ್ಕಾರವು ಶೈಕ್ಷಣಿಕ ಸಂಯೋಜಕರನ್ನಾಗಿ ನೇಮಿಸಿದೆ.

ಗುರುವಾರ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಅವರು, ಅತಿಥಿ ಉಪನ್ಯಾಸಕರನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಶೈಕ್ಷಣಿಕ ಸಂಯೋಜಕರನ್ನಾಗಿ ನೇಮಿಸಿಕೊಳ್ಳುತ್ತಿದ್ದೇವೆ ಎಂದು ತಿಳಿಸಿದರು. ಅಲ್ಲದೇ, ಉಪನ್ಯಾಸಕರಾಗಿ ಕಾರ್ಯನಿರ್ವಹಿಸಲು ಬಯಸುವವರಿಗೆ ನೆಟ್ ಮತ್ತು ಕೆ-ಸೆಟ್ ಪಡೆಯಲು ಬೇಕಾದ ಆನ್‌ಲೈನ್ ತರಬೇತಿ ನೀಡಲಾಗುತ್ತದೆ. ಇದನ್ನು ಬಳಸಿಕೊಂಡು ಮತ್ತೆ ಉಪನ್ಯಾಸಕ ಸೇವೆಗೆ ಮರಳಬಹುದು ಎಂದರು. 5 ರಿಂದ 10 ವರ್ಷ ಸೇವೆ ಸಲ್ಲಿಸಿರುವವರಿಗೆ 28 ಸಾವಿರ ರೂ., 10 ರಿಂದ 15 ವರ್ಷ ಸೇವೆ ಸಲ್ಲಿಸಿರುವವರಿಗೆ 29 ಸಾವಿರ ರೂ. ಮತ್ತು 15 ವರ್ಷಕ್ಕಿಂತ ಮೇಲ್ಪಟ್ಟು ಕಾರ್ಯ ನಿರ್ವಹಿಸುವವರಿಗೆ ಮಾಸಿಕ 30 ಸಾವಿರ ರೂ. ಗೌರವಧನ ನಿಗದಿ ಮಾಡಲಾಗಿದೆ. ವಾರ್ಷಿಕ 10 ತಿಂಗಳ ಅವಧಿಗೆ ಮಾತ್ರ ಗೌರವಧನ ನೀಡಲಾಗುತ್ತದೆ. ನಿವೃತ್ತಿ ವೇಳೆ 5 ಲಕ್ಷ ರೂ. ಇಡುಗಂಟು ನೀಡಲಾಗುತ್ತದೆ. ಶೈಕ್ಷಣಿಕ ಸಂಯೋಜಕರಿಗೆ ವಾರ್ಷಿಕ 95.08 ಕೋಟಿ ರೂ. ಅನುದಾನ ನೀಡಲಾಗುತ್ತದೆ ಎಂದರು.

10,335 ಕರ್ತವ್ಯ ನಿರ್ವಹಿಸಿದ ಅತಿಥಿ ಉಪನ್ಯಾಸಕರು

5,267 ಯುಜಿಸಿ ಅರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರು



5,068 ಯುಜಿಸಿ ಅರ್ಹತೆ ಹೊಂದಿರದ ಅತಿಥಿ ಉಪನ್ಯಾಸಕರು

3,853 ಯುಜಿಸಿ ಅರ್ಹತೆ ಹೊಂದದ ಕೌನ್ಸಿಲಿಂಗ್ ಮೂಲಕ ಆಯ್ಕೆಯಾದ ನಂತರ ಲಭ್ಯವಾದ ಅತಿಥಿ ಉಪನ್ಯಾಸಕರು

ಕೌನ್ಸೆಲಿಂಗ್ ಆಧಾರಿತ ವರ್ಗಾವಣೆ ವ್ಯವಸ್ಥೆ ಜಾರಿ

• **ಬೆಂಗಳೂರು:** ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಬಿಎಂಆರ್‌ಡಿಎ ಮತ್ತು ನಗರ ನಿಗಮಗಳಲ್ಲಿನ ಎಲ್ಲಾ ಉಪ-ನೋಂದಣಾಧಿಕಾರಿಗಳ ವರ್ಗಾವಣೆಯನ್ನು ಪಾರದರ್ಶಕ, ಪ್ರಭಾವವಿಲ್ಲದ, ಯಾರದ್ದೂ ಹಸ್ತಕ್ಷೇಪವಿಲ್ಲದ ಕೌನ್ಸೆಲಿಂಗ್ ಆಧಾರಿತ ವರ್ಗಾವಣಾ ವ್ಯವಸ್ಥೆಯನ್ನು ಜಾರಿಗೊಳಿಸಿದ್ದೇವೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಸಚಿವರು, ಈ ಪ್ರಕ್ರಿಯೆಯನ್ನು 2 ವರ್ಷಗಳ ಹಿಂದೆಯೇ ಪ್ರಾರಂಭಿಸಿದ್ದೇವೆ. ನಗರಗಳಲ್ಲಿ ಹೆಚ್ಚು ವರ್ಷ ಸೇವೆ ಸಲ್ಲಿಸಿದ 33 ಉಪ ನೋಂದಣಿದಾರರನ್ನು 2024ರಲ್ಲಿ ಕಡ್ಡಾಯವಾಗಿ ವರ್ಗಾವಣೆ ಮಾಡಿ ಕೌನ್ಸೆಲಿಂಗ್ ಮೂಲಕ ಜಾಗ ನೀಡಲಾಗಿತ್ತು. ವರ್ಗಾವಣೆಯಿಂದ ಖಾಲಿಯಾಗಿದ್ದ ನಗರ ಭಾಗದ ಹುದ್ದೆಗಳನ್ನು ಮುಕ್ತ ಮತ್ತು ಪಾರದರ್ಶಕ ಕೌನ್ಸೆಲಿಂಗ್ ಪ್ರಕ್ರಿಯೆಯ ಮೂಲಕ ಭರ್ತಿ ಮಾಡಲಾಯಿತು. ಈ ಪಾರದರ್ಶಕ ಪ್ರಕ್ರಿಯೆಯಲ್ಲಿ ಒಟ್ಟು 90 ಅಧಿಕಾರಿಗಳನ್ನು ವರ್ಗಾಯಿಸಲಾಯಿತು ಎಂದಿದ್ದಾರೆ. 2024ರಲ್ಲಿ ಈ ವ್ಯವಸ್ಥೆಯನ್ನು ಒಮ್ಮೆ ಪ್ರಾಯೋಗಿಕವಾಗಿ ಪ್ರಾರಂಭಿಸಿದ್ದೆವು. ಈಗ, ನಾವು ಮುಂದಿನ ಪ್ರಮುಖ ಹೆಜ್ಜೆ ಇಡುತ್ತಿದ್ದೇವೆ. 2024ರಲ್ಲಿ ಒಂದು-ಬಾರಿ ಕ್ರಮವಾಗಿದ್ದನ್ನು ಈಗ ನಿಯಮಿತ ಮತ್ತು ಶಾಶ್ವತ ವ್ಯವಸ್ಥೆಯಾಗಿ ಮಾಡಲಾಗುತ್ತಿದೆ. ಇಂದಿನಿಂದ ಪ್ರತಿ ವರ್ಷ ಇದನ್ನು ಮಾಡಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಲು ತಿದ್ದುಪಡಿ ಅಥವಾ ನಿಯಮಗಳನ್ನು ತಂದಿದ್ದೇವೆ ಎಂದಿದ್ದಾರೆ.

ಪ್ರಮುಖ ನಗರ ಪ್ರದೇಶಗಳಲ್ಲಿ 5 ವರ್ಷಗಳನ್ನು ಪೂರ್ಣಗೊಳಿಸಿದ ಅಧಿಕಾರಿಗಳನ್ನು ಕೌನ್ಸೆಲಿಂಗ್ ಮೂಲಕ ನಗರೇತರ ಪ್ರದೇಶಗಳಿಗೆ ವರ್ಗಾಯಿಸಲಾಗುತ್ತದೆ. ಕೆಲಸದ ವಾತಾವರಣವನ್ನು ಸೃಷ್ಟಿಸುವ ನ್ಯಾಯಯುತ ಮತ್ತು ಪಾರದರ್ಶಕ ವ್ಯವಸ್ಥೆಯನ್ನು ರಚಿಸಲು ನಾವು ಪ್ರಯತ್ನಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ.

7 ಜನರ ಮೃತದೇಹ ಹಸ್ತಾಂತರ

• **ಬೆಂಗಳೂರು:** ಭಾರೀ ಗಾಳಿ ಮಳೆಗೆ ಆಸ್ಪತ್ರೆಯ ತಡೆಗೋಡೆ ಕುಸಿದು ದುರ್ಮರಣಕ್ಕೀಡಾದ ಏಳು ಜನರ ಮೃತದೇಹಗಳನ್ನ ಅವರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ತಡರಾತ್ರಿ ಪೊಲೀಸರ ಭದ್ರತೆಯೊಂದಿಗೆ ಬೌರಿಂಗ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಪೂರ್ಣಗೊಳಿಸಲಾಗಿದ್ದು, ಸೋಮವಾರ ಮುಂಜಾನೆ ವೇಳೆಗೆ ಮೃತದೇಹಗಳನ್ನು ಅವರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಈ ದುರಂತಕ್ಕೆ ಸಂಬಂಧಿಸಿದಂತೆ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವಿನ ಪ್ರಕರಣ (ಯುಡಿಆರ್) ದಾಖಲಿಸಿಕೊಳ್ಳಲಾಗಿದೆ.

ಬುಧವಾರ ಸಂಜೆ ವೇಳೆಗೆ ನಗರದಲ್ಲಿ ಸುರಿದ ಬಿರುಗಾಳಿ ಸಹಿತ ಭಾರೀ ಮಳೆಗೆ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದಿತ್ತು. ಪರಿಣಾಮ ಪಕ್ಕದ ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ಮಾಡುತ್ತಿದ್ದ ಮೊಹಮ್ಮದ್ ಅಬ್ದುಲ್ ಹಕ್(52), ಫಯಾಜ್ ಅಹಮ್ಮದ್(39), ಹೆಣ್ಣು ಮಗು ಮುಸಾವೀರ್ ಬೇಗಂ(6), ಕೇರಳದ ಪ್ರವಾಸಿಗರಾದ ಲತಾ(57), ಸ್ಮಿತಾ(47), ಉತ್ತರಪ್ರದೇಶದ ಮೊಹಮದ್ ಸಲಾವುದ್ದಿನ್ ಅನ್ಸಾರಿ(36) ಹಾಗೂ ಅಸ್ಸಾಂನ ನೋಮುಲ್ಲಾ(19) ಸ್ಥಳದಲ್ಲೇ ಮೃತಪಟ್ಟಿದ್ದರು. ಅಲ್ಲದೇ ಕೇರಳ ಮೂಲದ ಪ್ರೀತಿ (51), ಸಿಜಾ (45) ಹಾಗೂ ಮಾಯಾ(51) ಎಂಬ ಮೂವರು ಗಂಭೀರವಾಗಿ ಗಾಯಗೊಂಡಿದ್ದು, ಅವರಿಗೆ ಚಿಕಿತ್ಸೆ ಮುಂದುವರಿದಿದೆ.

ಭಾರೀ ಗಾಳಿ ಮಳೆಗೆ ತಡೆಗೋಡೆ ಕುಸಿದು ದುರ್ಘಟನೆ



ಉನ್ನತ ಮಟ್ಟದ ತನಿಖೆಗೆ ಆಗ್ರಹ

ಬೌರಿಂಗ್ ಆಸ್ಪತ್ರೆ ಕಟ್ಟಡ ಹಳೆಯದಾಗಿದ್ದರೂ ಜಿಬಿಎ ಅಧಿಕಾರಿಗಳಾಗಲಿ, ಶಾಸಕರಾಗಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದಿರುವುದೇ ದುರಂತಕ್ಕೆ ಕಾರಣ ಎಂದು ವಿಪಕ್ಷಗಳು ಆರೋಪಿಸಿವೆ. ಏಳು ಮಂದಿ ಅಮಾಯಕರ ಸಾವಿಗೆ ಆಡಳಿತದ ನಿರ್ಲಕ್ಷ್ಯವೇ ಕಾರಣವಾಗಿದ್ದು, ಜಿಬಿಎ ಅಧಿಕಾರಿಗಳು, ಸ್ಥಳೀಯ ಶಾಸಕರನ್ನು ಹೊಣೆಗಾರರನ್ನಾಗಿಸಬೇಕು. ಜತೆಗೆ ದುರಂತ ಕುರಿತಂತೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು, ಉನ್ನತ ಮಟ್ಟದ ತನಿಖೆ ನಡೆಸಬೇಕು. ಸಂತ್ರಸ್ತರ ಕುಟುಂಬಗಳಿಗೆ ತಲಾ 10 ಲಕ್ಷ ರೂ. ಪರಿಹಾರ ನೀಡಬೇಕು ಎಂದು ವಿಪಕ್ಷ ನಾಯಕ ಆರ್. ಅಶೋಕ್ ಆಗ್ರಹಿಸಿದ್ದಾರೆ.

ಸಶಸ್ತ್ರ ಪಡೆಗೆ ಸಾವಯವ ಪೂರಿತ ಆಹಾರ ಪೂರೈಕೆ



ಕೇಂದ್ರ ಆಹಾರ ಸಚಿವ ಜೋಶಿ ಹೇಳಿಕೆ

• **ಹೊಸದಿಲ್ಲಿ:** ದೇಶದ ಸಶಸ್ತ್ರ ಪಡೆಗಳಿಗೆ ಸಾವಯವ ಪೂರಿತ ಆಹಾರ ಪೂರೈಕೆಗೆ ಕೇಂದ್ರ ಸರ್ಕಾರ ಒತ್ತು ನೀಡಿದ್ದು, ಭಾರತ್ ಬ್ರ್ಯಾಂಡ್ ಪೌಷ್ಟಿಕ ಆಹಾರ, ಬಾಸ್ಮತಿ ಅಕ್ಕಿ ಪೂರೈಕೆಗೆ ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ.

ದಿಲ್ಲಿಯ ಕೃಷಿ ಭವನದಲ್ಲಿ ಗುರುವಾರ, ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರು ಈ ಸಂಬಂಧ ಭಾರತೀಯ ಸೇನೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಪೌಷ್ಟಿಕ ಆಹಾರ ಪೂರೈಕೆ ಬಗ್ಗೆ ಚರ್ಚಿಸಿದರು. ಸಶಸ್ತ್ರ ಪಡೆಗಳಿಗೆ ಗುಣಮಟ್ಟದ ಮತ್ತು ಸಾವಯವ ಪಡಿತರ ಆಹಾರ ಧಾನ್ಯ ಪೂರೈಸುವ ಬಗ್ಗೆ ಗಮನ ಹರಿಸಿದ ಸಚಿವರು, ಭಾರತ್ ಬ್ರ್ಯಾಂಡ್ ಅಕ್ಕಿ ಮತ್ತು ಗೋಧಿ ಉತ್ಪನ್ನ ಸರಬರಾಜು ವಿಸ್ತರಣೆಗೆ ಮಹತ್ವದ ಚರ್ಚೆ ನಡೆಸಿದರು.

ಅಕ್ಕಿ ಮತ್ತು ಗೋಧಿಯಂತಹ ಭಾರತ್ ಬ್ರ್ಯಾಂಡ್ ಉತ್ಪನ್ನಗಳ ವಿಸ್ತರಣೆ ಜತೆಗೆ ಉತ್ತಮ ಗುಣಮಟ್ಟದ ಬಾಸ್ಮತಿ ಅಕ್ಕಿ ಸಂಗ್ರಹಣೆ ಸೇರಿದಂತೆ ಸಶಸ್ತ್ರ ಪಡೆಗಳಿಗೆ ಅಗತ್ಯ ವಸ್ತುಗಳ ಖರೀದಿ ಕುರಿತು ಸಚಿವ ಜೋಶಿ ಅವರು ಅಧಿಕಾರಿಗಳಿಗೆ ಸಲಹೆ ಸೂಚನೆ ನೀಡಿದರು. ಇದೇ ವೇಳೆ ಸಚಿವ ಜೋಶಿ ಅವರು, ರೈತರನ್ನು ಪ್ರೋತ್ಸಾಹಿಸುವಲ್ಲಿ ಮತ್ತು ಬೆಂಬಲಿಸುವಾಗ ಮತ್ತು ಸಶಸ್ತ್ರ ಪಡೆಗಳಿಗೆ ಉತ್ತಮ ಗುಣಮಟ್ಟದ, ಪೌಷ್ಟಿಕ ಆಹಾರ ಪೂರೈಕೆಗೆ ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದರು.

ನಾವೀನ್ಯತಾ ಸೃಷ್ಟಿ ಸಮಾರೋಪದಲ್ಲಿ ಸಚಿವೆ ಕರಂದ್ಲಾಜೆ ಅಭಿಮತ

ಯುವಶಕ್ತಿ ಭಾರತದ ಅಭಿವೃದ್ಧಿಯ ಎಂಜಿನ್

• **ಧಾರವಾಡ:** ಯುವಶಕ್ತಿ ದೇಶದ ಅಭಿವೃದ್ಧಿ ಎಂಜಿನ್. ನಾವೀನ್ಯತೆ, ತಂತ್ರಜ್ಞಾನದ ಸದ್ಬಳಕೆ, ಜಾಗತಿಕ ಮಟ್ಟದಲ್ಲಿ ಭಾರತ ಅಗ್ರಸ್ಥಾನಕ್ಕೆ ಏರಬೇಕು ಎಂದು ಕೇಂದ್ರ ಕಾರ್ಮಿಕ ಇಲಾಖೆಯ ರಾಜ್ಯ ಖಾತೆ ಸಚಿವೆ ಶೋಭಾ ಕರಂದ್ಲಾಜೆ ಸಲಹೆ ನೀಡಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನಗರದ ಅಭಿಯಾಂತ್ರಿಕ-ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮೂರು ದಿನ ನಡೆದ ರಾಜ್ಯಮಟ್ಟದ ನಾವೀನ್ಯತಾ ಸೃಷ್ಟಿ-2026 ಕಾರ್ಯಕ್ರಮದಲ್ಲಿ ಗುರುವಾರ ಸಮಾರೋಪ ಭಾಷಣ ಮಾಡಿದರು.

ನಾವೀನ್ಯತೆಗೆ ಒತ್ತು: ಸಂಶೋಧನೆಗಳು ಕೇವಲ ಪ್ರಯೋಗಾಲಯಕ್ಕೆ ಸೀಮಿತ ಆಗದೆ ಸಾಮಾನ್ಯ ಜನರ ಸಮಸ್ಯೆಗಳಿಗೆ ಪರಿಹಾರ ನೀಡುವಂತಿರಬೇಕು. ಕೃಷಿ, ರಕ್ಷಣೆ, ಕೈಗಾರಿಕಾ ವಲಯಗಳಲ್ಲಿ, ಸ್ಥಳೀಯ ತಂತ್ರಜ್ಞಾನಕ್ಕೆ ಒತ್ತು ನೀಡಬೇಕಿದೆ ಎಂದರು.

ಆತ್ಮನಿರ್ಭರ ಭಾರತ: ಪ್ರಧಾನಿ ಮೋದಿ ಅವರ "ಆತ್ಮನಿರ್ಭರ ಭಾರತ"ದ ಕನಸನ್ನು ನನಸು ಮಾಡಲು ಎಂಜಿನಿಯರಿಂಗ್ ವಿದ್ಯಾರ್ಥಿಗಳ ಕೊಡುಗೆ ಅಪಾರ. ಹೊಸ ಆಲೋಚನೆಗಳಿಗೆ ಸರ್ಕಾರ ಸ್ಟಾರ್ಟ್‌ಅಪ್ ಮೂಲಕ ವೇದಿಕೆ ಕಲ್ಪಿಸುತ್ತಿದೆ ಎಂದು ತಿಳಿಸಿದರು.



> ತಂತ್ರಜ್ಞಾನವು ಮನುಷ್ಯನ ಜೀವನ ಸುಲಭಗೊಳಿಸುವ ಜತೆಗೆ ನಾವೀನ್ಯತೆಗಳು ಗ್ರಾಮೀಣ ಭಾರತದ ಸಬಲೀಕರಣಕ್ಕೂ ಪೂರಕವಾಗಿರಬೇಕು. ಶೈಕ್ಷಣಿಕ ಸಂಸ್ಥೆ ಮತ್ತು ಉದ್ಯಮಗಳ ನಡುವೆ ಸಮನ್ವಯ ಸಾಧಿಸಿದಾಗ ಹೊಸ ನಾವೀನ್ಯತೆಗಳು ಮಾರುಕಟ್ಟೆಗೆ ಬರಲು ಸಾಧ್ಯ.
>
> ■ **ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ**

ಶೈಕ್ಷಣಿಕ ಪರಂಪರೆ: ಧಾರವಾಡವು ವಿದ್ಯಾಕಾಶಿಯಾಗಿದ್ದು, ಇಲ್ಲಿನ ಎಸ್‌ಡಿಎಂ ಶಿಕ್ಷಣ ಸಂಸ್ಥೆಯು ಗುಣಮಟ್ಟದ ಶಿಕ್ಷಣ ಮತ್ತು ಸಂಶೋಧನೆಗೆ ಮಾದರಿ. ವಿಕಸಿತ ಮತ್ತು ಆತ್ಮನಿರ್ಭರ ಭಾರತಕ್ಕೆ ಪೂರಕ ಶಿಕ್ಷಣ ನೀಡುತ್ತಿರುವುದಾಗಿಯೂ ಶೋಭಾ ಶ್ಲಾಘಿಸಿದರು. ಧಾರವಾಡ ಐಐಐಟಿ ನಿರ್ದೇಶಕ ಡಾ.ಮಹಾದೇವ ಪ್ರಸನ್ನ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಹೊಸ ಆಲೋಚನೆಗಳಿಗೆ ಹೆಚ್ಚಿನ ಬೆಲೆ ಎಂದರು.

ಅತ್ಯುತ್ತಮ ಮಾದರಿಗಳಿಗೆ ಪ್ರಶಸ್ತಿ

ಮೂರು ದಿನ ನಡೆದ ಸೃಷ್ಟಿ ನಾವೀನ್ಯತಾ ರಾಜ್ಯಮಟ್ಟದ ಈ ಮೇಳದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡು ತಮ್ಮ ನಾವೀನ್ಯತೆ ಪ್ರದರ್ಶಿಸಿದರು. ಅಲ್ಲದೇ, ಅತ್ಯುತ್ತಮ ಮಾದರಿಗಳಿಗೆ ಸಚಿವರು ಪ್ರಶಸ್ತಿ ನೀಡಿ ಗೌರವಿಸಿದರು.

ಅಭಿವೃದ್ಧಿ ಹೆಜ್ಜೆ ಇರಿಸಿ: ಎಬಿವಿಪಿ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಬಾಲಕೃಷ್ಣ ಮಾತನಾಡಿ, ಪ್ರತಿಭೆಗಳು ಗುರುತಿಸುವ ತಾಣವಾಗಿಯೂ ಸೃಷ್ಟಿ ಬೆಳೆದಿದೆ ಎಂದರು. ಎಸ್‌ಡಿಎಂ ಸೊಸೈಟಿ ಕಾರ್ಯದರ್ಶಿ ವಿ.ಜೀವಂಧರಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಡಾ.ರಮೇಶ ಚಕ್ರಸಾಲಿ, ಸೃಷ್ಟಿ ಸಂಚಾಲಕ ದರ್ಶನ್ ವಿ., ದರ್ಶನ ಹೆಗಡೆ, ಡಾ.ಬಸವರಾಜ ಕುಬಗಟ್ಟಿ, ವಿಜಯಲಕ್ಷ್ಮೀ ಮಾನೆ, ಪ್ರೊ.ಇಂದಿರಾ ಉಮರ್ಜಿ ಇದ್ದರು.

ಸಚಿವ ಶರಣಪ್ರಕಾಶ ಪಾಟೀಲ್ ವಿರುದ್ಧ ನಿಖಿಲ್ ಕುಮಾರಸ್ವಾಮಿ ಕಿಡಿ

ಮಹಿಳಾ ಮೀಸಲಾತಿ ಬಿಲ್‌ಗೆ ಕೈ ವಿರೋಧ

• **ಕಲಬುರಗಿ:** ಹಿಂದೆ ಮೂರು ಬಾರಿ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ್ ತಮ್ಮ ಸ್ವಂತ ಕ್ಷೇತ್ರ ಸೇಡಂಗೆ ಒಂದು ಸುಸಜ್ಜಿತ ಸರ್ಕಾರಿ ಆಸ್ಪತ್ರೆ ನಿರ್ಮಾಣ ಮಾಡಲು ಸಾಧ್ಯವಾಗಿಲ್ಲ, ಇಲ್ಲಿನ ಜನರು ತುರ್ತು ಚಿಕಿತ್ಸೆಗೆ ಕಲಬುರಗಿ ಅಥವಾ ಹೈದರಾಬಾದ್‌ಗೆ ಹೋಗಬೇಕಾದ ದುಸ್ಥಿತಿ ಇದೆ. ಜನರ ಆರೋಗ್ಯಕ್ಕಿಂತ ಇವರಿಗೆ ರಾಜಕೀಯವೇ ಮುಖ್ಯವಾಗಿದೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದರು.

ಜಿಲ್ಲೆಯ ಸೇಡಂ ತಾಲೂಕಿನ ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಆದೇಶ ನೀಡಿದರೂ, ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುತ್ತಿಲ್ಲ. ಒಂದಲ್ಲ ಒಂದು ಸಬೂಬು ಹೇಳಿ ಚುನಾವಣೆಯನ್ನು ಮುಂದೂಡುತ್ತಲೇ ಬಂದಿದೆ. ಚುನಾವಣೆ ನಡೆಯದೆ ಇರುವುದರಿಂದ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಮಟ್ಟದಲ್ಲಿ ಅಭಿವೃದ್ಧಿ ಕೆಲಸಗಳು ಸಂಪೂರ್ಣ ಸ್ಥಗಿತಗೊಂಡಿವೆ. ಜೆಡಿಎಸ್ ಈ ಕೂಡಲೇ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವಂತೆ ಸರ್ಕಾರವನ್ನು ಒತ್ತಾಯಿಸುತ್ತದೆ ಎಂದರು.



ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾಗ ರೈತರ ಸಂಪೂರ್ಣ ಸಾಲ ಮನ್ನಾ ಮಾಡಿ ಅನ್ನದಾತರ ನೆರವಿಗೆ ನಿಂತರು. ಆದರೆ, ಕಾಂಗ್ರೆಸ್ ಸರ್ಕಾರಕ್ಕೆ ಯಾವುದೇ ಒತ್ತಡ ಇಲ್ಲದಿದ್ದರೂ, ತಮ್ಮ ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್ತಿನಲ್ಲಿ ಪಾಸ್ ಮಾಡಲು ಮುಂದಾದಾಗ, ಕಾಂಗ್ರೆಸ್ ತಿರಸ್ಕರಿಸಿದೆ. ಈಗ ಮಹಿಳೆಯರಿಗೆ ತಿಂಗಳಿಗೆ 2,000 ರೂ. ಕೊಟ್ಟು ಸಬಲೀಕರಣ ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಮಹಿಳೆಯರನ್ನು ನಿಜವಾಗಿ ಸಬಲೀಕರಣಗೊಳಿಸಿದವರು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು. ಅವರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮಹಿಳೆಯರಿಗೆ 50% ಮೀಸಲಾತಿ ಜಾರಿಗೆ ತಂದು, ಗ್ರಾಮ ಪಂಚಾಯಿತಿಯಿಂದ ಲೋಕಸಭೆಯವರೆಗೆ ಮಹಿಳೆಯರು ನಾಯಕತ್ವ ವಹಿಸಲು ದಾರಿ ಮಾಡಿಕೊಟ್ಟರು ಎಂದರು.

ಕೋರ್ ಕಮಿಟಿ ಅಧ್ಯಕ್ಷ ಜಿ.ಕೆ ಕೃಷ್ಣಾರೆಡ್ಡಿ, ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್, ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ್, ರಾಜ ವೆಂಕಟಪ್ಪ ನಾಯಕ್, ಜಿಲ್ಲಾಧ್ಯಕ್ಷ ಬಾಲರಾಜ್ ಗುತ್ತೇದಾರ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಬೆಂಗಳೂರು
ಶುಕ್ರವಾರ, 1 ಮೇ 2026
ಸಂಪುಟ 33, ಸಂಚಿಕೆ 180, ಪುಟಗಳು 16+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕ್ಷಮೆಯಾಚಿಸಿದ ನೇಪಾಳ ಏರ್‌ಲೈನ್ಸ್ | ೧೨   ದೇಸಿ ತಂತ್ರಜ್ಞಾನಕ್ಕೆ ಉತ್ತೇಜನ | ೧೨   8,000 ಕೋಟಿ ಯೋಜನೆಗಳಿಗೆ ಶೀಘ್ರ ಚಾಲನೆ | ೧೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಹುಣ್ಣಿಮೆ, ನಕ್ಷತ್ರ: ಸ್ವಾತಿ

ದಿನದ ಮಾತು

ಅರ್ಹರ ಮುಂದೆ ಕೊಂಕಿಲ್ಲದ ತಪ್ಪೊಪ್ಪಿಗೆ, ಮತ್ತೆ ಮಾಡೆನೆಂಬ ಭರವಸೆ. ಇದೇ ನಿಜವಾದ ಪಶ್ಚಾತ್ತಾಪ.
▲ ಗಾಂಧೀಜಿ

ಬುದ್ಧ ಪೂರ್ಣಿಮೆ; ಕರುಣೆಯ ಸಾಕ್ಷಾತ್ಕಾರ
ಲೇಖನ
• ಸಿ. ಪಿ. ರಾಧಾಕೃಷ್ಣನ್
• ಪುಟ ೬

ಕಿರುಸುದ್ದಿ

ಇರಾನ್ ಕದನದಿಂದ ಪಾಕ್ ಆರ್ಥಿಕತೆಗೆ ಪೆಟ್ಟು: ಷರೀಫ್

• **ಇಸ್ಲಾಮಾಬಾದ್:** ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧವು ಕಳೆದ ಎರಡು ವರ್ಷಗಳಲ್ಲಿ ಪಾಕಿಸ್ತಾನ ಸಾಧಿಸಿದ ಆರ್ಥಿಕ ಪ್ರಗತಿಗೆ ಭಾರಿ ಹಿನ್ನಡೆ ಉಂಟುಮಾಡಿದೆ ಎಂದು ಪ್ರಧಾನಿ ಶೆಹಬಾಜ್ ಷರೀಫ್ ಬುಧವಾರ ತಿಳಿಸಿದ್ದಾರೆ. ಸಂಪುಟ ಸಭೆಯಲ್ಲಿ ಮಾತನಾಡಿದ ಷರೀಫ್, ಯುದ್ಧದ ಹಿನ್ನೆಲೆಯಲ್ಲಿ ಪಾಕ್‌ನ ತೈಲ ಆಮದು ವೆಚ್ಚ 300 ಮಿಲಿಯನ್ ಡಾಲರ್‌ನಿಂದ 800 ಮಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಇದು ದೇಶದ ಆರ್ಥಿಕತೆಯ ಮೇಲೆ ಹೆಚ್ಚಿನ ಒತ್ತಡ ಹೇರಿದೆ. ಪ್ರಸ್ತುತ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಪ್ರತಿದಿನ ಕಾರ್ಯಪಡೆಯೊಂದು ಪರಿಶೀಲನೆ ನಡೆಸುತ್ತಿದೆ ಎಂದು ಅವರು ವಿಚಿತಪಡಿಸಿದ್ದಾರೆ.

• ಪುಟ ೧೨
ಬಂಗಾಳ: ಬಿಜೆಪಿಗೆ ಐತಿಹಾಸಿಕ ಜಯ?
• ಪುಟ ೧೨
ಭಾರತ-ಇಟಲಿ ರಕ್ಷಣಾ ಸಹಯೋಗಕ್ಕೆ ಸಹಿ
• ಪುಟ ೧೨
ಅಮೆರಿಕನ್ನರಿಗೆ ಅರ್ಹ ಜಾಗ ಸಮುದ್ರದಾಳ: ಮೊಜ್ತಬಾ
• ಪುಟ ೧೨
ಸಶಸ್ತ್ರ ಪಡೆಗೆ ಸಾವಯವ ಪೂರಿತ ಆಹಾರ ಪೂರೈಕೆ
• ಪುಟ ೨
ಅಲಸಂಖ್ಯಾತರ ಕಾಲೊನಿಗಳ ಅಭಿವೃದ್ಧಿಗೆ 600 ಕೋಟಿ ರೂ.
• ಪುಟ ೨



ಗಂಗಾ ಎಕ್ಸ್‌ಪ್ರೆಸ್‌ವೇ: ಉ.ಪ್ರದೇಶದ ಸೇತು
• ಪುಟ ೧೨
ಸುದ್ದಿ ಸಮಗ್ರ

ಆರೋಗ್ಯ ಇಲಾಖೆ ಇಇ ಅಮಾನತು, ಬೌರಿಂಗ್ ಮುಖ್ಯಸ್ಥರಿಗೆ ನೋಟಿಸ್ | ತಲಾ 2 ಲಕ್ಷ ರೂ. ಪರಿಹಾರ ಘೋಷಿಸಿದ ಪ್ರಧಾನಿ

ಕಠಿಣ ಕ್ರಮಕ್ಕೆ ಆದೇಶ

• **ಬೆಂಗಳೂರು:** ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಗೋಡೆ ಕುಸಿದು ಏಳು ಜನರ ಸಾವಿಗೆ ಕಾರಣವಾಗಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಇಂಜಿನಿಯರಿಂಗ್ ವಿಭಾಗದ ಇಇ ಅಮಾನತಿಗೆ ಹಾಗೂ ಬೌರಿಂಗ್ ಆಸ್ಪತ್ರೆ ಮುಖ್ಯಸ್ಥರಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ಈ ನಡುವೆ ಮೃತರ ಕುಟುಂಬಕ್ಕೆ ಪ್ರಧಾನಿ ಸಂತಾಪ ಸೂಚಿಸಿದ್ದು, ತಲಾ ಎರಡು ಲಕ್ಷ ಪರಿಹಾರ ಘೋಷಣೆ ಮಾಡಿದ್ದಾರೆ.



ಬೌರಿಂಗ್ ದುರಂತ

ಭಾರೀ ಮಳೆಯಿಂದ ಬೌರಿಂಗ್ ಆಸ್ಪತ್ರೆ ದುರಂತದ ಹಿನ್ನೆಲೆಯಲ್ಲಿ ಗುರುವಾರ ವಿಧಾನ ಸೌಧದಲ್ಲಿ ಸಿಎಂ ಅಧ್ಯಕ್ಷತೆಯಲ್ಲಿ ಜಿಬಿಎ ಆಯುಕ್ತರುಗಳ ಸಭೆ ನಡೆಯಿತು. ಗೋಡೆಗೆ ಹಾನಿ ಆಗಲಿದೆ ಎಂದು ತಿಳಿದಿದ್ದರೂ ಕಾಮಗಾರಿ ನಡೆಯುವಾಗ ಮಣ್ಣು ಸುರಿದದ್ದು ಏಕೆ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಗೋಡೆಗೆ ಹಾನಿಯಾಗುವಂತೆ ಮಣ್ಣು ಸುರಿದದ್ದು ನೀವು ಏಕೆ ನೋಡಿಕೊಳ್ಳಲಿಲ್ಲ ಎಂದು ಆಸ್ಪತ್ರೆ ಮುಖ್ಯಸ್ಥರನ್ನು ಹಾಗೂ ಸಂಬಂಧಿಸಿದ ಇಂಜಿನೀಯರ್ ಅವರನ್ನು ಸಿಎಂ ಸಿದ್ದರಾಮಯ್ಯ ಅವರು ಪ್ರಶ್ನಿಸಿದರು.

ಬೌರಿಂಗ್ ಆಸ್ಪತ್ರೆ ಮುಖ್ಯಸ್ಥರಿಗೆ ನೋಟಿಸ್ ನೀಡಲು ಸೂಚಿಸಿದ ಮುಖ್ಯಮಂತ್ರಿಗಳು, ಬೆಂಗಳೂರಿನಲ್ಲಿ ಗುಂಡಿಗಳನ್ನು ಮುಚ್ಚಲು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದರು. ಬುಧವಾರ ಬೆಂಗಳೂರಿನಲ್ಲಿ ಉಂಟಾದ ಮಳೆಯಲ್ಲಿ ಸಾಕಷ್ಟು ಹಾನಿಯಾಗಿದ್ದು, 250ಕ್ಕೂ ಹೆಚ್ಚು ಮರಗಳು ಬಿದ್ದಿವೆ. ಏಳು ಜನ ಸಾವನ್ನಪ್ಪಿದ್ದಾರೆ. ಈಗಾಗಲೇ ಸತ್ತವರ ಕುಟುಂಬದವರಿಗೆ 5 ಲಕ್ಷ ಪರಿಹಾರ ಘೋಷಣೆ ಮಾಡಲಾಗಿದೆ.
➡ ಪುಟ ೭



ಸಿಎಂ ಸೂಚನೆಗಳು

- ರಾಜಕಾಲುವೆಗಳಲ್ಲಿ ಹೂಳು ತೆಗೆಯುವುದು
- ಪ್ರವಾಹ ಉಂಟಾಗದಂತೆ ಕ್ರಮ ತೆಗೆದುಕೊಳ್ಳುವುದು
- ಮಳೆಯಿಂದ ರಸ್ತೆಯಲ್ಲಿ ಬಿದ್ದಿರುವ ಕಸ, ರೆಂಬೆಗಳನ್ನು ತೆರವು ಮಾಡುವುದು
- ಅಂಡರ್‌ಪಾಸ್‌ಗಳಲ್ಲಿ ಮಳೆ ನೀರು ನಿಲ್ಲದಂತೆ ನೋಡಿಕೊಳ್ಳುವುದು
- ಜನ ಅಂಡರ್‌ಪಾಸ್ ಬಳಸದಂತೆ ಬ್ಯಾರಿಕೇಡ್ ಹಾಕುವುದು

ರಾಜ್ಯಾದ್ಯಂತ ಶಿಥಿಲ ಆಸ್ಪತ್ರೆ ಕಟ್ಟಡ ಪರಿಶೀಲನೆ

• **ಬೆಂಗಳೂರು:** ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯ ಎಲ್ಲ ಆಸ್ಪತ್ರೆಯ ಕಟ್ಟಡಗಳನ್ನು ಹಾಗೂ ಕಾಂಪೌಂಡ್ ಪರಿಶೀಲಿಸಿ ಅಧ್ಯಯನ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ್ ತಿಳಿಸಿದ್ದಾರೆ. ಮಳೆಯಿಂದ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದು 7 ಮಂದಿ ಮೃತಪಟ್ಟ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಬಳಿಕ ಮಾತನಾಡಿದ ಅವರು, ಬೌರಿಂಗ್ ಆಸ್ಪತ್ರೆ ದುರಂತದ ಕುರಿತು ಪಿಡಬ್ಲ್ಯುಡಿ ಇಲಾಖೆ ಮುಖ್ಯ ಇಂಜಿನೀಯರ್ ನೇತೃತ್ವದಲ್ಲಿ ತನಿಖೆ ನಡೆಸಲಾಗುತ್ತಿದೆ. ವರದಿ ಬಂದ ನಂತರ ಮುಂದಿನ ಕ್ರಮದ ಬಗ್ಗೆ ನಿರ್ಧರಿಸಲಾಗುವುದು ಎಂದು ಪಾಟೀಲ್ ತಿಳಿಸಿದರು.
➡ ಪುಟ ೭

ತನಿಖೆಗೆ ಆದೇಶಿಸಿದ ಸರ್ಕಾರ

ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿತ ಪ್ರಕರಣದ ತನಿಖೆಗೆ ಸರ್ಕಾರ ಆದೇಶಿಸಿದೆ. ಬೆಂಗಳೂರು ನಗರ ಜಿಲ್ಲಾಧಿಕಾರಿ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿದ್ದು, ಸರ್ಕಾರಕ್ಕೆ 7 ದಿನದೊಳಗಾಗಿ ತನಿಖೆ ನಡೆಸಿ ವರದಿ ನೀಡಲು ಸೂಚಿಸಿದೆ. ಈ ಸಮಿತಿಯಲ್ಲಿ ತಹಶೀಲ್ದಾರ್ ಹಾಗೂ ಪಿಡಬ್ಲ್ಯುಡಿ ಇಲಾಖೆಯ ನಿವೃತ್ತ ಮುಖ್ಯ ಇಂಜಿನಿಯರ್ ಸೇರಿದಂತೆ ಆರು ತಜ್ಞರ ನೇಮಕ ಮಾಡಲಾಗಿದೆ.

ಕುಟುಂಬಗಳಿಗೆ ಮೃತದೇಹ ಹಸ್ತಾಂತರ • ಪುಟ ೨

ಪ್ರಧಾನಿ ಮೋದಿ ಸಂತಾಪ

• **ಹೊಸದಿಲ್ಲಿ/ಬೆಂಗಳೂರು:** ಬೆಂಗಳೂರಿನಲ್ಲಿ ಬುಧವಾರ ಸಂಜೆ ಸುರಿದ ಭಾರೀ ಮಳೆಗೆ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಗೋಡೆ ಕುಸಿದು ದುರಂತ ಸಂಭವಿಸಿದ್ದು, ಘಟನೆಗೆ ಪ್ರಧಾನಿ ನರೇಂದ್ರ ಮೋದಿಯವರು ತೀವ್ರ ಸಂತಾಪ ಸೂಚಿಸಿದ್ದಾರೆ.
➡ ಪುಟ ೭

ಕೇಂದ್ರ ರೈಲ್ವೆ ಸಚಿವ ವೈಷ್ಣವ್ ಹಸಿರು ನಿಶಾನೆ

ಜಮ್ಮು-ಕಾಶ್ಮೀರಕ್ಕೆ ವಂದೇಭಾರತ್ ಸೇತು



• **ಶ್ರೀನಗರ:** ಜಮ್ಮುವನ್ನು ಕಾಶ್ಮೀರದೊಂದಿಗೆ ಸಂಪರ್ಕಿಸುವ ಪ್ರಥಮ ನೇರ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ಹಸಿರು ನಿಶಾನೆ ತೋರಿದರು. ಕಣಿವೆ ರಾಜ್ಯದ ದುರ್ಗಮ ಪ್ರದೇಶಗಳಾದ ಪೂಂಛ್, ರಾಜೌರಿ, ಉರಿ ವಲಯಗಳನ್ನು ದೇಶದ ರೈಲ್ವೆ ಜಾಲದೊಂದಿಗೆ ಜೋಡಿಸಲು ಆದ್ಯತೆ ನೀಡುವುದಾಗಿ ಸಚಿವರು ಇದೇ ಸಂದರ್ಭ ಆಶ್ವಾಸನೆ ನೀಡಿದರು.

ಮಹತ್ವಾಕಾಂಕ್ಷಿ ಉಧಮ್‌ಪುರ-ಶ್ರೀನಗರ-ಬಾರಾಮುಲ್ಲಾ ರೈಲ್ವೆ ಲಿಂಕ್ ಯೋಜನೆ ಪೂರ್ತಿಯಾದ ಬಗ್ಗೆ ಮಾಹಿತಿ ನೀಡಿ, ಪೂಂಛ್ ಮತ್ತು ರಾಜೌರಿ ವಲಯವನ್ನು ರಾಷ್ಟ್ರೀಯ ರೈಲ್ವೆ ಜಾಲದೊಂದಿಗೆ ಜೋಡಿಸುವ ಮತ್ತು ಉರಿ ವಲಯಕ್ಕೂ ರೈಲ್ವೆ ಲೈನ್ ವಿಸ್ತರಿಸುವ ಯೋಜನೆಗಳ ಬಗ್ಗೆ ವಿವರವಾದ ಯೋಜನಾ ವರದಿಗಳನ್ನು ಸಿದ್ಧಪಡಿಸಲಾಗಿದೆ ಎಂದು ಹೇಳಿದರು.

ಪೂಂಛ್ ಮತ್ತು ರಾಜೌರಿಯನ್ನು ರೈಲ್ವೆ ಜಾಲದೊಂದಿಗೆ ಜೋಡಿಸಲು ಆದ್ಯತೆ ನೀಡಲಿದ್ದೇವೆ. ಉರಿಗೂ ರೈಲು ಸೌಲಭ್ಯ ಕಲ್ಪಿಸುವ ಯೋಜನೆ ಕೈಗೆತ್ತಿಕೊಳ್ಳುತ್ತೇವೆ. ಈ ಯೋಜನೆಗಳಿಗೆ ಸಂಬಂಧಿತ ಡಿಪಿಆರ್‌ಗಳು ಸಿದ್ಧವಾಗಿದ್ದು, ಆದಷ್ಟು ಶೀಘ್ರ ಕಾಮಗಾರಿ ಶುರು ಮಾಡಲು ಪ್ರಯತ್ನಿಸುತ್ತೇವೆ ಎಂದವರು ವಂದೇ ಭಾರತ್ ರೈಲು ಉದ್ಘಾಟನೆ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದರು.



ರೈಲ್ವೆ ಸೇವೆ ಮಹತ್ತ್ವದ ಮೈಲಿಗಲ್ಲು

ಜಮ್ಮು-ಶ್ರೀನಗರ ವಂದೇ ಭಾರತ್ ಎಕ್ಸ್‌ಪ್ರೆಸ್ ಒಂದು ಮಹತ್ತ್ವದ ಮೈಲಿಗಲ್ಲಿನ ಸಾಧನೆಯಾಗಿದೆ ಮತ್ತು ಜಮ್ಮು ಕಾಶ್ಮೀರದ ಜೀವನಾಡಿಯಾಗಿದೆ. ಜಮ್ಮು ಕಾಶ್ಮೀರದ ಜನರ ಪಾಲಿಗೆ ರೈಲ್ವೆ ಸೇವೆ ನಿಜಕ್ಕೂ ಮಹತ್ತ್ವದ ಮೈಲಿಗಲ್ಲು ಎಂದು ಸಚಿವ ಅಶ್ವಿನಿ ವೈಷ್ಣವ್ ಬಣ್ಣಿಸಿದರು.
➡ ಪುಟ ೭

ರಾಜಕೀಯ ಜೀವನದ 50 ವರ್ಷಗಳ ಪಯಣ

ಬಿಎಸ್‌ವೈ ಅಭಿಮಾನೋತ್ಸವ ಹಲವೆಡೆ ಪೂರ್ವಭಾವಿ ಸಭೆ



• **ತುಮಕೂರು/ಹಾವೇರಿ:** ಅಪ್ರತಿಮ ಹೋರಾಟಗಾರ, ರೈತ ನಾಯಕ, ಬಡವರ ಕಣ್ಮಣಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಜೀವನದ 50 ವರ್ಷಗಳ ಪಯಣ ಪೂರೈಸಿದ ಶುಭ ಘಳಿಗೆಯಲ್ಲಿ ಬಿ.ಎಸ್.ವೈ. ಅವರ ಅಭಿಮಾನೋತ್ಸವವನ್ನು ನಡೆಸಲಾಗುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ತುಮಕೂರಿನ ಸ್ನೇಹಸಂಗಮ ಬ್ಯಾಂಕ್ ಸಭಾಂಗಣದಲ್ಲಿ ಗುರುವಾರ ನಡೆದ ಅಭಿಮಾನೋತ್ಸವದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಯಡಿಯೂರಪ್ಪ ಅವರು ಕರ್ನಾಟಕದಲ್ಲಿ ಹೋರಾಟಕ್ಕೆ ಮತ್ತೊಂದು ಹೆಸರು ಎಂದು ಅವರು ವಿಶ್ಲೇಷಿಸಿದರು. ಪರಿಶ್ರಮ, ಛಲಕ್ಕೆ ಅವರು ಹೆಸರು ಪಡೆದವರು. ಬಡವರು, ಶೋಷಿತ- ಪೀಡಿತರು, ರೈತರ ಪರವಾಗಿ ಅವರ ಧ್ವನಿಯಾಗಿ 5 ದಶಕಗಳಿಂದ ನಿರಂತರವಾಗಿ ಕೆಲಸ ಮಾಡಿದ್ದಾರೆ ಎಂದು ನುಡಿದರು.
➡ ಪುಟ ೭

ಹುಕ್ಕೇರಿ ಶ್ರೀಗಳಿಗೆ ಸಂಸದ ರಾಘವೇಂದ್ರ ಆಹ್ವಾನ

• **ಹಾವೇರಿ:** ಜಿಲ್ಲೆಯ ಸುಪ್ರಸಿದ್ಧ ಧಾರ್ಮಿಕ ಮತ್ತು ದಾಸೋಹ ಕೇಂದ್ರವಾದ ಹುಕ್ಕೇರಿ ಮಠಕ್ಕೆ ಗುರುವಾರ ಸಂಸದ ರಾಘವೇಂದ್ರ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಭೇಟಿ ನೀಡಿ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಮಠದ ಪೀಠಾಧಿಪತಿಗಳಾದ ಪರಮ ಪೂಜ್ಯ ಸದಾಶಿವ ಶ್ರೀಗಳಿಗೆ ಆಹ್ವಾನ ನೀಡಿದರು.

ವಾರದೊಳಗೆ ಎತ್ತಿನಹೊಳೆ ಬಾಕಿ ಕಾಮಗಾರಿ: ಡಿಕೆಶಿ

• **ಬೆಂಗಳೂರು:** ಕೇಂದ್ರ ಪರಿಸರ ಇಲಾಖೆಯವರು ದಂಡ ಹಾಗೂ ಮಿಟಿಗೇಷನ್ ಪ್ಲಾನ್ ಸೇರಿ 257 ಕೋಟಿ ರೂ. ಹಣ ಸಂದಾಯ ಮಾಡಬೇಕು ಎಂದು ಸೂಚಿಸಿದ್ದಾರೆ. ತಕ್ಷಣವೇ ಈ ಹಣ ಪಾವತಿ ಮಾಡಿ ಎಂದು ನಿರ್ದೇಶಿಸಿದ್ದೇನೆ. ಈ ವಾರದೊಳಗೆ ಎತ್ತಿನಹೊಳೆ ಕೆಲಸ ಪ್ರಾರಂಭ ಮಾಡಿ ಎಂದು ಗುತ್ತಿಗೆದಾರರಿಗೆ ಸೂಚಿಸಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.



ಎತ್ತಿನಹೊಳೆ, ಮೇಕೆದಾಟು, ಭದ್ರಾ, ಮೇಲ್ದಂಡೆ ವಿಚಾರವಾಗಿ ವಿಧಾನಸೌಧದಲ್ಲಿ ಗುರುವಾರ ನಡೆದ ಸಭೆಯ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಎತ್ತಿನಹೊಳೆ ಯೋಜನೆಗೆ ಕೇಂದ್ರ ಪರಿಸರ ಇಲಾಖೆಯವರು ಒಂದಷ್ಟು ಷರತ್ತುಗಳನ್ನು ವಿಧಿಸಿ ಕಡತವನ್ನು ವಾಪಸ್ ಕಳುಹಿಸಿದ್ದರು. ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಬದಲಿ ಭೂಮಿಯನ್ನು ಹಸ್ತಾಂತರ ಮಾಡಲಾಗುತ್ತಿದೆ. ಶೇ.10ರಷ್ಟು ಭೂಮಿ ವರ್ಗಾವಣೆ ಬಾಕಿಯಿತ್ತು. ಮುಂದಿನ ಒಂದು ವಾರದೊಳಗೆ ಈ ಪ್ರಕ್ರಿಯೆ ನಡೆಯಲಿದೆ ಎಂದರು.
➡ ಪುಟ ೭

ಎಲ್ಲಾ ಭಾರತೀಯರದ್ದೂ ಮಹಾದೇವನ ಡಿಎನ್‌ಎ

- ಜಾಮಿಯಾ ಉಪಕುಲಪತಿ ಹೇಳಿಕೆಗೆ ಬಿಜೆಪಿ ಬೆಂಬಲ
- ವಿಭಜನಕಾರಿ ಮಾತಲ್ಲ, ದೇಶ ಒಗ್ಗೂಡಿಸುವ ಹೇಳಿಕೆ: ಮಾಳವೀಯ

• **ಹೊಸದಿಲ್ಲಿ:** ಎಲ್ಲಾ ಭಾರತೀಯರ ಡಿಎನ್‌ಎಗೂ ಭಗವಾನ್ ಮಹಾದೇವನೊಂದಿಗೆ ಸಂಬಂಧವಿದೆ ಎಂಬ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ಉಪ ಕುಲಪತಿ ಮಝೂರ್ ಆಸಿಫ್ ಹೇಳಿಕೆಯನ್ನು ಬಿಜೆಪಿ ಬೆಂಬಲಿಸಿದೆ. ಭಾರತೀಯ ಜನತಾ ಪಕ್ಷ, ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ಕುಲಪತಿ ಮಝೂರ್ ಆಸೀಫ್ ಅವರ ಮಹಾದೇವನ ಡಿಎನ್‌ಎ ಕುರಿತಾದ ಹೇಳಿಕೆಯನ್ನು ಬೆಂಬಲಿಸಿದ್ದು, ಇದು ನಾಗರಿಕತೆಯ ರೂಪಕವೇ ಹೊರತು ವಿಭಜನೆಯ ಮಾತಲ್ಲ, ಬದಲಾಗಿ ಇದು ದೇಶ ಒಗ್ಗೂಡಿಸುವ ಹೇಳಿಕೆ ಎಂದು ಗುರುವಾರ ಹೇಳಿದೆ.



ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಹೇಳಿಕೆ: ರಾಷ್ಟ್ರೀಯ ಸ್ವಯಂಸೇವಕ ಸಂಘದ 100ನೇ ವರ್ಷಾಚರಣೆ ಅಂಗವಾಗಿ ಮಂಗಳವಾರ ಆಯೋಜಿಸಲಾಗಿದ್ದ ಯುವ ಕುಂಭ ಕಾರ್ಯಕ್ರಮದಲ್ಲಿ ಆಸೀಫ್ ಮಾತನಾಡಿದ್ದರು.
➡ ಪುಟ ೭

ಆರು ಕೊಲೆ ಅಪರಾಧಿಗಳಿಗೆ ಮರಣದಂಡನೆ

ಬಿಜೆಪಿ ಮುಖಂಡ ವೆಂಕಟೇಶ ಕುರುಬರ ಹತ್ಯೆ ಪ್ರಕರಣ

• **ಕೊಪ್ಪಳ:** ಬಿಜೆಪಿ ಮುಖಂಡ ವೆಂಕಟೇಶ ಕುರುಬರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಒಂದನೇ ಹೆಚ್ಚುವರಿ ಸತ್ರ ನ್ಯಾಯಾಲಯವು ಮಹತ್ವದ ತೀರ್ಪು ನೀಡಿದ್ದು, ಹತ್ಯೆ ಪ್ರಕರಣದಲ್ಲಿ ದೋಷಿಗಳೆಂದು ಸಾಬೀತಾದ 6 ಮಂದಿಗೆ ನ್ಯಾಯಾಲಯವು ಗಲ್ಲು ಶಿಕ್ಷೆ ವಿಧಿಸಿ ಗುರುವಾರ ಆದೇಶ ಹೊರಡಿಸಿದೆ.



➡ ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,60,000(2,55,000) ಅಪರಂಜಿ ಚಿನ್ನ: 1,50,930(1,37,900) ಆಭರಣ ಚಿನ್ನ: 1,38,350(1,12,830) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) | ಷೇರು ಸೂಚ್ಯಂಕ ಬಿಎಸ್‌ಇ 76,886 (416↓) ಎನ್‌ಎಸ್‌ಇ 23,995 (97↓) | $1 = ₹94.26

IN THE COURT OF THE HONBLE CIVIL JUDGE AT BANGARPET
C.M.C.NO. 315/2026

Petitioners: 1. Rantnamma, 78 years, H/o. late. Venkatanareppa, 2. Gayitri. 38 Years, D/O Late. Venkatanareppa 3. Venkataramaiah. V. 45 years, S/o Late Venkatanareppa, All are residing at Chalaganahalli Village, Bangarpet Taluk.

V/S

Respondent: The Tahsildar/Birth and death Registrar, The Birth and death office, Taluk Office, Bangarpet.

PUBLIC NOTICE

Whereas the above named petitioners have filed a petition against the respondent for the relief of getting the death certificate of petitioner no.1 husband Venkatanareppa S/o late Venkataramaiah, Chalaganahalli Village, Bangarpet Taluk as on 22-04-2004. and were filed case before Hon'ble Addl, Civil judge and JMFC,Bangarpet. If any body interested parties are hereby to appear and contest above matter before this court in person or by pleader duly instructed as on 02-07-2026 at 11.00 clock in the above case failing wherein, the matter will be heard and decided ex-parte. Given under my hand and seal of the Court on 29th April, 2026.

By order of the court: Chief Ministerial Officer, Civil Judge & J.M.F.C Court, Bangarpet.
Advocate: V.S. Venugopal, Advocate and Notary, Bangarpet.

IN THE COURT OF THE HON'BLE CIVIL JUDGE AT BANGARPET
C.M.C.NO 314/2026

Petitioners: 1. Narayanappa, 50 years, S/o, late. Muniyappa, 2. Hanumakka, 55 years, D/o. Muniyappa, 3. Gowramma, 53 years, H/o. late Manjunath, 4. Ganesh, M. 32 years, S/o. late Manjunath, 5. Venkataratnamma, age 41 years, H/o. late Srinivas. 6. Abhishek.S. 23 years, S/o, late Srinivas. 7. Madhu.S. age 21 years, S/o, late. Srinivas. All are residing at Chalaganahalli Village, Bangarpet Taluk.

V/S

Respondent: The Tahsildar/Birth and death Registrar, The Birth and death office, Taluk Office, Bangarpet.

PUBLIC NOTICE

Whereas the above named petitioners have filed a petition against the respondent for the relief of getting the death certificate of petitioner no.1's grand father Venkataramaiah S/o late Doddaramaiah, Chalaganahalli Village, Bangarpet Taluk as on 28-06-1981 and were filed case before Hon'ble Addl, Civil judge and JMFC, Bangarpet. If any body interested parties are hereby to appear and contest above matter before this court in person or by pleader duly instructed as on 02-07-2026 at 11.00 clock in the above case, failing wherein, the matter will be heard and decided ex-parte Given under my hand and seal of the Court on 29th April 2026.

By order of the court: Chief Ministerial Officer, Civil Judge & J.M.F.C Court, Bangarpet.
Advocate: V.S. Venugopal, Advocate and Notary, Bangarpet. Ph: 9449675609

IN THE COURT OF THE 5th ADDITIONAL DISTRICT AND SESSIONS JUDGE AT TIPTUR
P & SC No : 10008/2026.

BETWEEN : Mokshith.M. S/o K.S.Kavitha, Hindu, Aged about 12 years, Represented by his minor guardian, i.e. his mother by name K.S.Kavitha Resident of Bommenahalli village, Kasaba Hobli, Tiptur Taluk. ..... Petitioner

V/s

Nil ..... Respondent

PAPER PUBLICATION

Whereas the above named has made petition to this Court Under Order and 275 of the Indian Succession Act for the grant of Probate Certificate in favour of the Petitioner, in respect of schedule mentioned below. That one Thimmaiah S/o late Venkataiah was executed the registered Will in favour of petitioner on 27-09-2022. That the said Thimmaiah was demised on 28/06/2023. Interested parties are hereby called to appear in this Court in person or by pleader duly instructed **on : 04-06-2026** at 11.00 a.m. informed to show cause against the petitioner failing wherein the appearance will be heard and declared as ex-parte/considered.

SCHEDULE

That the Land bearing Sy.No.32, total measuring 1.33.00 gts. Cultivated land is situated at Kattehalli village, Kibbanahalli Hobli, Tiptur Taluk bounded on East: Block No.4 and 5, West: Peddihalli Gadi, North: Conservency, South: Block No.2.

Given Under my hand with seal of Court, this dated 27/04/2026.

BY ORDER OF THIS COURT
Sheristedar,
5th Addl District and Sessions Judge Court At Tiptur.
Advocate for Petitioner : K.T.Chandrashekaraiah, Advocate, Tiptur
Place: Tiptur, Date: 27/04/2026

ಜಾಹೀರಾತಿಗಾಗಿ ಸಂಪರ್ಕಿಸಿ:
9845438807
9611755391

IN THE COURT OF THE FIFTH ADDITIONAL DISTRICT AND SESSIONS JUDGE AT TIPTUR.
P & S.C.No : 10019/2026.

Petitioner : Kumaraswamy. K.N S/o Nanjaiah, aged about 47 years, R/O Kallenahalli Village, Dugadahalli Post, Kasaba Hobli, Chikkanayakanahalli Taluk, Tumkur District.

V/s

Respondents : Nil.

Paper Publication

Whereas, the above named petitioner has filed a petition Under section 276 of Indian Succession Act before the Hon'ble Fifth Additional District and Sessions Judge, Tiptur seeking for grant of Probate in respect of the registered Will dated 13-05-2020 executed by the deceased Puttalingaiah in favour of the petitioner in respect of the schedule properties. In this regard, it is hereby notified that whoever is interested in this matter may come and join the case as respondents and appear in person or through an Advocate duly instructed, before the Hon'ble 5th Additional District & Sessions Judge Court, Tiptur **on : 12/06/2026** at 11:00 a.m. and in default, the matter will be heard and disposed off as Exparte.

SCHEDULE

1. Dry Land bearing Sy.no.158/2 measuring 1 acre, situated at Dabbeghatta Village, Kasaba Hobli, Chikkanayakanahalli Taluk, Tumkur District, bounded by, East - Bommalingaiah's land. West - Umeshaiah's land. North - Ninganna's land. South - Gurusiddaiah's land.
2. Dry Land bearing Sy.no.146/3 measuring 0-13 Guntaas, situated at Dabbeghatta Village, Kasaba Hobli, Chikkanayakanahalli Taluk, Tumkur District, bounded by - East - Rajegowda's land. West - Rajegowda's land. North - Lingadaiaiah's land. South - Ninganna's land.
3. Dry Land bearing Sy.no.146/1 measuring 0-05 Guntaas, situated at Dabbeghatta Village, Kasaba Hobli, Chikkanayakanahalli Taluk, Tumkur District, bounded by - East - Bommalingaiah's land. West - Rojegowda's land. North - Lingadaiaiah's land. South - Own Property in Sy.No.146/2.
4. Dry Land bearing Sy.no.338 measuring 0-30 Guntaas, situated at Dabbeghatta Village, Kasaba Hobli, Chikkanayakanahalli Taluk, Tumkur District, bounded by - East - Lakkanna's land. West - Nanjappa's land. North - Government Land. South - Doddaiah's land.
5. Garden Land bearing Sy.no.185/3 measuring 0-05 Guntaas, situated at Dabbeghatta Village, Kasaba Hobli, Chikkanayakanahalli Taluk, Tumkur District, bounded by - East - Marulasiddaiah's land. West - Marulasiddaiah's land. North - Kharabu Halla. South - Puttaiah & Doddaiah's land.
6. Garden Land bearing Sy.no.146/2 measuring 0-07 Guntaas, situated at Dabbeghatta Village, Kasaba Hobli, Chikkanayakanahalli Taluk, Tumkur District, bounded by - East - Bommalingaiah's land, West - Rojegowda's land. North - sy no.146/1 land. South - Lingadalaiah's land.

Given under my hand and the seal of the Court this 15th day of April 2026.

BY ORDER OF THIS COURT
SHERASTEDAR, V ADDL. DISTRICT AND SESSIONS COURT, TIPTUR.
Advocate for Petitioner : B. Satish.

IN THE COURT OF THE VIII ADDL. JUDGE COURT OF SMALL CAUSES AND ACJM AT BENGALURU (SCCH-05)
IA No.1/2026 IN S.C. No.14/2026

BETWEEN:
SAIRA BEGUM and Others
Rep. By her GPA Holder, Plaintiff no. 1 to 5
REHANA PARVEEN ...PLAINTIFFS
AND:
SMT. ANURADHA AND ANOTHER ...DEFENDANTS

SUMMONS/NOTICE TO DEFENDANT NO.1 AND DEFENDANT NO.2

1. ANURADHA, W/o. Lakki Narayana, Aged about 53 years, Residing at No. 4, North 7 A Cross, Neelasandra, Bengaluru-560047. ...DEFENDANT No.1
2. AAYESHA BEGUM, W/o Late Akbar Shariff, Aged about 40 years, Residing at No. 4, North 7 A Cross, Neelasandra, Bengaluru-560047. ...DEFENDANT No.2

Whereas the above named Plaintiffs have filed a suit against you for ejectment, recovery of arrears of rent and damages in respect of the Schedule A and B property situated at Neelasandra, Bengaluru, which is pending before this Hon'ble Court in S.C. No. 14/2026,

a) To direct the defendant No.1 to quit and vacate the schedule premises and also hand over the vacant portion of the schedule premises.
b) To direct the defendant No.1 to pay the arrears of the rent of Rs.93,000/- from March 2023 to December 2025 to the plaintiffs.
c) To direct the defendant No 1 to pay the future, damages of Rs.5,000/- per month from the date of filing is the above suit for illegally holding the schedule premises till handing over the possession of the suit property.
d) To direct the defendant to pay the cost and expenses of the suit of Rs.25,000/-.

You are hereby summoned to appear in this Court in person or by a pleader duly instructed and able to answer all material questions relating to the suit, or who shall be accompanied by some person able to answer all such questions on the **3rd day of June 2026 at 11:00 'O' Clock** in the forenoon to answer the suit and you are directed to produce on that day all the documents upon which you intend to rely in support of your defense.

Take notice that, in default of your appearance on the day before mentioned, the suit will be heard and determined in your absence.

Given under my hand the seal of the court this 27th day of April 2026.

'A' SCHEDULED PROPERTY

All the part and parcel of the residential property having four portions bearing No.4, measuring to an extent of East to West 40 Feet and North to South 40 Feet, situated at Parappa Field "A" Street, Neelasandra, 62nd Division, Bangalore-560 047 as bounded as follows: East by: Chadayappa's Lane, West by: Karapanna's House, North by: Parappa's Land, South by: Road

'B' SCHEDULE PROPERTY

Portion of the suit 'A' schedule property consisting one Hall, Bedroom and Kitchen, bearing No.4, measuring at 400 sq feet situated at Parappa Field "A" Street, Neelasandra, 62nd Division, Bangalore-560047.

By Order of the Court
Sd/- Assistant Registrar
VIII Addl. Judge Court of Small Causes and ACJM, At Bengaluru

Advocate for Plaintiff:
SRI. LAKSHMIKANTH. K, Advocate,
UNNATI LAW CHAMBERS,
No.13, 1st Floor, 12th Cross,
Banappa Park Road, Cubbonpet,
Bangalore - 560 002.

IN THE COURT OF THE VIII ADDL. JUDGE COURT OF SMALL CAUSES AND ACJM AT BENGALURU (SCCH-05)
IA No.1/2026 IN S.C. No.13/2026

BETWEEN:
SAIRA BEGUM and Others
Rep. By her GPA Holder, Plaintiff No. 1 to 5
REHANA PARVEEN ...PLAINTIFFS
AND:
SRI. SHIVANESH BABU AND ANOTHER ...DEFENDANTS

SUMMONS/NOTICE TO DEFENDANT NO.1 AND DEFENDANT NO.2

1. SRI. SHIVANESH BABU, S/o. Sri. A Raju, Aged about 51 years, Residing at No. 4, North 7 A Cross, Neelasandra, Bengaluru-560047. ...DEFENDANT No.1
2. AAYESHA BEGUM, W/o Late Akbar Shariff, Aged about 40 years, Residing at No. 4, North 7 A Cross, Neelasandra, Bengaluru-560047. ...DEFENDANT No.2

Whereas the above named Plaintiffs have filed a suit against you for ejectment, recovery of arrears of rent and damages in respect of the Schedule A and B property situated at Neelasandra, Bengaluru, which is pending before this Hon'ble Court in S.C. No. 13/2026,

a) To direct the defendant No.1 to quit and vacate the schedule premises and also hand over the vacant portion of the schedule premises.
b) To direct the defendant No.1 to pay the arrears of the rent of Rs.93,000/- from March 2023 to December 2025 to the plaintiffs.
c) To direct the defendant No 1 to pay the future, damages of Rs.5,000/- per month from the date of filing is the above suit for illegally holding the schedule premises till handing over the possession of the suit property.
d) To direct the defendant to pay the cost and expenses of the suit of Rs.25,000/-.

You are hereby summoned to appear in this Court in person or by a pleader duly instructed and able to answer all material questions relating to the suit, or who shall be accompanied by some person able to answer all such questions on the **3rd day of June 2026 at 11:00 'O' Clock** in the forenoon to answer the suit and you are directed to produce on that day all the documents upon which you intend to rely in support of your defense.

Take notice that, in default of your appearance on the day before mentioned, the suit will be heard and determined in your absence.

Given under my hand the seal of the court this 27th day of April 2026.

'A' SCHEDULED PROPERTY

All the part and parcel of the residential property having four portions bearing No.4, measuring to an extent of East to West 40 Feet and North to South 40 Feet, situated at Parappa Field "A" Street, Neelasandra, 62nd Division, Bangalore-560 047 as bounded as follows: East by: Chadayappa's Lane, West by: Karapanna's House, North by: Parappa's Land, South by: Road

'B' SCHEDULE PROPERTY

Portion of the suit 'A' schedule property consisting one Hall, Bedroom and Kitchen, bearing No.4, measuring at 400 sq feet situated at Parappa Field "A" Street, Neelasandra, 62nd Division Bangalore - 560047.

By Order of the Court
Sd/- Assistant Registrar
VIII Addl. Judge Court of Small Causes and ACJM, At Bengaluru

Advocate for Plaintiff:
SRI. LAKSHMIKANTH. K, Advocate,
UNNATI LAW CHAMBERS,
No.13, 1st Floor, 12th Cross,
Banappa Park Road, Cubbonpet,
Bangalore - 560 002.

IN THE COURT OF THE VIII ADDL. JUDGE COURT OF SMALL CAUSES AND ACJM AT BENGALURU (SCCH-05)
IA No.1/2026 IN S.C. No.12/2026

BETWEEN:
SAIRA BEGUM and Others
Rep. By her GPA Holder, Plaintiff No. 1 to 5
REHANA PARVEEN ...PLAINTIFFS
AND:
SRI. JOHN MELVIN AND ANOTHER ...DEFENDANTS

SUMMONS/NOTICE TO DEFENDANT NO.1 AND DEFENDANT NO.2

1. ANTHONY DAS, S/o Sri A Raju, Aged about 51 years, Residing at No. 4, North 7 A Cross, Neelasandra, Bengaluru-560047. ...DEFENDANT No.1
2. AAYESHA BEGUM, W/o Late Akbar Shariff, Aged about 40 years, Residing at No. 4, North 7 A Cross, Neelasandra, Bengaluru-560047. ...DEFENDANT No.2

Whereas the above named Plaintiffs have filed a suit against you for ejectment, recovery of arrears of rent and damages in respect of the Schedule A and B property situated at Neelasandra, Bengaluru, which is pending before this Hon'ble Court in S.C. No. 12/2026,

a) To direct the defendant No.1 to quit and vacate the schedule premises and also hand over the vacant portion of the schedule premises.
b) To direct the defendant No.1 to pay the arrears of the rent of Rs.1,12,000/- from March 2023 to December 2025 to the plaintiffs.
c) To direct the defendant No 1 to pay the future, damages of Rs.5,000/- per month from the date of filing is the above suit for illegally holding the schedule premises till handing over the possession of the suit property.
d) To direct the defendant to pay the cost and expenses of the suit of Rs.25,000/-.

You are hereby summoned to appear in this Court in person or by a pleader duly instructed and able to answer all material questions relating to the suit, or who shall be accompanied by some person able to answer all such questions on the **3rd day of June 2026 at 11:00 'O' Clock** in the forenoon to answer the suit and you are directed to produce on that day all the documents upon which you intend to rely in support of your defense.

Take notice that, in default of your appearance on the day before mentioned, the suit will be heard and determined in your absence.

Given under my hand the seal of the court this 27th day of April 2026.

'A' SCHEDULED PROPERTY

All the part and parcel of the residential property having four portions bearing No.4, measuring to an extent of East to West 40 Feet and North to South 40 Feet, situated at Parappa Field "A" Street, Neelasandra, 62nd Division, Bangalore-560 047 as bounded as follows: East by: Chadayappa's Lane, West by: Karapanna's House, North by: Parappa's Land, South by: Road

'B' SCHEDULE PROPERTY

Portion of the suit 'A' schedule property consisting one Hall, Bedroom and Kitchen, bearing No.4, measuring at 400 sq feet situated at Parappa Field "A" Street, Neelasandra, 62nd Division, Bangalore - 47.

By Order of the Court
Sd/- Assistant Registrar
VIII Addl. Judge Court of Small Causes and ACJM, At Bengaluru

Advocate for Plaintiff:
SRI. LAKSHMIKANTH. K, Advocate,
UNNATI LAW CHAMBERS,
No.13, 1st Floor, 12th Cross,
Banappa Park Road, Cubbonpet,
Bangalore - 560 002.

:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಕಂದಾಯ ಭವನ, 3ನೇ ಮಹಡಿ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ-562159.
ದೂರವಾಣಿ: 7259198192. ಇ-ಮೇಲ್: gbbscpa@gmail.com.

ಸಂ.: GBDA/CLU/04/2026-27 ದಿನಾಂಕ: 28.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು "**ವ್ಯವಸಾಯ**" ವಲಯದಿಂದ "**ವಾಣಿಜ್ಯ**" ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಜಮೀನಿಗೆ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಆಯುಕ್ತರು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ರಾಮನಗರ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ-ಗು	ಅನುಮೋದಿತ ಮಹಾಯೋಜನೆ ಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಪ್ರಕಾಶ್ ಬಿನ್ ಲೇ|| ಕಾಡಯ್ಯ ಉರುಫ್ ಯಳವಯ್ಯ, ನಂ.60, ಹನುಮಂತನಗರ ಪೊನ್ನಮ್ಮ ಛತ್ರ ಎದುರು ರಸ್ತೆ, ರಾಮನಗರ ಟೌನ್, ರಾಮನಗರ-562159	ರಾಮನಗರ ತಾಲ್ಲೂಕು	ಕಸಬಾ-1 ಹೋಬಳಿ	ಹಳ್ಳಿಮಾಳ	204/24	0-28.12 ಗುಂಟೆ	ವ್ಯವಸಾಯ	ವಾಣಿಜ್ಯ
					ಒಟ್ಟು	0-28.12 ಗು		

ಷರಾ:- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವ್ಯವಸಾಯ ಮಾಡಲು ಸೂಕ್ತವಾಗಿರುವುದಿಲ್ಲ ಹಾಗೂ ಪರಿಸರದಲ್ಲಿ ವಾಣಿಜ್ಯ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನಿನ ಪರಿಸರದಲ್ಲಿ ವಾಣಿಜ್ಯ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಾಣಿಜ್ಯ ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ. ಅಲ್ಲದೇ ಪ್ರಸ್ತಾಪಿತ ಜಮೀನಿನಲ್ಲಿ ವಾಣಿಜ್ಯ ಬೆಳವಣಿಗೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು '**ವ್ಯವಸಾಯ**' ವಲಯದಿಂದ '**ವಾಣಿಜ್ಯ**' ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- **ನಗರ ಯೋಜಕ ಸದಸ್ಯರು**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ರಾಮನಗರ.
DIPR/BSD/39/SA/2025-26

ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಮಲ್ಲೇಶ್ವರಂ ವಲಯ, ಕಾರ್ಯಪಾಲಕ ಅಭಿಯಂತರರ ಕಛೇರಿ, ರಾಜಾಜಿನಗರ ವಿಭಾಗ, ಬಿಜಿನಾ ಕಟ್ಟಡ, ನಂ.161, 1ನೇ ಮಹಡಿ, 19ನೇ ಮುಖ್ಯರಸ್ತೆ, 2ನೇ ಬ್ಲಾಕ್, ಹಳೆ ಪವರಂಗ ಬಸ್ ನಿಲ್ದಾಣ ಹತ್ತಿರ, ರಾಜಾಜಿನಗರ, ಬೆಂಗಳೂರು-560010.

ಸಂಖ್ಯೆ: ಕಾಅ(ಆರ್‌ಎನ್‌ಆರ್)/ಕೆಪಿಪಿ/ಟೆಂಡರ್/01/2026-27 ದಿನಾಂಕ: 29-04-2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ - (ಐಎಫ್‌ಟಿ)
(ಒಂದು ಲಕೋಟೆ ಪದ್ಧತಿ) (ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಾಜಾಜಿನಗರ ವಿಭಾಗ, ಬೆಂಪನಪಾ, ಬೆಂಗಳೂರು ಇವರು ಕೆಳಕಂಡ ಕಾಮಗಾರಿಗಳಿಗೆ ಬಿಬಿಎಂಪಿಯಲ್ಲಿ ನೋಂದಾಯಿತ ಗುತ್ತಿಗೆದಾರರು ಅಥವಾ ಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ದರ್ಜೆಯಲ್ಲಿ ನೋಂದಾಯಿಸಿರುವ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. (**ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ - ಕೆಡಬ್ಲ್ಯು-1**)

ಕ್ರ ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ರಾಜಾಜಿನಗರ ಉಪ ವಿಭಾಗದ (ವಾರ್ಡ್ ಸಂಖ್ಯೆ 63, 64, 65, 66, 67 ಮತ್ತು 68) ರಲ್ಲಿ ನಾಲ್ಕು ತಿಂಗಳ ಅವಧಿಗೆ ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪನೆ. (ಬಿಡಿ). - **ಟೆಂಡರಿಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) (ರೂ. ಲಕ್ಷಗಳಲ್ಲಿ): 13.40, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 33,500/-**
2	ಶ್ರೀರಾಮ ಮಂದಿರ ಉಪ ವಿಭಾಗದ (ವಾರ್ಡ್ ಸಂಖ್ಯೆ 58, 59, 60, 61 ಮತ್ತು 62) ರಲ್ಲಿ ನಾಲ್ಕು ತಿಂಗಳ ಅವಧಿಗೆ ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪನೆ. (ಬಿಡಿ). - **ಟೆಂಡರಿಗಿಟ್ಟ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) (ರೂ. ಲಕ್ಷಗಳಲ್ಲಿ): 11.15, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 28,000/-**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ದಾಖಲೆಗಳನ್ನು ಜಿಟಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **02-05-2026** ರಂದು **17.30** ಗಂಟೆಯ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **07-05-2026**. 3) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: **11-05-2026** ರಂದು **17.00** ಗಂಟೆವರೆಗೆ. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **12-05-2026** ರಂದು **17.30** ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ರಾಜಾಜಿನಗರ ವಿಭಾಗ, ಮಲ್ಲೇಶ್ವರಂ ವಲಯ, ಬೆಂಪನಪಾ.

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು.

ಸಂ: ಕಾ.ಇಂ(ವಿ)/ಲೋ.ಇ/ವಿದ್ಯುತ್/2025-26/146 ದಿನಾಂಕ: 29.04.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗೆ KW-2 STD ಷರತ್ತುಗೊಳಪಟ್ಟಂತೆ, ಮೊದಲನೇ ಟೆಂಡರ್ ಕರೆಯನ್ನು ಕೆ.ಪಿ.ಪಿ.ಪಿ. ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಕಂಡಂತಿದೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)
1	Providing Street Light at KM 18.00 of Chitradurga SH 307 Kyadigere(NH 48) to Seebara Village near Service Road (NH-48) in Chitradurga Taluk. PWD/2025-26/EL/WORK_INDENT33403	Rs. 30.30

ಮೇಲಿನ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ **https://kppp.karnataka.gov.in**ನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: **29.04.2026** ರಿಂದ **13.05.2026, 16.00** ಗಂಟೆಯವರೆಗೆ ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ: **13.05.2026** ರಂದು **16.00** ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಸದರಿ ಟೆಂಡರ್ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ).
ವಾವಾಸಂಇ/ಉಪಿ-ಪಿ.ಪಿ/438/ಕೆಎಸ್‌ಎಂಸಿಎ/2026-27

ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ, ಗದಗ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ ಗದಗ ವಿಭಾಗ, ಗದಗ
Phone No: 08372-238782 Fax No. 08372-237268 E.Mail-eepwdgad@gmail.com
ಸಂ:ಕಾನಿಇಂ/ಲೋಇ/ಗವಿ- 1 2 4 5 /ವಿವಿಧ: 2026-27/339 ದಿನಾಂಕ: 30/04/2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **1198.15 ಲಕ್ಷ** ಮೊತ್ತದಲ್ಲಿ ಒಟ್ಟು 07 ಕಾಮಗಾರಿಗೆ (ಕನಿಷ್ಠ **ಮೊತ್ತ ರೂ: 1.15 ಲಕ್ಷ** ಹಾಗೂ ಗರಿಷ್ಠ **ಮೊತ್ತ ರೂ: 497.00 ಲಕ್ಷ**) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯು-1, 3, ಹಾಗೂ 4 ರ ಪ್ರಕಾರ ಪಟಿಂದಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.Karnataka.gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No:- Part-1 34863, 32754/Call-2, 32764/Call-2 -SC, 33839/Call-3 32777, 32778,
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕ:-05-05-2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:-07-05-2026 ಮಧ್ಯಾಹ್ನ 4.00** ಗಂಟೆಯ ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:-08-05-2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕ:-11-05-2026.**

Work Indent No:-Part-2 35306
ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ **ದಿನಾಂಕ:-16-05-2026** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:-18-05-2026 ಮಧ್ಯಾಹ್ನ 4.00** ಗಂಟೆಯ ವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:-19-05-2026.** ಆರ್ಥಿಕ ಬಿಡ್ ತೆರೆಯುವ **ದಿನಾಂಕ:-20-05-2026.**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗೇರಿ-1 ಹಾಗೂ ಕೆಟಗೇರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ , 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ, ಗದಗ
ವಾ.ಕ.ಸಂ.ಇ/ಗದಗ/46/ಕೆಎಸ್‌ಎಂಸಿಎ/2026-27

ಬೆಂಗಳೂರು ಪಶ್ಚಿಮ ನಗರ ಪಾಲಿಕೆ, ವಲಯ-1

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕೆಂಗೇರಿ ವಿಭಾಗ, ರಾಜರಾಜೇಶ್ವರಿನಗರ ವಲಯ, ಬೃ.ಬೆಂ.ಮ.ಪಾಲಿಕೆ ಕಛೇರಿ ಕಟ್ಟಡ, ಸಿಎ ನಂ-3, 1ನೇ ಮುಖ್ಯರಸ್ತೆ, ಹೊರವರ್ತುಲ ರಸ್ತೆ, ಕೊಮ್ಮಘಟ್ಟ ರಸ್ತೆ, ಕೆಂಗೇರಿ ಉಪನಗರ, ಬೆಂಗಳೂರು -560 060
ಸಂಖ್ಯೆ:ಬೆಂ.ಪ.ನ.ಪಾ/ಕಾಪಾಅ/ಕೆಂಗೇರಿ/ಟೆಂಡರ್/01/2026-27 ದಿನಾಂಕ:30.04.2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಅಲ್ಪಾವಧಿ ಟೆಂಡರ್ ಪ್ರಕಟಣೆ) (ಏಕಲಕೋಟೆ ಪದ್ಧತಿ) (1ನೇ ಕರೆ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ, ಬೆಂ.ಪ.ನ.ಪಾಲಿಕೆ ವಲಯ-1, ಇವರು ಆಯುಕ್ತರು ಬೆಂ.ಪ.ನ.ಪಾ, ವಲಯ-1, ಬೆಂಗಳೂರು ಇವರ ಪರವಾಗಿ ಅರ್ಹ ಟೆಂಡರುದಾರರಿಂದ ಈ ಕೆಳಗೆ ತಿಳಿಸಿರುವ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ದೊಡ್ಡಬಿದರಕಲ್ಲು ಉಪವಿಭಾಗದ ವಾರ್ಡ್ ಸಂಖ್ಯೆ-11, 12 & 13ರ ವ್ಯಾಪ್ತಿಗಳಲ್ಲಿ 2026-27ನೇ ಸಾಲಿಗೆ ಮುಂಗಾರು ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪಿಸುವುದು. **ಅಂದಾಜು ಮೊತ್ತ ರೂ.7.50 ಲಕ್ಷಗಳು, ಇಎಂಡಿ: ರೂ.18,750/-**
2	ಹೇರೋಹಳ್ಳಿ ಉಪವಿಭಾಗದ ವಾರ್ಡ್ ಸಂಖ್ಯೆ-14, 15, 16 & 17ರ ವ್ಯಾಪ್ತಿಗಳಲ್ಲಿ 2026-27ನೇ ಸಾಲಿಗೆ ಮುಂಗಾರು ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪಿಸುವುದು. **ಅಂದಾಜು ಮೊತ್ತ ರೂ.10.00 ಲಕ್ಷಗಳು, ಇಎಂಡಿ: ರೂ.25,000/-**
3	ಕೆಂಗೇರಿ ಉಪವಿಭಾಗದ ವಾರ್ಡ್ ಸಂಖ್ಯೆ-18, 19, 20 & 21ರ ವ್ಯಾಪ್ತಿಗಳಲ್ಲಿ 2026-27ನೇ ಸಾಲಿಗೆ ಮುಂಗಾರು ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪಿಸುವುದು. **ಅಂದಾಜು ಮೊತ್ತ ರೂ.10.00 ಲಕ್ಷಗಳು, ಇಎಂಡಿ: ರೂ.25,000/-**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಇ-ಪೋರ್ಟಲ್‌ನಲ್ಲಿ ದಿನಾಂಕ: **02.05.2026**ರ ಸಂಜೆ **4:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **11.05.2026**ರ ಸಂಜೆ **4:00** ಗಂಟೆಯವರೆಗೆ. (3) ಬಿಡ್‌ಗಳನ್ನು ದಿನಾಂಕ:**12.05.2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕೆಂಗೇರಿ ವಿಭಾಗ, ಬೆಂ.ಪ.ನ.ಪಾ ವಲಯ-1

ಕಾರ್ಯಪಾಲಕ ಇಂಜಿನಿಯರ್‌ರವರ ಕಾರ್ಯಾಲಯ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

(ಕರ್ನಾಟಕ ಸರ್ಕಾರ)

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:06/2026-27
ದಿನಾಂಕ:29.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ ಹಾಸನ ರವರು, ಬೇಲೂರು ಉಪ ವಿಭಾಗ ವ್ಯಾಪ್ತಿಯ 2023-24 ಮತ್ತು 2024-25 ನೇ ಸಾಲಿನ ಪಿ.ಎಂ.ಶ್ರೀ ಯೋಜನೆಯಡಿ INDENT NO: (1)RDPR/2026-27/BD/WORK_INDENT26387 ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಟೆಂಡರ್‌ಅನ್ನು ಇ-ಪ್ರೊಕ್ಯೂರ್‌ಮೆಂಟ್ ಅಡಿ KW-1ರ ರೀತ್ಯಾ ಅಂತರ್ಜಾಲದಲ್ಲಿ ದಿ: 29.04.2026 ರಿಂದ ದಿ:14.05.2026ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ:13.05.2026ರ ಸಂಜೆ 4.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿ:12.05.2026 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿ:15.05.2026 ಸಂಜೆ 4.05 ಗಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು ಹಾಗೂ ತಾಂತ್ರಿಕ ಬಿಡ್ಡು ಅನುಮೋದನೆ ಆದ ನಂತರ ಹಣಕಾಸು ಬಿಡ್ಡನ್ನು ತೆರೆಯಲಾಗುವುದು. ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್.ಇಂ. ವಿಭಾಗ, ಹಾಸನ.
ವಾಸಾಸಂಇ/ಹಾಸನ/81/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ.
No.EE/MID/VJP/AE-1/4702/TND/2026-27/287 Date: 27.04.2026.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ-ಪ್ರೊಕ್ಯೂರಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ.

4702 ಪ್ರಧಾನ ಕಾಮಗಾರಿಗಳು: (1) ವಿಜಯಪುರ ಜಿಲ್ಲೆ ಚಡಚಣ ತಾಲ್ಲೂಕಿನ ಕೊಂಕಣಗಾಂವ ಗ್ರಾಮದ ಬೋರಿ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ಸಹಿತ ಬ್ಯಾರೇಜ್ ನಿರ್ಮಾಣ ಕಾಮಗಾರಿ(3ನೇ ಕರೆ), ಟೆಂಡರಿಗಿಟ್ಟ ಮೊತ್ತ: **ರೂ.799.79ಲಕ್ಷ**, ಇ.ಎಂ.ಡಿ. ಮೊತ್ತ: **ರೂ.12,00,000-00, ಮೇಲಿನ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು (11) ತಿಂಗಳುಗಳು.**

4702 ಎಸ್.ಸಿ.ಪಿ. ಕಾಮಗಾರಿಗಳು: (1) ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕು ಮಣ್ಣೂರ ಮತ್ತು ನಾಗವಾಡ ಗ್ರಾಮದ ಪರಿಶಿಷ್ಟ ಜಾತಿಯ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಸುಧಾರಣೆಗಾಗಿ ಸರಣಿ ಬಾಂದಾರ/ಬ್ಯಾರೇಜ್/ಬಿಸಿಬಿ ನಿರ್ಮಾಣ ಕಾಮಗಾರಿ(**2ನೇ ಕರೆ**), ಟೆಂಡರಿಗಿಟ್ಟ ಮೊತ್ತ **ರೂ. 800.00ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು (11) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ-ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್ **https://kppp.karnataka.gov.in/#/portal/ portal-home** ನಲ್ಲಿ ಲಾಗಿನ್ ಆಗಿ **ದಿನಾಂಕ: 28.04.2026** ರಿಂದ Download ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್‌ಸೈಟ್‌ನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ್ ಮಾತ್ರ) "ಇ-ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್ **https://kppp.karnataka.gov.in/#/portal/ portal-home**ನಲ್ಲಿ ಲಾಗಿನ್ ಆಗಿ **ದಿನಾಂಕ: 06.05.2026ರ 17:30 ಘಂಟೆವರೆಗೆ** ಸ್ವೀಕರಿಸಲಾಗುವದು. **ದಿನಾಂಕ: 04.05.2026ರಂದು** ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ-ಬಿಡ್ ಸಭೆಯನ್ನುಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು **ದಿನಾಂಕ: 05.05.2026ರ 17:30 ಘಂಟೆವರೆಗೆ** ವಿಭಾಗ ಕಛೇರಿಯಲ್ಲಿ ಅಥವಾ "ಇ-ಪ್ರೋಕ್ಯುರಮೆಂಟ್" ಹೆಲ್ಪಡೆಸ್ಕ್‌ನಿಂದ (ಫೋನ್: 080-25501216 ಮತ್ತು 080-25501227) ಪಡೆಯಬಹುದು ಹಾಗೂ ಟೆಂಡರ್‌ಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/- ಕಾರ್ಯನಿರ್ವಾಹಕ ಇಂಜನೀಯರರು, ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ.
ವಾಸಸಂಇ/ವಿಜಯಪುರ/ಆರ್.ಓ.ಸಂಖ್ಯೆ 58/ಕೆಎಸ್‌ಎಂಸಿಎ/2026-27

ಅನಾರೋಗ್ಯಕ್ಕೊಳಗಾದ ತ್ಯಾಜ್ಯ ವಿಲೇವಾರಿ, ಕಟ್ಟಡ ಕಾರ್ಮಿಕರು

ಬಿರುಬಿಸಿಲಿನ ತಾಪಕ್ಕೆ ಬಳಲಿದ ಕಾರ್ಮಿಕರು

▸ ಮಹೇಶ್ ಹೆಗಡೆ

• **ಬೆಂಗಳೂರು:** ಒಂದು ಕಾಲದಲ್ಲಿ ತಂಪು ಹವಾಮಾನಕ್ಕೆ ಹೆಸರುವಾಸಿಯಾಗಿದ್ದ ಬೆಂಗಳೂರು, ಈಗ ಹೀಟ್ ಐಲ್ಯಾಂಡ್ ಆಗಿ ಬದಲಾಗಿದೆ. ತಾಪಮಾನದ ತೀವ್ರತೆ ಹೆಚ್ಚಾಗಿದೆ. ಹೆಚ್ಚುತ್ತಿರುವ ತಾಪಮಾನವು ಕೇವಲ ಅಂಕಿ-ಅಂಶಗಳ ಏರಿಕೆಯಾಗಿ ಮಾತ್ರ ಉಳಿದಿಲ್ಲ, ಬದಲಿಗೆ ನಗರದ ಲಕ್ಷಾಂತರ ಅಸಂಘಟಿತ ಕಾರ್ಮಿಕರ ಬದುಕಿನ ಮೇಲೆ ಬರೆ ಎಳೆಯುತ್ತಿದೆ.

ಇತ್ತೀಚಿನ ಸಮೀಕ್ಷೆ ಪ್ರಕಾರ ಬೆಂಗಳೂರಿನಲ್ಲಿ ಹೀಟ್ ಸ್ಟ್ರೆಸ್ (ಉಷ್ಣದ ಒತ್ತಡ) ಒಂದು ಗಂಭೀರ ಸವಾಲಾಗಿ ಪರಿಣಮಿಸಿದೆ. ತ್ಯಾಜ್ಯ ವಿಲೇವಾರಿ,ಕಟ್ಟಡ ಕಾರ್ಮಿಕರು, ಡೆಲಿವರಿ ಬಾಯ್ಸ್ ಸೇರಿದಂತೆ ಲಕ್ಷಾಂತರ ಮಂದಿ ಅಸಂಘಟಿತ ಕಾರ್ಮಿಕರು ಬಿಸಿಲ ಬೇಗೆಗೆ ಅನಾರೋಗ್ಯದಿಂದ ಬಳಲುತ್ತಿದೆ. ಅವರ ಜೀವನ ಮತ್ತು ಆರ್ಥಿಕತೆಯ ಮೇಲೆ ಪರಿಣಾಮ ಬೀಳುತ್ತಿದೆ.

ಶಾಖ ತಂದ ಅನಾರೋಗ್ಯ: ಅಧ್ಯಯನದ ಪ್ರಕಾರ ಶೇ. 92 ರಷ್ಟು ಕಾರ್ಮಿಕರು ಬಿಸಿಲಿನಿಂದ ತಮ್ಮ ಕೆಲಸಕ್ಕೆ ತೊಂದರೆಯಾಗುತ್ತಿದೆ ಎಂದು ತಿಳಿಸಿದ್ದಾರೆ. ಬಿಸಿಲಿನ ಶಾಖಕ್ಕೆ ಶೇ. 72 ರಷ್ಟು ಕಾರ್ಮಿಕರು ಸ್ನಾಯು ಸೆಳೆತ ಸಮಸ್ಯೆಯಿಂದ, ಶೇ.62ರಷ್ಟು ಕಾರ್ಮಿಕರಿಗೆ ವಿಪರೀತ ಸುಸ್ತು ಮತ್ತು ದಣಿವು ಕಾಡುತ್ತಿದೆ. ಶೇ.37ರಷ್ಟು ಕಾರ್ಮಿಕರು ನಿರ್ಜಲೀಕರಣಕ್ಕೆ ಒಳಗಾಗುತ್ತಿದ್ದು, ಇದೇ ಕಾರಣಕ್ಕೆ ಶೇ.8 ಕಾರ್ಮಿಕರಲ್ಲಿ ಕಿಡ್ನಿ ಸಂಬಂಧಿತ ಸಮಸ್ಯೆಗಳು ಕಾಣಿಸಿಕೊಂಡಿವೆ. ಅಲ್ಲದೆ ವಿಶೇಷವಾಗಿ ಮಹಿಳಾ ಕಾರ್ಮಿಕರಲ್ಲಿ ಶೇ. 43ರಷ್ಟು ಜನ



ಋತುಚಕ್ರದ ಸಮಯದಲ್ಲಿ ವಿಪರೀತ ಹೊಟ್ಟೆನೋವು ಮತ್ತು ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ಅಧ್ಯಯನ ವರದಿ ಹೇಳಿದೆ.

ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ: ಬಿಸಿಲಿನಿಂದ ಆರೋಗ್ಯ ಹದಗೆಟ್ಟರೂ ಚಿಕಿತ್ಸೆ ಪಡೆಯುವುದು ಕಾರ್ಮಿಕರಿಗೆ ಸುಲಭದ ಮಾತಲ್ಲ.ಬರುವ ಅಲ್ಪ ಆದಾಯದಲ್ಲಿ ಬಿಸಿಲಿನ ತಾಪದ ಸುರಕ್ಷತೆಗೆ ಖರ್ಚುಮಾಡುವಷ್ಟು ಯೋಚನೆಯನ್ನು ಕಾರ್ಮಿಕರು ಮಾಡುತ್ತಿಲ್ಲ. ಒಂದು ದಿನ ಕೆಲಸಕ್ಕೆ ರಜೆ ಹಾಕಿದರೆ ಆಗುವ ಆದಾಯದ ನಷ್ಟ ಬಗ್ಗೆ ಚಿಂತಿಸಿ ಚಿಕಿತ್ಸೆ ಪಡೆಯಲು ಹಿಂಜರಿಯುತ್ತಿದ್ದಾರೆ.

ಇನ್ನೊಂದೆಡೆ ಖಾಸಗಿ ಕಂಪನಿ ಮತ್ತು ಉದ್ಯಮಿಗಳು ಲಾಭದ ಮೇಲಿನ ಪರಿಣಾಮ ಬಗ್ಗೆ ಚರ್ಚೆ ಮಾಡುತ್ತಾರೆಯೇ ಹೊರತು, ಕಾರ್ಮಿಕರ ಆರೋಗ್ಯದ ಬಗ್ಗೆ ಯಾರು ತಲೆಕೆಡಿಸಿಕೊಳ್ಳುತ್ತಿಲ್ಲ. ಎಂದು ತಜ್ಞರ ಅಭಿಪ್ರಾಯವಾಗಿದೆ.

ಒಟ್ಟಾರೆ, ಬೆಂಗಳೂರಿನ ಹವಾಮಾನ ಬದಲಾವಣೆಯು ಕೇವಲ ಪರಿಸರದ ವಿಷಯವಲ್ಲ, ಮಾನವ ಹಕ್ಕುಗಳ ವಿಷಯವೂ ಹೌದು. ದುಡಿಯುವ ಕಾರ್ಮಿಕರಿಗೆ ಕನಿಷ್ಠ ನೆರಳು ಮತ್ತು ನೀರು ಒದಗಿಸುವುದು ನಾಗರಿಕ ಸಮಾಜ ಮತ್ತು ಸರ್ಕಾರದ ಕರ್ತವ್ಯವಾಗಿದೆ ಎಂದು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿರುವ ಮಾತು.

ಪರಿಹಾರದ ಹಾದಿ ಏನು?

ಬಿಸಿಲಿನ ಸಮಯದಲ್ಲಿ ಕೆಲಸದ ಅವಧಿಯಲ್ಲಿ ಬದಲಾವಣೆ ಮತ್ತು ಕಡ್ಡಾಯ ವಿರಾಮದ ಬಗ್ಗೆ ಕಟ್ಟುನಿಟ್ಟಿನ ಮಾರ್ಗಸೂಚಿಗಳನ್ನು ಕಾರ್ಮಿಕ ಇಲಾಖೆಯ ಮಧ್ಯಸ್ಥಿಕೆ ವಹಿಸಿ ಜಾರಿ ಮಾಡಬೇಕು.ಬಿಸಿಲಿನಿಂದ ರಕ್ಷಣೆ ಪಡೆಯಲು ಕಾರ್ಮಿಕರಿಗೆ ಉದ್ಯಾನವನಗಳೇ ಆಸರೆ. ಹೀಗಾಗಿ ಉದ್ಯಾನವನಗಳನ್ನು ಇಡೀ ದಿನ ತೆರೆದಿಡಬೇಕು. ಹವಾಮಾನ ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳು ಪ್ರತಿ ವಾರ್ಡ್ ಮಟ್ಟದಲ್ಲಿ ಉಷ್ಣಾಂಶದ ಮಾಹಿತಿಯನ್ನು ಜನರಿಗೆ ತಲುಪಿಸಬೇಕೆಂದು ತಜ್ಞರು ಸಲಹೆ ನೀಡಿದ್ದಾರೆ.

> **ಕೆಲಸ ಮಾಡುವ ಸ್ಥಳದಲ್ಲಿ ನೀರು, ಶೌಚಾಲಯದ ವ್ಯವಸ್ಥೆ ಇಲ್ಲದಿರುವುದು, ವಿಶ್ರಾಂತಿ ಪಡೆಯಲು ಅಥವಾ ತಂಪಾದ ಜಾಗದಲ್ಲಿ ಕುಳಿತುಕೊಳ್ಳಲು ಅವಕಾಶ ಸಿಗದ ಪರಿಸ್ಥಿತಿ ಅನೇಕ ಕಾರ್ಮಿಕರಿಗಿದೆ.ಇನ್ನೊಂದೆಡೆ ಸರ್ಕಾರಗಳು ಶಾಖದ ಅಲೆಗಳನ್ನು ತಡೆಯಲು ಯೋಜನೆ ರೂಪಿಸುತ್ತವೆ.ಆದರೆ ಉದ್ಯೋಗ ಸಂಬಂಧಿತ ಆರೋಗ್ಯ ಸಮಸ್ಯೆಗಳ ಬಗ್ಗೆ ಕಟ್ಟುನಿಟ್ಟಾದ ಉಲ್ಲೇಖವೇ ಇರುವುದಿಲ್ಲ,**
> ■ ಅಪೇಕ್ಷಿತಾ, ಹೀಟ್ ವಾಚ್ ಸ್ಥಾಪಕಿ

ಮಹಿಳಾ ವಕೀಲರಿಗೆ ಅಪಮಾನ: ಹೈಕೋರ್ಟ್ ಕಿಡಿ

• **ಬೆಂಗಳೂರು:** ಸಂಘದ ಪೂರ್ವಾನುಮತಿ ಪಡೆಯದೆ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಿದ್ದಾರೆ ಎಂಬ ಕಾರಣಕ್ಕೆ ನಾಲ್ವರು ಮಹಿಳಾ ವಕೀಲರನ್ನು ಸಂಘದ ಸದಸ್ಯತ್ವದಿಂದ ಅಮಾನತುಗೊಳಿಸಿರುವ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ವಕೀಲರ ಸಂಘದ ಆದೇಶಕ್ಕೆ ಹೈಕೋರ್ಟ್ ಚಾಟಿ ಬೀಸಿದೆ.

ಅಮಾನತು ಆದೇಶ ಪ್ರಶ್ನಿಸಿ ಹಿರಿಯ ವಕೀಲೆ ಎಸ್. ಡಿ.ಸರೋಜಮ್ಮ, ಎಂ.ಎಸ್.ವಾಣಿ, ಕೆ.ಮಂಜುಳಾ ಹಾಗೂ ಎಚ್.ಆರ್.ರಮ್ಯಾ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾ. ಸುಜಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಂ.ಎಸ್. ನಾಗರಾಜ ಅವರು, ಸಂಘದ ಪದಾಧಿಕಾರಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿಲ್ಲ ಎಂಬ ಕಾರಣಕ್ಕೆ ದಂಡಿಸಲಾಗಿದೆ. ಅರ್ಜಿದಾರರನ್ನು ನ್ಯಾಯಾಲಯಕ್ಕೆ ಹಾಜರಾಗದಂತೆ ತಡೆಯಲಾಗುತ್ತಿದೆ. ಶೌಚಾಲಯ ಬಳಕೆಗೂ ನಿರಾಕರಿಸಲಾಗಿದೆ ಎಂದು ದೂರಿದರು.

ಈ ಮಾಹಿತಿಗೆ ಕನಲಿದ ಪೀಠ ಕೆ.ಆರ್.ಪೇಟೆ ವಕೀಲರ ಸಂಘದ ಕಾರ್ಯದರ್ಶಿಯನ್ನು ತರಾಟೆಗೆ ತೆಗೆದುಕೊಂಡಿತು. ಯಾರು ಸಂಘದ ಕಾರ್ಯದರ್ಶಿ? ಏನಾಗಿದೆ ಅವರಿಗೆ? ಇನ್ನು ಮುಂದೆ ಸಂಘದ ಕಾರ್ಯದರ್ಶಿಯೇ ಪ್ರತಿ ವರ್ಷ ತನ್ನ ಸ್ವಂತ ಖರ್ಚಿನಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸುವಂತೆ ಆದೇಶಿಸಲಾಗುವುದು ಎಂದು ಎಚ್ಚರಿಸಿತು. ಅರ್ಜಿಗೆ ಸಂಬಂಧಿಸಿದಂತೆ ಮಂಡ್ಯ ಸಹಕಾರ ಸಂಘಗಳ ಉಪ ನಿಬಂಧಕರು, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಹಾಗೂ ಕೆ.ಆರ್.ಪೇಟೆ ವಕೀಲರ ಸಂಘಕ್ಕೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದ ಪೀಠ ವಿಚಾರಣೆ ಮುಂದೂಡಿತು.

ದಕ್ಷಿಣ ಪಾಲಿಕೆ ಆಯುಕ್ತರ ಜತೆ ವಿಡಿಯೋ ಸಂವಾದ

ನಾಗರಿಕರ ವಿವಿಧ ಸಲಹೆ ಸ್ವೀಕಾರ

• **ಬೆಂಗಳೂರು:** ಮುಂಗಾರು ಪೂರ್ವ ಪ್ರವಾಹ ಪರಿಸ್ಥಿತಿಗಳ ಸೂಕ್ಷ್ಮಾವಲೋಕನ ಕುರಿತು ಪ್ರಥಮ ಬಾರಿಗೆ ವಿವಿಧ ವಸತಿ ಸಮುಚ್ಚಯಗಳ ಸಾರ್ವಜನಿಕ ಪ್ರತಿನಿಧಿಗಳೊಂದಿಗೆ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ವಿಡಿಯೋ ಸಂವಾದ ಸಭೆ ನಡೆಸಿದರು.

ಮುಂಗಾರು ಮಳೆಯ ಸಂದರ್ಭದಲ್ಲಿ ಸಂಭವನೀಯ ಪ್ರವಾಹ ಪರಿಸ್ಥಿತಿಗಳನ್ನು ಎದುರಿಸಲು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವ ಉದ್ದೇಶದಿಂದ ಆಯುಕ್ತರು ಸಾರ್ವಜನಿಕರೊಂದಿಗೆ ಸಂವಾದ ನಡೆಸಿ, ಅವರ ಅಹವಾಲುಗಳು ಹಾಗೂ ಸಲಹೆ ಸ್ವೀಕರಿಸಿದರು.

ಈಗಾಗಲೇ ಟ್ರಾಫಿಕ್ ಪೊಲೀಸ್, ಅಗ್ನಿಶಾಮಕ ದಳ, ಬೆಸ್ಕಾಂ, ಅರಣ್ಯ, ಇಂಜಿನಿಯರಿಂಗ್ ಸೇರಿದಂತೆ ಎಲ್ಲಾ ಅಗತ್ಯ ಇಲಾಖೆಗಳೊಡನೆ ಹಲವಾರು ಬಾರಿ ಮುಂಗಾರು ಪೂರ್ವ ಪ್ರವಾಹ ಪ್ರದೇಶಗಳ ಮುನ್ನೆಚ್ಚರಿಕೆ ಸಭೆಗಳ ನಡೆಸಿ ಹಿರಿಯ ಅಧಿಕಾರಿಗಳು ವಿಪತ್ತು ನಿರ್ವಹಣಾ ಸೇರಿದಂತೆ ತಂಡವು ನೆರೆಭೀತಿ ಇರುವ ಪ್ರದೇಶಗಳಲ್ಲಿ ಸ್ಥಳ ಪರಿಶೀಲನೆ ನಡೆಸಲಾಗಿದೆ ಎಂದು ಆಯುಕ್ತರು ಮಾಹಿತಿ ನೀಡಿದರು. ಗುರುತಿಸಲಾದ ಸ್ಥಳಗಳಲ್ಲಿ ತುರ್ತಾಗಿ ಹೂಳೆತ್ತುವ ಕಾರ್ಯ ಕೈಗೊಳ್ಳುವುದು ಹಾಗೂ ಹೊರತೆಗೆದ ಹೂಳನ್ನು ತಕ್ಷಣ ವಿಲೇವಾರಿ ಮಾಡುವಂತೆ ಸೂಚಿಸಲಾಗುತ್ತದೆ. ಇನ್ನುಳಿದಂತೆ



21 ಉಪ ವಿಭಾಗ ವ್ಯಾಪ್ತಿಯಲ್ಲಿ ತುರ್ತು ನಿಯಂತ್ರಣ ಕೊಠಡಿ

ಸಾರ್ವಜನಿಕರಿಂದ ಕುಂದುಕೊರತೆಗಳನ್ನು ತ್ವರಿತವಾಗಿ ಸ್ವೀಕರಿಸಿ ಪರಿಹರಿಸಲು ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಜಯನಗರ ವಲಯ-1 ದೂರವಾಣಿ ಸಂಪರ್ಕ ಸಂಖ್ಯೆ: 080-26566362, 080-22975703 ಮೊಬೈಲ್ ಸಂಖ್ಯೆ: 9480685704 ಹಾಗೂ ಬೊಮ್ಮನಹಳ್ಳಿ ವಲಯ-2 ದೂರವಾಣಿ ಸಂಪರ್ಕ ಸಂಖ್ಯೆ: 080-25732447, 080-25735642 ಮೊಬೈಲ್ ಸಂಖ್ಯೆ 9480685707 ಕಚೇರಿಗಳಲ್ಲಿ ನಿಯಂತ್ರಣ ಕೊಠಡಿಗಳು ಕಾರ್ಯನಿರ್ವಹಿಸುತ್ತಿವೆ. ವಿಭಾಗ ಹಾಗೂ ಉಪವಿಭಾಗ ಮಟ್ಟದಲ್ಲಿಯೂ ತುರ್ತು ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಸ್ತೆ ದುರಸ್ತಿ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನಗಳನ್ನಾಗಲೇ ನೀಡಲಾಗಿದೆ. ಅಪಾಯಕಾರಿ ಒಣ ಮರಗಳು ಮತ್ತು ಕೊಂಬೆಗಳನ್ನು ಗುರುತಿಸಿ ನಿಗದಿತ ಅವಧಿಯಲ್ಲಿ ತೆರವುಗೊಳಿಸಲು ಅರಣ್ಯ ಇಲಾಖೆಯ ತಂಡಕ್ಕೆ ತಿಳಿಸಲಾಗಿದೆ. ಮುಂಗಾರು ಮಳೆಯ ಹಿನ್ನೆಲೆಯಲ್ಲಿ ಸಂಭವನೀಯ ಪ್ರವಾಹ ಪ್ರದೇಶಗಳಲ್ಲಿ ಮುನ್ನೆಚ್ಚರಿಕಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸಾರ್ವಜನಿಕರು ಹಾಗೂ ಅಧಿಕಾರಿಗಳೊಂದಿಗೆ ನಿರಂತರ ಸಭೆಗಳನ್ನು ನಡೆಸಲಾಗುವುದಾಗಿ ಆಯುಕ್ತರು ತಿಳಿಸಿದರು.

ಇಂಜಿನಿಯರಿಂಗ್ ಪ್ರತಿಭಾ ಯೋಜನೆ ಮರು ಸಮತೋಲನ ಮಾಹಿತಿ

ಇಂಜಿನಿಯರಿಂಗ್ ಪ್ರವೇಶ ಶೇ.29 ಕುಸಿತ

• **ಬೆಂಗಳೂರು** : ರಾಜ್ಯದಲ್ಲಿ ಇಂಜಿನಿಯರಿಂಗ್ ಪದವಿಗೆ ದಾಖಲಾಗುವ ವಿದ್ಯಾರ್ಥಿಗಳಲ್ಲಿ ಶೇ.62ರಷ್ಟು ಮಂದಿ ಕಂಪ್ಯೂಟರ್ ಸೈನ್ಸ್ (ಸಿಎಸ್) ಮತ್ತು ಅದಕ್ಕೆ ಸಂಬಂಧಿಸಿದ ಕೋರ್ಸ್‌ಗಳಿಗೆ ಸೇರ್ಪಡೆಯಾಗಿದ್ದಾರೆ. ಆದರೆ ಕೆಲವು ಕೋರ್ ಇಂಜಿನಿಯರಿಂಗ್ ವಿಷಯಗಳಿಗೆ ಶೇ. 16ರಷ್ಟು ದಾಖಲಾತಿ ಆಗುತ್ತಿವೆ. ಇದು 2020ಕ್ಕೆ ಹೋಲಿಸಿದರೆ ಶೇ. 29 ರಷ್ಟು ಕುಸಿತವಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಐಐಟಿ ಬೆಂಗಳೂರಿನ ನಿವೃತ್ತ ನಿರ್ದೇಶಕ ಡಾ. ಎಸ್. ಸದಗೋಪನ್ ಅವರ ನೇತೃತ್ವದಲ್ಲಿ ರಚಿಸಿದ್ದ ಕರ್ನಾಟಕದ ಇಂಜಿನಿಯರಿಂಗ್ ಪ್ರತಿಭಾ ಯೋಜನೆಯ ಮರು ಸಮತೋಲನ -2026+ ವರದಿಯ ಬಗ್ಗೆ ಮಾಹಿತಿ ಹಂಚಿಕೊಂಡರು. ರಾಜ್ಯ ಪ್ರತಿ ವರ್ಷ 1.30 ಲಕ್ಷ ಇಂಜಿನಿಯರಿಂಗ್ ಪದವೀಧರರನ್ನು ಸೃಷ್ಟಿಸುತ್ತದೆ. ಆದರೆ, ಈ ಪೈಕಿ ಶೇ.17 ಮಂದಿ ಮಾತ್ರ ಉದ್ಯೋಗ ಪಡೆಯಲು ಅರ್ಹರಿರುತ್ತಾರೆ. ಐಐಟಿ ಬೆಂಗಳೂರಿನ ಮಾಜಿ ನಿರ್ದೇಶಕ ಡಾ. ಎಸ್.



ಸದಗೋಪನ್ ಅವರ ನೇತೃತ್ವದಲ್ಲಿ ರಚಿಸಿದ್ದ ಸಮಿತಿಯಲ್ಲಿ ಅಧ್ಯಯನ ನಡೆಸಿ, ವಿವರವಾದ ವರದಿಯನ್ನು ನೀಡಿದೆ. ಈ ವರದಿಯನ್ನು ಪರಿಶೀಲಿಸುತ್ತಿದ್ದೇವೆ ಎಂದು ತಿಳಿಸಿದರು. ರಕ್ಷಣೆ, ಬಾಹ್ಯಾಕಾಶ, ಸೆಮಿ ಕಂಡಕ್ಟರ್ ಮುಂತಾದ ಕ್ಷೇತ್ರದಲ್ಲಿ ದೇಶದ ಕೈಗಾರಿಕಾ ಸ್ಪರ್ಧಾತ್ಮಕತೆಗೆ ಆತಂಕಕಾರಿ. ಇದರಿಂದ 2030ರ ಹೊತ್ತಿಗೆ ಸುಮಾರು 35 ಸಾವಿರ ಕೋರ್ ಇಂಜಿನಿಯರ್‌ಗಳ ಕೊರತೆ ಆಗಬಹುದು. 2027ರಲ್ಲಿ ಸೆಮಿ ಕಂಡಕ್ಟರ್ ಕ್ಷೇತ್ರದಲ್ಲಿ ಸುಮಾರು 3 ಲಕ್ಷ ವೃತ್ತಿಪರರ ಕೊರತೆ ಕಾಡುವ ಸಾಧ್ಯತೆಯಿದೆ. ಹೀಗೆ ಹಲವು ಕ್ಷೇತ್ರಗಳಲ್ಲಿ ಪರಿಣತರ ಕೊರತೆ ಸೃಷ್ಟಿಯಾಗಲಿದೆ. ಹಾಗೆಯೇ ಎಐಯು ಆರಂಭಿಕ ಹಂತದ ಕೋಡಿಂಗ್ ಅನ್ನು ಆಟೋಮೇಟ್ ಮಾಡುವುದರಿಂದ ಕೋಡಿಂಗ್ ಸೇವಾ ಆರ್ಥಿಕತೆಗೆ ಹೊಡೆತ ನೀಡಲಿದೆ ಎಂದು ವರದಿ ತಿಳಿಸಿದೆ ಎಂದು ಹೇಳಿದರು.

ಕಂಪ್ಯೂಟರ್ ಸೈನ್ಸ್ ಸೀಟ್‌ಗಳಲ್ಲಿ ಮುಂದಿನ ನಾಲ್ಕು ವರ್ಷಗಳಲ್ಲಿ ಹಂತ-ಹಂತವಾಗಿ ಶೇ.35 ಸೀಟ್‌ಗಳನ್ನು ಕಡಿತ ಮಾಡಬೇಕು. ಮೊದಲ ವರ್ಷವೇ ಶೇ.17 ಸೀಟ್‌ಗಳನ್ನು ಕಡಿಮೆ ಮಾಡಬೇಕು ಎಂದು ವರದಿಯಲ್ಲಿ ಹೇಳಿದೆ ಎಂದರು.

ಕೀರಾ ಸ್ಥಾಪಿಸಬೇಕು: ವಿಟಿಯು, ಸ್ವಾಯತ್ತ ಕಾಲೇಜುಗಳು ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಪಠ್ಯಕ್ರಮ ಸುಧಾರಣೆಗೆ ಕರ್ನಾಟಕ ಇಂಜಿನಿಯರಿಂಗ್ ಸುಧಾರಣಾ ಪ್ರಾಧಿಕಾರ (ಕೀರಾ) ಸ್ಥಾಪಿಸಬೇಕು. ಇದು ಹಬ್ ಮತ್ತು ಸ್ಪೋಕ್ ಮೂಲ ಸೌಕರ್ಯ, ಉದ್ದಿಮೆ ಭಾಗೀದಾರಿಕೆಯನ್ನು ನಿರ್ವಹಿಸಬೇಕು ಎಂದು ವರದಿಯಲ್ಲಿ ಉಲ್ಲೇಖಿಸಿದೆ ಎಂದು ಸಚಿವ ಎಂ.ಸಿ.ಸುಧಾಕರ್ ತಿಳಿಸಿದರು.

ಸಂಪಾದಕೀಯ

ಸಾರಿಗೆ ಹೋರಾಟ: ತಾತ್ಕಾಲಿಕ ತೇಪೆಗಳಿಗೆ ಅಂತ್ಯ ಯಾವಾಗ?

ರಾಜ್ಯದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಹೃದಯವಾಗಿರುವ ಕೆಎಸ್ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ನಾಲ್ಕು ನಿಗಮಗಳ ಕಾರ್ಮಿಕರ ಪ್ರತಿಭಟನೆ ಆಗಾಗ ಕೇಳಿಬರುತ್ತಿರುವ ಸುದ್ದಿಯಾಗಿಬಿಟ್ಟಿದೆ. ಪ್ರತಿಬಾರಿಯೂ ಕಾರ್ಮಿಕರು ಹೋರಾಟದ ಹಾದಿ ಹಿಡಿದಾಗ, ರಾಜ್ಯ ಸರ್ಕಾರ ತಾತ್ಕಾಲಿಕ ಭರವಸೆಗಳ ಮೂಲಕ ಪರಿಸ್ಥಿತಿಯನ್ನು ತಣಿಸುವ ಪ್ರಯತ್ನ ಮಾಡುತ್ತಿದೆ. ಆದರೆ, ಇಂತಹ ತಾತ್ಕಾಲಿಕ ಪರಿಹಾರಗಳು ಮೂಲ ಸಮಸ್ಯೆಗಳನ್ನು ನಿವಾರಿಸಲು ವಿಫಲವಾಗುತ್ತಿವೆ.



ಕಾರ್ಮಿಕರ ಪ್ರಮುಖ ಬೇಡಿಕೆಗಳಲ್ಲಿ ವೇತನ ಪರಿಷ್ಕರಣೆ, ಬಾಕಿ ಸೌಲಭ್ಯಗಳ ಪಾವತಿ, ಕೆಲಸದ ಒತ್ತಡದ ಕಡಿತ ಹಾಗೂ ಸೇವಾ ಭದ್ರತೆ ಪ್ರಮುಖವಾಗಿವೆ. ಇವು ಉದ್ಯೋಗದ ಗೌರವ ಮತ್ತು ಬದುಕಿನ ಭದ್ರತೆಯೊಂದಿಗೆ ನೇರವಾಗಿ ಸಂಬಂಧ ಹೊಂದಿವೆ. ಆದರೂ, ಸರ್ಕಾರವು ಹಣಕಾಸಿನ ಅಡಚಣೆಗಳನ್ನೋ ಅಥವಾ ಆಡಳಿತಾತ್ಮಕ ಸವಾಲುಗಳನ್ನೋ ಕಾರಣವಾಗಿ ಮುಂದಿಟ್ಟುಕೊಂಡು ನಿರಂತರವಾಗಿ ಈ ಬೇಡಿಕೆಗಳನ್ನು ಮುಂದೂಡುತ್ತಿರುವುದು ಸಮಸ್ಯೆಯನ್ನು ಗಾಢಗೊಳಿಸಿದೆ. ಇದರಿಂದಾಗಿ, ಕಾರ್ಮಿಕರಲ್ಲಿ ಅಸಮಾಧಾನ ಹೆಚ್ಚುತ್ತಿದೆ ಮತ್ತು ಹೋರಾಟದ ಮಾರ್ಗವೇ ಏಕೈಕ ಆಯ್ಕೆ ಎಂಬ ಭಾವನೆ ಬಲವಾಗುತ್ತಿದೆ. ಈ ಸ್ಥಿತಿ ಸಾರ್ವಜನಿಕ ಸಾರಿಗೆ ಸೇವೆಯ ನಿರಂತರತೆಗೆ ಕೂಡ ಅಪಾಯಕಾರಿಯಾಗಿದೆ. ಪ್ರಯಾಣಿಕರಿಗೂ ಇದು ಅನಾನುಕೂಲಕಾರಿಯಾಗಿದೆ.

ಇಂತಹ ಸಂದರ್ಭದಲ್ಲಿ, ಸರ್ಕಾರವು ದೀರ್ಘಕಾಲೀನ ದೃಷ್ಟಿಕೋನವನ್ನು ಅಳವಡಿಸಿಕೊಂಡು, ಕಾರ್ಮಿಕ ಸಂಘಟನೆಗಳೊಂದಿಗೆ ಪ್ರಾಮಾಣಿಕ ಮಾತುಕತೆಗೆ ಮುಂದಾಗಬೇಕು. ಕೇವಲ ತಾತ್ಕಾಲಿಕ ಸಮಾಧಾನವಲ್ಲ, ಒಂದು ಸಮಗ್ರ ಮತ್ತು ಶಾಶ್ವತ ಪರಿಹಾರ ಕಂಡುಹಿಡಿಯುವ ಪ್ರಯತ್ನ ಅಗತ್ಯ. ಪರಸ್ಪರ ವಿಶ್ವಾಸ ಮತ್ತು ಸಹಕಾರದ ಆಧಾರದಲ್ಲಿ ಕೈಗೊಂಡ ಮಾತುಕತೆ ಮಾತ್ರ ಈ ಸಮಸ್ಯೆಗೆ ಅಂತಿಮ ಪರಿಹಾರ ನೀಡಬಲ್ಲದು.

ಆದರೆ, ಇಲ್ಲಿ ಒಂದು ಕಠಿಣ ಪ್ರಶ್ನೆಯನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಎಷ್ಟರವರೆಗೆ ಇದೇ ಚಿತ್ರ ಮುಂದುವರಿಯಬೇಕು? ಪ್ರತೀ ಪ್ರತಿಭಟನೆಗೂ 'ಸಭೆ-ಭರವಸೆ-ವಿಳಂಬ' ಎಂಬ ಮಾದರಿಯೇ ಮುಂದುವರಿದರೆ, ಅದು ಆಡಳಿತದ ದೌರ್ಬಲ್ಯವೋ ಅಥವಾ ನೀತಿ ಸ್ಪಷ್ಟತೆಯ ಕೊರತೆಯೋ ಎಂಬ ಅನುಮಾನ ಸಹಜವಾಗುತ್ತದೆ. ಸಮಸ್ಯೆಗಳನ್ನು ಕಾಲಹರಣ ಮಾಡುವ ಧೋರಣೆ ತಾತ್ಕಾಲಿಕವಾಗಿ ಸುಲಭದಂತಾಗಬಹುದು, ಆದರೆ ದೀರ್ಘಾವಧಿಯಲ್ಲಿ ಅದು ಇನ್ನಷ್ಟು ದೊಡ್ಡ ಸಂಕಷ್ಟಕ್ಕೆ ದಾರಿ ಮಾಡಿಕೊಡುತ್ತದೆ. ಇದೇ ವೇಳೆ, ಕಾರ್ಮಿಕ ಸಂಘಟನೆಗಳೂ ತಮ್ಮ ಹೋರಾಟವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸಮತೋಲನದಲ್ಲಿಡಬೇಕಾಗಿದೆ. ಆದರೆ, ಈ ಸಮತೋಲನವನ್ನು ಸಾಧಿಸಲು ಸರ್ಕಾರವೇ ಮೊದಲ ಹೆಜ್ಜೆ ಇಡುವುದು ಸೂಕ್ತ. ನಿರ್ಧಾರಗಳಲ್ಲಿ ಸ್ಪಷ್ಟತೆ, ಸಮಯಬದ್ಧ ಕ್ರಮಗಳು ಮತ್ತು ಜವಾಬ್ದಾರಿತನ ಈ ಮೂರು ಅಂಶಗಳು ಸೇರಿ ಬಂದಾಗ ಮಾತ್ರ, ಸಾರಿಗೆ ವ್ಯವಸ್ಥೆಯ ಈ ಮರುಕಳಿಸುವ ಸಂಕಷ್ಟಕ್ಕೆ ಶಾಶ್ವತ ಪರಿಹಾರ ದೊರೆಯಬಹುದು. ಹಾಗಂತ ಇಲ್ಲಿ ಸರ್ಕಾರದ್ದು ತಪ್ಪು, ಕಾರ್ಮಿಕ ಸಂಘಟನೆಗಳ ತಪ್ಪು ಎಂದು ಹೇಳಲು ಸಾಧ್ಯವಿಲ್ಲ, ಇಬ್ಬರೂ ಕುಳಿತು ಬಗೆಹರಿಸಿಕೊಳ್ಳಬೇಕು ಅಷ್ಟೇ.

ಸಂದೇಹವಿದ್ದರೂ ನಂಬಿಕೆಯನ್ನಿಡಬೇಕು

ಸಂದೇಹೋಽಸ್ತಿ ಸದಾ ದೈವೇ ಧರ್ಮೇ ನ್ಯಾಯೇ ಗುರೌ ತಥಾ ।
ತಥಾಪಿ ಕೃತ್ವಾ ವಿಶ್ವಾಸಂ ಮಾನವೋ ಭುವಿ ಸಂಚರೇತ್॥ -ಸುವಚನ ಶತಕಂ

ದೇವರು, ಧರ್ಮ, ನ್ಯಾಯ, ಗುರು- ಇತ್ಯಾದಿಗಳಲ್ಲಿ ಸದಾ ಸಂದೇಹವೇ? ಆದರೂ ಅವುಗಳಲ್ಲಿ ನಂಬಿಕೆಯನ್ನಿಟ್ಟು ಮನುಷ್ಯನು ಲೋಕದಲ್ಲಿ ನಡೆದುಕೊಳ್ಳಬೇಕು -ಎಂಬುದು ಶ್ಲೋಕಾರ್ಥ.

ಕೊನೆಗೂ ಫಲ ಕೊಡುವುದು ವಿಶ್ವಾಸವೇ. ವಿಶ್ವಾಸವಿಲ್ಲದ ಯಾವ ಕ್ರಿಯೆಯೂ ಫಲವನ್ನೀಯುವುದಿಲ್ಲ, ಫಲ ಬೇಕಾದರೆ ವಿಶ್ವಾಸವಿರಿಸಿ ಮುನ್ನುಗ್ಗಬೇಕು. ಅದ್ದರಿಂದಲೇ 'ವಿಶ್ವಾಸೋ ಫಲದಾಯಕಃ' ಎಂದಿದ್ದಾರೆ.

ಮಾನವನ ಜೀವನವೇ ಪರಸ್ಪರ ವಿಶ್ವಾಸದಿಂದ ಸಾಗಬೇಕಾಗಿದೆ. ವಿಶ್ವಾಸವಿಲ್ಲದಿದ್ದರೆ ಸಾಧಿಸುವುದಕ್ಕೆ ಸುತರಾಂ ಸಾಧ್ಯವಿಲ್ಲ, ನಮ್ಮೆದುರು ಸಾಧನೆ ಮಾಡಿದ ಎಷ್ಟೊಂದು ವ್ಯಕ್ತಿಗಳಿಲ್ಲ, ವಿಶ್ವಾಸದಿಂದ ಮುಂದುವರಿಯದೇ ಅವರೇನನ್ನೂ ಸಾಧಿಸಿಲ್ಲ, ವಿಶ್ವಾಸವೇ ಬೇಡಿಕೆಯ, ಸಾಧನೆಯ ತಾಯಿ.



ಸಂದೇಹಿಸುವುದು ಮನುಷ್ಯರ ಸಹಜ ಸ್ವಭಾವ ಎಂಬಂತಾಗಿದೆ. ಯಾವುದೇ ವಿಷಯವಿರಲಿ, ಅದರ ಕುರಿತು ವಿಶ್ವಾಸಕ್ಕಿಂತ ಮೊದಲು ಸಂದೇಹವೇ ಹುಟ್ಟಿಕೊಳ್ಳುತ್ತದೆ. ಮೊದಲು ಸಂದೇಹಿಸಿ ಅನಂತರ ಮುಂದುವರೆಸುವ ಜಾಯಮಾನ. ಯಾವುದರ ಬಗ್ಗೆ ಸರಿಯಾಗಿ ತಿಳಿದುಕೊಳ್ಳದಿರುವುದರಿಂದ ಸಂದೇಹ, ಸಂಶಯ ತಲೆ ಎತ್ತುತ್ತದೆ.

ಅದರಲ್ಲಿಯೂ ದೇವರು, ಧರ್ಮ, ನ್ಯಾಯ, ಗುರು... ಇತ್ಯಾದಿಗಳಲ್ಲಿ ಸದಾ ಸಂದೇಹವೇ. ಸಂದೇಹಿಸುವುದಕ್ಕೆ ಕಾರಣವಿಲ್ಲದಿಲ್ಲ, ದೇವರ ಕುರಿತು ಎಲ್ಲರೂ ಮಾತನಾಡುವವರೇ. ಆದರೆ ದೇವರನ್ನು ಕಂಡವರು ಯಾರು ಇಲ್ಲ, ಗ್ರಂಥಗಳಲ್ಲಿ ಬರೆದದ್ದನ್ನು ಓದಿಯೋ, ಹಿರಿಯರು ಹೇಳಿದ್ದನ್ನು ಕೇಳಿಯೋ ಒಂದಿಷ್ಟು ತಿಳಿದುಕೊಳ್ಳುತ್ತೇವೆ.

ಧರ್ಮದ ಕುರಿತಾಗಿಯೂ ಅನೇಕರು ಅನೇಕ ಬಗೆಯಲ್ಲಿ ವ್ಯಾಖ್ಯಾನಿಸುತ್ತಾರೆ. ಧರ್ಮದ, ದೇವರ ಮೂಲತತ್ವ ತಿಳಿಯದಿದ್ದರೂ ಮಾತನಾಡುವವರಿಗೆ ಕೊರತೆಯಿಲ್ಲ, ನಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸುವ ಕೆಲಸ ಮಾಡುತ್ತಾರೆ. ಇವುಗಳ ಕುರಿತು ಹೇಳುವುದೂ ಕಷ್ಟ, ಅರ್ಥ ಮಾಡಿಕೊಳ್ಳುವುದೂ ಕಷ್ಟ, ಆದರೆ ಇವುಗಳ ಬಗ್ಗೆ ನಂಬಿಕೆ ಇಟ್ಟುಕೊಂಡರೆ ನಷ್ಟವೇನೂ ಆಗದು. ದೇವರು, ಧರ್ಮಗಳ ಹೆಸರಿನಲ್ಲಿ ಒಳಿತನ್ನೇ ಹೇಳುವುದರಿಂದ, ಅದನ್ನು ನಾವು ಅನುಸರಿಸುವದರಿಂದ ಒಂದೊಮ್ಮೆ ಒಳಿತಾಗದಿದ್ದರೂ ಅದರಿಂದ ಕೆಡುಕಂತೂ ಆಗುವುದಿಲ್ಲ, ನ್ಯಾಯದ ವಿಷಯದಲ್ಲಿ ಗೊಂದಲವಿದ್ದರೂ ನಂಬಿಕೆಯನ್ನು ಕಳೆದುಕೊಳ್ಳಬಾರದು. ಕೆಲವೊಮ್ಮೆ ನ್ಯಾಯ ನೀಡುವವನ ಮಾನಸಿಕ ಸ್ಥಿತಿ, ಒತ್ತಡ ಇತ್ಯಾದಿಗಳಿಂದಾಗಿ ಅಲ್ಪಸ್ವಲ್ಪ ಬದಲಾಗಬಹುದು ಅಥವಾ ವಿಳಂಬವಾಗಬಹುದು. ಆದರೂ ನಂಬಿಕೆಯನ್ನು ಬಿಡಬಾರದು.

ಗುರುವಾದವನು ಹೇಳುವ ಮಾತುಗಳಲ್ಲಿ ಕೆಲವಷ್ಟು ಸಂದೇಹ ಬರಬಹುದು. ಆಗ ಕುಳಿತು ಚರ್ಚಿಸಿ ಮುಂದುವರಿಯಬೇಕು. ಕೆಲವೊಮ್ಮೆ ಪರಿಸ್ಥಿತಿಯ ಒತ್ತಡ ದಿಂದ ಪ್ರಮಾದವಾಗಲೂಬಹುದು. ಅಷ್ಟಕ್ಕೆ ಗುರುವನ್ನು ನಿಂದಿಸುವುದಾಗಲಿ, ಜರೆಯುವುದನ್ನಾಗಲಿ ಮಾಡಬಾರದು. ಗುರುತ್ವವೇ ಗುರುವಿನ ಹಿರಿಮೆಯ ದ್ಯೋತಕವಾದ್ದರಿಂದ ಅವನೆಂದೂ ವಂಚಿಸಲಾರ, ದ್ರೋಹವೆಸಗಲಾರ ಎಂಬ ನಂಬಿಕೆ ನಮ್ಮದಾಗಬೇಕು.

ಇಂತಹ ಬಲವಾದ ನಂಬಿಕೆ, ದೃಢ ವಿಶ್ವಾಸ ಇವೇ ನಮ್ಮನ್ನು ಮೇಲೆತ್ತುತ್ತವೆ. ಉತ್ತಮ ಸ್ಥಾನದಲ್ಲಿ ನಿಲ್ಲುವಂತೆ ಮಾಡುತ್ತವೆ.

ಬುದ್ಧ ಪೂರ್ಣಿಮೆ; ಕರುಣೆಯ ಸಾಕ್ಷಾತ್ಕಾರ

▸ ಸಿ. ಪಿ. ರಾಧಾಕೃಷ್ಣನ್, ಉಪರಾಷ್ಟ್ರಪತಿ



ದೇವಾಲಯಗಳಲ್ಲಿ ಉತ್ಸವಗಳನ್ನು ಆಚರಿಸಲಾಗುವ ಚಿತ್ರಾ ಪೌರ್ಣಮಿಯ ಈ ಶುಭ ದಿನದಂದು ಪ್ರತಿ ಮನೆಯಲ್ಲೂ ಸಮೃದ್ಧಿ ಬೆಳೆಯಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಎಲ್ಲಾ ಸಹೋದರ ಸಹೋದರಿಯರಿಗೆ ಬುದ್ಧ ಪೂರ್ಣಿಮೆಯ ಹೃತ್ಪೂರ್ವಕ ಶುಭಾಶಯಗಳು.

ಭಾರತವು ಜಗತ್ತಿಗೆ ನೀಡಿದ ಅನೇಕ ಶ್ರೇಷ್ಠ ಕೊಡುಗೆಗಳಲ್ಲಿ ಬೌದ್ಧಧರ್ಮವು ಪ್ರಮುಖವಾದುದು. ಭಗವಾನ್ ಬುದ್ಧನ ಜೀವನ ಮತ್ತು ಅಮೂಲ್ಯ ಬೋಧನೆಗಳು ಪ್ರಪಂಚಾದ್ಯಂತ ಕೋಟ್ಯಂತರ ಜನರ ಬದುಕಿಗೆ ಬೆಳಕಾಗಿವೆ. 'ತನ್ನನ್ನು ತಾನು ಅರಿಯುವುದು' ಅಥವಾ ಆತ್ಮಸಾಕ್ಷಾತ್ಕಾರದ ಮಹತ್ವವನ್ನು ಭಾರತವು ಇಡೀ ಜಗತ್ತಿಗೆ ಕಲಿಸಿಕೊಟ್ಟಿದೆ. ಬುದ್ಧ ಎಂಬ ಪದದ ಅರ್ಥವೇ ಜಾಗೃತಗೊಂಡವನು ಅಥವಾ ಅರಿವು ಪಡೆದವನು ಎಂದಾಗಿದೆ. ಮಾನವಕುಲಕ್ಕೆ ಆತ್ಮದ ಅರಿವು ಮೂಡಿಸಲು ಶ್ರಮಿಸಿದ ಈ ಮಹಾತ್ಮನ ಜನನ ಮತ್ತು ಜ್ಞಾನೋದಯ ಎರಡೂ ಒಂದೇ ದಿನದಂದು ಸಂಭವಿಸಿರುವುದು ಅತ್ಯಂತ ವಿಶೇಷವಾಗಿದೆ.



ರಾಜಕುಮಾರ ಸಿದ್ಧಾರ್ಥ ಎಲ್ಲಾ ಸುಖ-ಸೌಲಭ್ಯಗಳ ನಡುವೆ ಬೆಳೆದವರು. ಆದರೆ, ತಮ್ಮ 29ನೇ ವಯಸ್ಸಿನಲ್ಲಿ ಅರಮನೆಯ ವೈಭೋಗ, ಪತ್ನಿ, ಮಗ ಮತ್ತು ಸಕಲ ಸಂಪತ್ತನ್ನು ತ್ಯಜಿಸಿ ಸತ್ಯದ ಹುಡುಕಾಟಕ್ಕೆ ಹೊರಟರು. ಆರು ವರ್ಷಗಳ ಕಠಿಣ ತಪಸ್ಸಿನ ನಂತರ, ಬೋಧಗಯಾದ ಬೋಧಿ ವೃಕ್ಷದ ಅಡಿಯಲ್ಲಿ ಅವರಿಗೆ ಪರಮ ಜ್ಞಾನೋದಯವಾಯಿತು. ಅಂದಿನಿಂದ ಅವರು ಬುದ್ಧ ಎಂದು ಪ್ರಸಿದ್ಧರಾದರು. ಬೌದ್ಧ ಧರ್ಮದ ನಾಲ್ಕು 'ಉದಾತ್ತ ಸತ್ಯಗಳು' ಮತ್ತು ನೈತಿಕ ಜೀವನದ ಹಾದಿಯು ಒಂದು ಹೊಸ ತತ್ವಶಾಸ್ತ್ರಕ್ಕೆ ನಾಂದಿ ಹಾಡಿತು. ಇದು ವಿಶ್ವ ಇತಿಹಾಸದಲ್ಲಿ ಭಾರತದ ಗೌರವವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ವಾರಾಣಸಿಯ ಸಮೀಪವಿರುವ ಸಾರನಾಥದಲ್ಲಿ, ಅವರು ಐವರು ಬಿಕ್ಕುಗಳಿಗೆ ತಮ್ಮ ಮೊದಲ ಬೋಧನೆಯನ್ನು ನೀಡಿದರು. ಧರ್ಮಚಕ್ರ ಪ್ರವರ್ತನ ಎಂದು ಕರೆಯಲ್ಪಡುವ ಈ ಬೋಧನೆಯು ಬೌದ್ಧಧರ್ಮದ ಅಡಿಪಾಯವಾಯಿತು ಮತ್ತು ಬೌದ್ಧಧರ್ಮದ ಔಪಚಾರಿಕ ಆರಂಭಕ್ಕೆ ದಾರಿಯಾಯಿತು. ಕಾಲಾನಂತರದಲ್ಲಿ, ಬುದ್ಧನ ಬೋಧನೆಗಳಿಗೆ ಮಾರುಹೋಗಿ ಅನೇಕರು ಅನುಯಾಯಿಗಳಾದರು. ಮಗಧದ ರಾಜ ಬಿಂಬಿಸಾರನು ರಾಜಗೃಹದ 'ವೇಣುವನ' (ಬಿದಿರಿನ ತೋಪು) ವನ್ನು ದಾನವಾಗಿ ನೀಡಿದರೆ, ಅನಾಥಪಿಂಡಿಕ ಎಂಬ ಶ್ರೀಮಂತ ವ್ಯಾಪಾರಿಯು ಇಡೀ 'ಜೇತವನ'ವನ್ನು ಚಿನ್ನದ ನಾಣ್ಯಗಳಿಂದ ಮುಚ್ಚಿ ಬೌದ್ಧವಿಹಾರವನ್ನು ನಿರ್ಮಿಸಿಕೊಟ್ಟನು. ಇಂತಹ ಕಾರ್ಯಗಳು ಅಂದಿನ ಭಾರತದಲ್ಲಿದ್ದ ಧರ್ಮದ ಮೇಲಿನ ಅಚಲ ನಂಬಿಕೆಯನ್ನು ತೋರಿಸುತ್ತವೆ.

ಭೂತಕಾಲದ ಬಗ್ಗೆ ಚಿಂತಿಸಬೇಡಿ, ವರ್ತಮಾನದಲ್ಲಿ ಬದುಕಿ. ಸತ್ಯಕ್ಕೆ ಹೆಚ್ಚಿನ ಶಕ್ತಿಯಿದೆ. ಮನಸ್ಸು ಎಲ್ಲಾ ಕ್ರಿಯೆಗಳ ಮೂಲವಾಗಿದೆ, ಅದ್ದರಿಂದ ಸಕಾರಾತ್ಮಕ ಆಲೋಚನೆಗಳನ್ನು ಬೆಳೆಸಿಕೊಳ್ಳಿ, ಕಷ್ಟ ಬಂದಾಗ ಹೆದರಿ ಓಡಬೇಡಿ. ಜೀವನದ ಪಯಣವು ಅಂತಿಮವಾಗಿ ವೈಯಕ್ತಿಕವಾದುದು. ಅದನ್ನು ಆಧ್ಯಾತ್ಮಿಕ ಹಾದಿಯಲ್ಲಿ ಮುನ್ನಡೆಸಿ. ಮಾತುಗಳು ನೋಯಿಸಬಹುದು, ಅದ್ದರಿಂದ ಮೃದುವಾಗಿ ಮಾತನಾಡಿ. ಪ್ರೀತಿ ಮತ್ತು ಅಹಿಂಸೆ ಅತ್ಯಗತ್ಯ. ಯಾವಾಗಲೂ ಕಲಿಕೆಯನ್ನು ಮುಂದುವರಿಸಿ ಎಂದಿಗೂ ನಿಲ್ಲಿಸಬೇಡಿ ಎನ್ನುವ ಉದಾತ್ತ ಚಿಂತನೆಗಳನ್ನು ಭಾರತೀಯ ತತ್ವಶಾಸ್ತ್ರಕ್ಕೆ ಸೇರಿಸಿದ ಶ್ರೇಯಸ್ಸು ಬೌದ್ಧ ಧರ್ಮದ್ದು. ತಮಿಳು ಸಾಹಿತ್ಯದ ಶ್ರೇಷ್ಠ ಕೃತಿಗಳಾದ ಮಣಿಮೇಖಲೈ ಮತ್ತು ಕುಂಡಲಕೇಸಿ ಬೌದ್ಧ ತತ್ವಶಾಸ್ತ್ರವನ್ನು ಸುಂದರವಾಗಿ ಚಿತ್ರಿಸಿವೆ. ಕಾಲಗತಿಯಲ್ಲಿ ಅನೇಕ ಗ್ರಂಥಗಳು ನಾಶವಾಗಿದ್ದರೂ ಅವು ನೀಡಿದ ಸಂದೇಶಗಳು ಇಂದಿಗೂ ಅಮೂಲ್ಯವಾಗಿವೆ. "ಬುದ್ಧಿಯನ್ನು ಮಬ್ಬುಗೊಳಿಸುವ ಮಾದಕ ದ್ರವ್ಯಗಳು ಮತ್ತು ಜೀವಹಿಂಸೆಯನ್ನು ಜ್ಞಾನಿಗಳು ಯಾವತ್ತೂ ಒಪ್ಪುವುದಿಲ್ಲ; ಅರಿವುಳ್ಳವರು ಇವುಗಳಿಂದ ದೂರವಿರುತ್ತಾರೆ. ಹುಟ್ಟು-ಸಾವುಗಳು ಮತ್ತು ಸಾವಿನ ನಂತರದ ಮರುಜನ್ಮವು ನಿದ್ರೆ ಮತ್ತು ಎಚ್ಚರದಷ್ಟೇ ಸಹಜವಾದ ಸತ್ಯ. ಯಾರು ಸತ್ಕರ್ಮಗಳನ್ನು ಮಾಡುತ್ತಾರೋ ಅವರು ಉನ್ನತ ಗತಿಯನ್ನು ಪಡೆಯುತ್ತಾರೆ, ಕೆಟ್ಟ ಕೆಲಸ ಮಾಡುವವರು ಅಪಾರ ಸಂಕಟಕ್ಕೆ ಗುರಿಯಾಗುತ್ತಾರೆ. ಈ ಸತ್ಯವನ್ನು ಅರಿತ ವಿವೇಚನಾಶೀಲರು ಲೌಕಿಕ ವ್ಯಾಮೋಹಗಳನ್ನು ಕಡಿದುಕೊಳ್ಳುತ್ತಾರೆ" ಹೀಗೆ ತಮಿಳು ಮಹಾಕಾವ್ಯ ಮಣಿಮೇಖಲೈ ಬೌದ್ಧಧರ್ಮದ ಸಾರವನ್ನು ವಿವರಿಸುತ್ತದೆ. (ಅಧಿರೈ ಪಿಚ್ಚೈಯಿಟ್ಟ ಕಾದೈ: 84-90)

ಬುದ್ಧನು ಐದು ಪ್ರಮುಖ ನೈತಿಕ ಸೂತ್ರಗಳನ್ನು (ಪಂಚಶೀಲ) ಬೋಧಿಸಿದನು: ಅಹಿಂಸೆ, ಕಳ್ಳತನ ಮಾಡದಿರುವುದು, ನೈತಿಕ ನಡವಳಿಕೆ, ಸತ್ಯಸಂಧತೆ ಮತ್ತು ಮಾದಕ ವಸ್ತುಗಳಿಂದ ದೂರವಿರುವುದು. ಕೇವಲ ಧರ್ಮವನ್ನಷ್ಟೇ ಅಲ್ಲದೆ, ಮನಸ್ಸೇ ಎಲ್ಲದಕ್ಕೂ ಮೂಲ ಎಂಬ ಮನೋವೈಜ್ಞಾನಿಕ ಸತ್ಯವನ್ನು ಅವರು ತಿಳಿಸಿಕೊಟ್ಟರು. ಒಳ್ಳೆಯ ಆಲೋಚನೆ ಮತ್ತು ನಡವಳಿಕೆಗಳು ಸಮಾಜದಲ್ಲಿ ಶಾಂತಿಯನ್ನು ನೆಲೆಸುವಂತೆ ಮಾಡುತ್ತವೆ. ಕಂಗೆಟ್ಟ ಮನಸ್ಸುಗಳಿಗೆ ಸ್ಪಷ್ಟತೆ ಮತ್ತು ಜ್ಞಾನದ ಬೆಳಕು ನೀಡಿದ ಕಾರಣಕ್ಕಾಗಿ ಅವರನ್ನು ಏಷ್ಯಾದ ಬೆಳಕು ಎಂದು ಕರೆಯಲಾಗುತ್ತದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಹೇಳಿದ ಮಾತುಗಳು ಇಲ್ಲಿ ನೆನಪಿಗೆ ಬರುತ್ತವೆ: ಭಗವಾನ್ ಗೌತಮ ಬುದ್ಧನ ಜೀವನ ಸಂದೇಶವು ಇಂದಿಗೂ ಪ್ರಸ್ತುತವಾಗಿದೆ. ಶಾಂತಿಯು ನಮ್ಮೊಳಗಿನಿಂದಲೇ ಶುರುವಾಗುತ್ತದೆ ಎಂದು ಅವರು ಕಲಿಸಿದರು. ನಮ್ಮನ್ನು ನಾವು ಗೆಲ್ಲುವುದೇ ಜಗತ್ತಿನ ಶ್ರೇಷ್ಠ ವಿಜಯ ಎಂದು ಅವರು ತೋರಿಸಿಕೊಟ್ಟರು. ಇಂದಿನ ಜಗತ್ತಿನ ಸಂಘರ್ಷ ಮತ್ತು ಉದ್ವಿಗ್ನತೆಗಳ ನಡುವೆ ಬುದ್ಧನ ಬೋಧನೆಗಳು ಹಿಂದೆಂದಿಗಿಂತಲೂ ಹೆಚ್ಚು ಅಗತ್ಯವಾಗಿವೆ. ಅಶೋಕನು ಕೇವಲ ದೇಶದೊಳಗೆ ಮಾತ್ರವಲ್ಲದೆ, ಬಿಕ್ಕುಗಳ ಸಹಾಯದೊಂದಿಗೆ ಏಷ್ಯಾದಾದ್ಯಂತ ಬೌದ್ಧ ಧರ್ಮವನ್ನು ಹರಡಿದನು. ಆತನ ಮಗ ಮಹಿಂದನು ಶ್ರೀಲಂಕಾಕ್ಕೆ ಬುದ್ಧನ ಸಂದೇಶಗಳನ್ನು ಕೊಂಡೊಯ್ದನು. ಬೌದ್ಧ ಬಿಕ್ಕುಗಳು ತಮಿಳುನಾಡಿನಲ್ಲೂ ಧರ್ಮ ಪ್ರಚಾರ ಮಾಡಿದ್ದರು ಎಂಬುದಕ್ಕೆ ಅಲ್ಲಿನ ಹಲವಾರು ಪ್ರದೇಶಗಳಲ್ಲಿ ಇಂದಿಗೂ ಕಂಡುಬರುವ ಬೌದ್ಧಧರ್ಮದ ಕುರುಹುಗಳೇ ಸಾಕ್ಷಿ.

ಬೌದ್ಧ ಬಿಕ್ಕುಗಳು ಯಾವುದೇ ತಾರತಮ್ಯವಿಲ್ಲದೆ ಜನರಿಗೆ ಉಚಿತವಾಗಿ ವೈದ್ಯಕೀಯ ನೆರವು ಮತ್ತು ಶಿಕ್ಷಣವನ್ನು ನೀಡುತ್ತಿದ್ದರು. ಅವರು ಪವಿತ್ರ ತ್ರಿಪಿಟಕ ಗ್ರಂಥಗಳನ್ನು ಬೋಧಿಸುತ್ತಾ, ಆಕರ್ಷಕವಾದ ಜಾತಕ ಕಥೆಗಳನ್ನು ಹಂಚಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೆ, ಜನರಲ್ಲಿ ಅರಿವು ಮೂಡಿಸಲು ಮತ್ತು ಮಾನಸಿಕ ಶಾಂತಿಗಾಗಿ ಧ್ಯಾನದ ಅಭ್ಯಾಸಗಳನ್ನು ಕಲಿಸಿಕೊಡುತ್ತಿದ್ದರು. ದಾನ ಮಾಡುವುದು, ಅದರಲ್ಲೂ ವಿಶೇಷವಾಗಿ ಹಸಿದವರಿಗೆ ಅನ್ನದಾನ ಮಾಡುವುದು ಒಂದು ಪರಮ ಧರ್ಮವೆಂದು ಪರಿಗಣಿಸಲಾಗಿತ್ತು. ಹಸಿದವರಿಗೆ ಊಟ ಹಾಕುವುದು ಎಂದರೆ ಅವರಿಗೆ ಮರುಜೀವ ನೀಡುವುದಕ್ಕೆ ಸಮಾನ ಎಂಬ ಉದಾತ್ತ ಚಿಂತನೆಯನ್ನು ಬೌದ್ಧ ಸಾಹಿತ್ಯವು ಸಾರುತ್ತದೆ. ನಮ್ಮ ಈ ಪುಣ್ಯಭೂಮಿಯಲ್ಲಿ ಸಾವಿರಾರು ವರ್ಷಗಳಿಂದ ವಿವಿಧ ಆಧ್ಯಾತ್ಮಿಕ ಚಿಂತನೆಗಳು ಮತ್ತು ತತ್ವಶಾಸ್ತ್ರಗಳು ಹುಟ್ಟಿ ಬೆಳೆದಿವೆ. ಅದು ಬೌದ್ಧಧರ್ಮವಿರಲಿ ಅಥವಾ ಜೈನಧರ್ಮವಿರಲಿ, ಯಾವುದೇ ಧರ್ಮವನ್ನಾದರೂ ಭಾರತಾದ್ಯಂತ ಏಕತೆಯ ಭಾವದಿಂದ ಸ್ವೀಕರಿಸಲಾಗಿದೆ. ಇದು ನಮ್ಮ ದೇಶವು ಸಾಂಸ್ಕೃತಿಕವಾಗಿ ಮತ್ತು ಭಾವನಾತ್ಮಕವಾಗಿ ಮೊದಲಿನಿಂದಲೂ ಒಂದೇ ಎಂಬ ಸತ್ಯವನ್ನು ಸಾಬೀತುಪಡಿಸುತ್ತದೆ. ನಿರಂತರ ಕಲಿಕೆಗೆ ಒತ್ತು ನೀಡಿದ ಬೌದ್ಧಧರ್ಮವು, ಅತ್ಯಂತ ದೊಡ್ಡ ಮಟ್ಟದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಮತ್ತು ಗ್ರಂಥಾಲಯಗಳನ್ನು ನಿರ್ಮಿಸಿತು. ಸುಮಾರು 5 ಶತಮಾನದಷ್ಟು ಹಿಂದೆಯೇ ನಳಂದಾ ವಿಶ್ವವಿದ್ಯಾನಿಲಯವು ಜಗತ್ತಿನ ಶ್ರೇಷ್ಠ ಕಲಿಕಾ ಕೇಂದ್ರವಾಗಿ ಹೊರಹೊಮ್ಮಿತ್ತು. ಅಲ್ಲಿ ಸುಮಾರು 10,000 ವಿದ್ಯಾರ್ಥಿಗಳು ಮತ್ತು 1,500 ಶಿಕ್ಷಕರು ಅಧ್ಯಯನ ಹಾಗೂ ಬೋಧನೆಯಲ್ಲಿ ತೊಡಗಿದ್ದರು ಎಂಬುದು ಹೆಮ್ಮೆಯ ವಿಷಯ.

ನಳಂದಾದಂತೆಯೇ, ತಮಿಳುನಾಡಿನ ಕಾಂಚೀಪುರದಲ್ಲೂ ಒಂದು ಸುಪ್ರಸಿದ್ಧ ವಿಶ್ವವಿದ್ಯಾನಿಲಯವಿತ್ತು ಎಂದು ಇತಿಹಾಸದ ದಾಖಲೆಗಳು ಹೇಳುತ್ತವೆ. ವಿಕ್ರಮಶಿಲಾ ಮತ್ತು ಓದಂತಪುರಿಯಂತಹ ವಿಶ್ವವಿದ್ಯಾನಿಲಯಗಳು ಹಾಗೂ ಅಲ್ಲಿ ರಚಿತವಾದ ಅಪಾರ ಸಾಹಿತ್ಯ ಕೃತಿಗಳು, ಭಾರತದ ಬೌದ್ಧಿಕ ಶಕ್ತಿಯನ್ನು ಇಡೀ ಜಗತ್ತಿಗೆ ಪರಿಚಯಿಸಿದವು.

ಬೌದ್ಧ ಶಿಕ್ಷಣ ಕೇಂದ್ರಗಳಲ್ಲಿ ಕಲಿಯಲು ಏಷ್ಯಾದ ಮೂಲೆ ಮೂಲೆಗಳಿಂದ ವಿದ್ವಾಂಸರು ಭಾರತಕ್ಕೆ ಬರುತ್ತಿದ್ದರು. ಚೀನಾದ ಪ್ರಸಿದ್ಧ ಬಿಕ್ಕು ಫಾಹಿಯಾನ್, ಬೌದ್ಧಧರ್ಮದ ಅಧ್ಯಯನಕ್ಕಾಗಿಯೇ ಭಾರತದಲ್ಲಿ 15 ವರ್ಷಗಳ ಕಾಲ ಸಂಚರಿಸಿದ್ದರು. ಮತ್ತೊಬ್ಬ ಚೀನೀ ಬಿಕ್ಕು ಹ್ಯುಯೆನ್ ತ್ಸಾಂಗ್ ಅವರು 16 ವರ್ಷಗಳ ಕಾಲ ಭಾರತದಲ್ಲಿದ್ದು, ನಳಂದಾ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡಿದ್ದಲ್ಲದೆ ಅಮೂಲ್ಯ ಗ್ರಂಥಗಳನ್ನು ಸಂಗ್ರಹಿಸಿ ತಮ್ಮ ದೇಶಕ್ಕೆ ಕೊಂಡೊಯ್ದರು. ಹ್ಯುಯೆನ್ ತ್ಸಾಂಗ್ ಬರೆದಿರುವ ಪ್ರವಾಸ ಕಥನಗಳ ಪ್ರಕಾರ, ಅವರು ತಮಿಳುನಾಡಿನ ಕಾಂಚೀಪುರಂಗೆ ಭೇಟಿ ನೀಡಿದ್ದರು. ಅಲ್ಲಿನ ಬೌದ್ಧ ವಿಶ್ವವಿದ್ಯಾನಿಲಯದಲ್ಲಿ ಉಳಿದುಕೊಂಡು ಹಸ್ತಪ್ರತಿಗಳನ್ನು ನಕಲು ಮಾಡಿಕೊಂಡಿದ್ದರು. ಅಷ್ಟೇ ಅಲ್ಲದೆ, ಅಲ್ಲಿನ ವಿದ್ಯಾರ್ಥಿಗಳಿಗಾಗಿ ಅವರು ವಿಶೇಷ ಉಪನ್ಯಾಸಗಳನ್ನು ನೀಡಿದ್ದರು ಎಂಬ ಮಾಹಿತಿ ಇದೆ.

ತೀವ್ರವಾದ ತಪಸ್ಸಿನಿಂದಾಗಿ ಬುದ್ಧನು ದೈಹಿಕವಾಗಿ ಬಹಳ ಬಳಲಿದ್ದನು. ಆತನ ಸ್ಥಿತಿಯನ್ನು ಕಂಡು ಕನಿಕರಗೊಂಡ ಸುಜಾತೆ, ಪ್ರೀತಿಯಿಂದ ಹಾಲಿನ ಪಾಯಸವನ್ನು (ಕ್ಷೀರಾನ್ನ) ಅರ್ಪಿಸಿದಳು. ಇದು ಬುದ್ಧನಿಗೆ ಪುನಶ್ಚೇತನ ನೀಡಿ ಪ್ರಾಣ ಉಳಿಸಿದ್ದಲ್ಲದೆ, ಬೋಧಿ ವೃಕ್ಷದ ಅಡಿಯಲ್ಲಿ ಜ್ಞಾನೋದಯಕ್ಕಾಗಿ ಧ್ಯಾನ ಮಾಡಲು ಬೇಕಾದ ಶಕ್ತಿಯನ್ನು ನೀಡಿತು. ಆಕೆಯ ಈ ಮಮತೆ ಮತ್ತು ದಯೆಯ ನೆನಪಿಗಾಗಿ, ಇಂದಿಗೂ ಬುದ್ಧ ಪೂರ್ಣಿಮೆಯ ದಿನದಂದು ಪಾಯಸವನ್ನು ತಯಾರಿಸಿ ಅರ್ಪಿಸುವ ಸಂಪ್ರದಾಯವಿದೆ. ಪ್ರೀತಿಯೇ ಸಂತೋಷದ ಸೆಲೆ, ಪ್ರೀತಿಯೇ ಜಗತ್ತಿನ ಬೆಳಕು ಮತ್ತು ಪ್ರೀತಿಯೇ ಎಲ್ಲಕ್ಕಿಂತ ದೊಡ್ಡ ಶಕ್ತಿ ಎಂಬ ಬುದ್ಧನ ಬೋಧನೆಗಳು ಇಂದಿನ ಆಧುನಿಕ ಜಗತ್ತಿಗೂ ಅತ್ಯಂತ ಅಗತ್ಯವಾಗಿವೆ. ಈ ಜಗತ್ತಿನಾದ್ಯಂತ ಪ್ರೀತಿ ಮತ್ತು ಶಾಂತಿ ಸದಾ ನೆಲಸಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಪಶ್ಚಿಮ ಬಂಗಾಳ: ಮತದಾರನ ಸಂದೇಶವೇನು?

▸ ಅರವಿಂದ ಶೆಣೈ

ಬಿಜೆಪಿಯ ತಾಳ್ಮೆ ಮತ್ತು ಸಂಘಟನಾ ಚತುರತೆ ಈ ಬಾರಿಯ ಚುನಾವಣೆಯಲ್ಲಿ ಫಲ ನೀಡುವುದೆ, ತೃಣಮೂಲದ ಕೋಟೆಯನ್ನು ಭೇದಿಸುವುದೇ ?

ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶದ ಕುರಿತಂತೆ ಎಕ್ಸಿಟ್ ಪೋಲ್‌ಗಳು ನುಡಿದಿರುವ ಭವಿಷ್ಯಗಳು ಎಲ್ಲರ ಕುತೂಹಲವನ್ನು ಇಮ್ಮಡಿಗೊಳಿಸಿದೆ. ಪ.ಬಂಗಾಳದಲ್ಲಿ ಮಮತಾ ಬ್ಯಾನರ್ಜಿಗೆ ಇದಿರಿಲ್ಲ ಎಂದು ಬಹುತೇಕ ಮಂದಿ ಭಾವಿಸಿದ್ದರೆ, ಕೆಲವು ಎಕ್ಸಿಟ್ ಪೋಲ್‌ಗಳು ಮಮತಾಗೆ ಈ ಬಾರಿ ಸೋಲಾಗುವ ಹಾಗೂ ಬಿಜೆಪಿಯೇ ಅಧಿಕಾರ ಹಿಡಿಯುವ ಸಾಧ್ಯತೆಯಿದೆ ಎಂದು ತಿಳಿಸಿರುವುದು ರೋಚಕತೆ ಸೃಷ್ಟಿಸಿದೆ. ಇನ್ನು ಕೆಲವು ಎಕ್ಸಿಟ್ ಪೋಲ್‌ಗಳು ಟಿಎಂಸಿಯೇ ಅಧಿಕಾರ ಹಿಡಿಯುವುದೆಂದು ನುಡಿದಿದ್ದರೂ ಬಿಜೆಪಿ ನಿರ್ವಹಣೆಯೂ ಉನ್ನತ ಮಟ್ಟದಲ್ಲಿರುವುದೆಂದು ತಿಳಿಸಿವೆ.

34 ಲಕ್ಷ ಹೆಚ್ಚುವರಿ ಮತಗಳು ಯಾರ ಪರ?

ಪ.ಬಂಗಾಳದಲ್ಲಿ ಈ ಬಾರಿ ಶೇ.90ಕ್ಕಿಂತ ಹೆಚ್ಚು ಮತದಾನ ಆಗಿರುವುದು ಎಲ್ಲರ ಹುಬ್ಬೇರಿಸಿದೆ. ಇದು 'ಎಸ್ಐಆರ್' ಫಲ ಎಂಬುದಾಗಿ ಕೆಲವರು ವಿಶ್ಲೇಷಿಸುತ್ತಾರೆ. ಆದರೆ ಅದಷ್ಟೇ ನಿಜವಲ್ಲ. 2021ಕ್ಕೆ ಹೋಲಿಸಿದರೆ ಈ ಬಾರಿ 34 ಲಕ್ಷ ಹೆಚ್ಚು ಮತದಾರರು ಮತ ಹಾಕಿದ್ದಾರೆ. 2021ರಲ್ಲಿ 5.98 ಕೋಟಿ ಮತದಾರರು ಮತ ಚಲಾಯಿಸಿದ್ದರೆ, ಈ ಬಾರಿ ಮತ ಚಲಾಯಿಸಿದವರ ಸಂಖ್ಯೆ 6.31 ಕೋಟಿ. ಎಸ್ಐಆರ್‌ನಲ್ಲಿ 90 ಲಕ್ಷ ಮತದಾರರ ಹೆಸರು ತೆಗೆದು ಹಾಕಿದ ಹೊರತಾಗಿಯೂ 34 ಲಕ್ಷ ಹೆಚ್ಚುವರಿ ಮತದಾರರು ಮತದಾನ ಮಾಡಿರುವುದು ಗಮನಾರ್ಹ.



2021ರಲ್ಲಿ ತೃಣಮೂಲ ಕಾಂಗ್ರೆಸಿಗೆ ಬಿಜೆಪಿಗಿಂತ ಒಟ್ಟು 60 ಲಕ್ಷ ಹೆಚ್ಚು ಮತ ಬಿದ್ದಿತ್ತು. ಆಗಿನ ಮತದಾರರು ಈಗಲೂ ಅದೇ ರೀತಿ ಮತ ಚಲಾಯಿಸಿದ್ದಾರೆ ಎಂದುಕೊಂಡರೂ, ಹೆಚ್ಚುವರಿ 34 ಲಕ್ಷ ಮತದಾರರು ಫಲಿತಾಂಶವನ್ನೆ ಬದಲಿಸಿಬಿಡುವ ಸಾಮರ್ಥ್ಯ ಹೊಂದಿದ್ದಾರೆ.

ಈ ಮತದಾರರು ಯಾವ ಪಕ್ಷದೆಡೆಗೆ ಒಲವು ತೋರಿದ್ದಾರೆ ಎನ್ನುವುದು ಒಟ್ಟು ಫಲಿತಾಂಶದ ಮೇಲೆ ನಿರ್ಣಾಯಕ ಪರಿಣಾಮ ಬೀರಲೂ ಬಹುದು.

"ಈ ಬಾರಿ ಮತದಾರರು ತೃಣಮೂಲದ ಬೆದರಿಕೆಗೆ ಮಣಿಯದೆ ನಿರ್ಭೀತಿಯಿಂದ ಮತಗಟ್ಟೆಗೆ ಬಂದಿದ್ದಾರೆ. ಇದೆಲ್ಲ ಆಡಳಿತ ವಿರೋಧಿ ಮತಗಳು" ಎಂಬುದಾಗಿ ಬಿಜೆಪಿ ಬಣ್ಣಿಸುತ್ತಿದೆ. ಆದರೆ ತೃಣಮೂಲ ಈ ವಾದವನ್ನು ತಳ್ಳಿ ಹಾಕಿ, ಎಸ್ಐಆರ್ ವಿರುದ್ಧ ತಮ್ಮ ಆಕ್ರೋಶ ಹೊರಹಾಕಲು ಬಂದ ಮತದಾರರಿವರು ಎಂದು ಹೇಳಿಕೊಂಡಿದೆ.

ಸರಕಾರ ರೂಪಿಸುವ ಆ ಐದು ಜಿಲ್ಲೆಗಳು

ಕೆಲವು ದಶಕಗಳಿಂದ ಪ.ಬಂಗಾಳದಲ್ಲಿ ಯಾವ ಪಕ್ಷ ಆಡಳಿತಕ್ಕೆ ಬರುವುದೆಂಬುದನ್ನು ಐದು ಜಿಲ್ಲೆಗಳು ನಿರ್ಧರಿಸುತ್ತವೆ. ಈ ಬಾರಿಯೂ ಚಿತ್ರಣ ಬದಲಾಗಿಲ್ಲ, ಈ ಐದು ಜಿಲ್ಲೆಗಳೇ ಪ.ಬಂಗಾಳದ ಆಡಳಿತ ಯಾರ ಕೈಗೆ ಬರಬಹುದೆಂಬುದನ್ನು ನಿರ್ಧರಿಸುವಂತಿದೆ. ಈ ಐದು ಜಿಲ್ಲೆಗಳನ್ನು 'ಪ್ರೆಸಿಡೆನ್ಸಿ ವಲಯ' ಎಂದು ಕರೆಯಲಾಗುತ್ತದೆ. ಎರಡನೇ ಹಂತದಲ್ಲಿ ಅಂದರೆ, ಏ.29ರಂದು ಈ ಪ್ರದೇಶದಲ್ಲಿ ಮತದಾನ ನಡೆದಿದ್ದು, ಅಲ್ಲೂ ಭಾರೀ ಪ್ರಮಾಣದ ಮತದಾನ ನಡೆದಿದೆ.

ಈ ಐದು ಜಿಲ್ಲೆಗಳು ಪ್ರತಿಬಾರಿಯೂ ಒಂದು ಪಕ್ಷಕ್ಕೆ ಭಾರೀ ಬೆಂಬಲ ನೀಡಿ ಮತ್ತೊಂದು ಪಕ್ಷವನ್ನು ನೆಲಕಚ್ಚಿಸುವ ರೂಢಿ ಹೊಂದಿವೆ. 1977ರಲ್ಲಿ ಎಡಪಕ್ಷಗಳು ಅಧಿಕಾರಕ್ಕೇರಿದಂದಿನಿಂದ ಇದೇ ಕಥೆ ನಡೆದಿದೆ. ಈ ಐದು ಜಿಲ್ಲೆಗಳೆಂದರೆ- ಕೊಲ್ಕತಾ, ಹೌರಾ, 24 ಉತ್ತರ ಪರಗಣ, 24 ದಕ್ಷಿಣ ಪರಗಣ ಮತ್ತು ನಾಡಿಯಾ. ಮೊದಲೇ ಹೇಳಿದಂತೆ ಈ ಐದು ಜಿಲ್ಲೆಗಳು ಯಾವುದಾದರೂ ಒಂದು ಪಕ್ಷವನ್ನು ಪೂರ್ಣವಾಗಿ ಬೆಂಬಲಿಸುತ್ತವೆ. ಮಹತ್ವದ ವಿಚಾರವೆಂದರೆ ಪ.ಬಂಗಾಳದ ಒಟ್ಟು 294 ಸ್ಥಾನಗಳಲ್ಲಿ 108 ಸ್ಥಾನಗಳು ಈ ಐದು ಜಿಲ್ಲೆಗಳಲ್ಲಿವೆ. ಹಾಗಾಗಿ ಈ ಕ್ಷೇತ್ರಗಳು ಚುನಾವಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ.

ಈ ಪ್ರದೇಶದ ವಿಶೇಷವೆಂದರೆ ಪ.ಬಂಗಾಳದ ಮುಖ್ಯಮಂತ್ರಿಗಳೂ ಇದೇ ಜಿಲ್ಲೆಗಳಿಂದ ಆಯ್ಕೆಯಾಗುತ್ತಿರುವುದು. ಪ.ಬಂಗಾಳದ ಸಾಂಸ್ಕೃತಿಕ ಮತ್ತು ಬೌದ್ಧಿಕ ಕೇಂದ್ರ ಕೂಡಾ ಇದೇ ಪ್ರದೇಶವಾಗಿದೆ. ವಿಪರ್ಯಾಸವೆಂದರೆ ಹಿಂಸಾಚಾರ, ಅಪರಾಧ, ಬೆದರಿಕೆ ಮುಂತಾದವುಗಳಲ್ಲೂ ಇದೇ ಪ್ರದೇಶ ಕುಖ್ಯಾತಿ ಪಡೆದಿದೆ. 1984ರಲ್ಲಿ ಅತ್ಯಂತ ನಿಷ್ಠ ಪೊಲೀಸ್ ಅಧಿಕಾರಿಯಾಗಿದ್ದ ಸಂಜೀವ್ ಮೆಹ್ತಾ ಅವರನ್ನು ಹೌರಾದಲ್ಲಿ ಗೂಂಡಾಗಳ ತಂಡವೊಂದು ಕಡಿದು ಕೊಲೆಗೈದಿತ್ತು. ಮೊನ್ನೆ ಮೊನ್ನೆ ಚುನಾವಣಾ ಕಾರ್ಯಕ್ಕೆ ನಿಯುಕ್ತರಾಗಿದ್ದ ಉತ್ತರ ಪ್ರದೇಶದ ಪೊಲೀಸ್ ಅಧಿಕಾರಿ 'ಸಿಂಗಂ' ಖ್ಯಾತಿಯ ಅಜಯ್ ಶರ್ಮಾ ತೃಣಮೂಲದ ಅಭ್ಯರ್ಥಿ ಜಹಾಂಗೀರ್ ಖಾನ್‌ಗೆ ಚುನಾವಣಾ ಅಕ್ರಮ ನಡೆಸದಂತೆ ಎಚ್ಚರಿಕೆ ನೀಡಿದ, ಅದಕ್ಕೆ ಪ್ರತಿಯಾಗಿ ಜಹಾಂಗೀರ್ ಖಾನ್ ಕೂಡಾ ಬೆದರಿಕೆ ಹಾಕಿದ ಘಟನೆ ನಡೆದಿದೆ.

ಮಾಜಿ ಮುಖ್ಯಮಂತ್ರಿ ಜ್ಯೋತಿಬಸು ದಕ್ಷಿಣ ಪರಗಣ ಜಿಲ್ಲೆಯ ಸತ್ಗಾಚಿಯಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. ಬುದ್ಧದೇವ್ ಭಟ್ಟಾಚಾರ್ಯ ಜಾದವ್‌ಪುರದಿಂದ ಸ್ಪರ್ಧಿಸಿದ್ದರು. ಮಮತಾ ಬ್ಯಾನರ್ಜಿ ಕೊಲ್ಕತಾದ ಭವಾನಿಪುರದಿಂದ ಸ್ಪರ್ಧಿಸುತ್ತಿದ್ದಾರೆ. ಆಕೆಯ ವಿರುದ್ಧವಾಗಿ ಬಿಜೆಪಿಯ ಸುವೇಂದು ಅಧಿಕಾರಿ ಇದೇ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

2006ರಲ್ಲಿ ಎಡರಂಗವು ಕಟ್ಟಕಡೆಯದಾಗಿ ಚುನಾವಣೆ ಜಯಿಸಿದಾಗ ಅದು ಈ ಐದು ಜಿಲ್ಲೆಗಳ 108 ಸ್ಥಾನಗಳಲ್ಲಿ 72ನ್ನು ಗೆದ್ದಿತ್ತು. ಮಮತಾ ಬ್ಯಾನರ್ಜಿ ಅಬ್ಬರದ ಪ್ರಚಾರ ನಡೆಸಿದ ಹೊರತಾಗಿಯೂ ಕಮ್ಯುನಿಸ್ಟ್ ಕೋಟೆಯನ್ನು ಭೇದಿಸಲು ವಿಫಲರಾಗಿದ್ದರು. ಎಡರಂಗದ ಬುದ್ಧದೇವ್ ಮುಖ್ಯಮಂತ್ರಿಯಾಗಿ ಮುಂದುವರಿದಿದ್ದರು. ಆದರೆ 2011ರಲ್ಲಿ ಇಲ್ಲಿ ಕಮ್ಯುನಿಸ್ಟ್ ಕೋಟೆ ಧರಾಶಾಯಿಯಾಯಿತು. ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿ ಕಮ್ಯುನಿಸ್ಟರನ್ನು ಧೂಳೀಪಟ ಮಾಡಿದವು. ಈ ಪ್ರದೇಶದ 82 ಸ್ಥಾನಗಳನ್ನು ಗೆಲ್ಲಲು ಈ ಮೈತ್ರಿಕೂಟ ಸಫಲವಾಯಿತು. ಆ ಕಾಲದಲ್ಲಿ ಹಲವಾರು ರಾಜಕೀಯ ವಿಶ್ಲೇಷಕರು ಇದೊಂದು ಅನಿರೀಕ್ಷಿತ ಬೆಳವಣಿಗೆ. ಮುಂದಿನ ಚುನಾವಣೆಯಲ್ಲಿ ಮತ್ತೆ ಎಡರಂಗ ಅಧಿಕಾರಕ್ಕೆ ಬರಲಿದೆ ಎಂದು ಮಾತನಾಡಿಕೊಂಡಿದ್ದರು. ಆದರೆ ಅವರ ಭವಿಷ್ಯ ಸುಳ್ಳಾಯಿತು. ಬಳಿಕ ಎಡರಂಗ ಅಧಿಕಾರಕ್ಕೆ ಬರಲೇ ಇಲ್ಲ.

ಅಲ್ಲಿಂದ ಬಳಿಕ ಈ ಪ್ರೆಸಿಡೆನ್ಸಿ ಪ್ರದೇಶವು ತೃಣಮೂಲದ ಭದ್ರಕೋಟೆಯಾಯಿತು. 2016ರ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿದ ತೃಣಮೂಲ ಕಾಂಗ್ರೆಸ್ 91 ಸ್ಥಾನಗಳನ್ನು ಇಲ್ಲಿ ಗೆದ್ದಿತು. 2021ರಲ್ಲಿ ಬಿಜೆಪಿಯ ಪ್ರಬಲ ಹೋರಾಟದ ಹೊರತಾಗಿಯೂ 97 ಸ್ಥಾನಗಳನ್ನು ಗೆದ್ದಿತು. ಒಂದು ವಲಯದಿಂದಲೇ 80-90 ಸ್ಥಾನಗಳನ್ನು ಗೆದ್ದರೆ, ಮತ್ತೆ ಬಹುಮತಕ್ಕೆ ಬೇಕಾದ 148 ಸ್ಥಾನಗಳನ್ನು ಗಳಿಸುವುದು ಕಷ್ಟವೇನಲ್ಲ. ಕಳೆದ ಕೆಲವು ದಶಕಗಳಿಂದ ಆಗುತ್ತಿರುವುದು ಇದುವೆ. ಆಡಳಿತ ಪಕ್ಷವು ಈ ಐದು ಜಿಲ್ಲೆಗಳಲ್ಲಿ ಅಧಿಕ ಸ್ಥಾನಗಳನ್ನು ಗೆಲ್ಲುವ ಮೂಲಕ ಇಡೀ ರಾಜ್ಯದ ಚುಕ್ಕಾಣಿ ಹಿಡಿಯುವಂತಾಗಿದೆ.

ಅದಕ್ಕಾಗಿಯೇ ಬಿಜೆಪಿ ಕೂಡಾ ಈ ಬಾರಿ ಈ ಪ್ರೆಸಿಡೆನ್ಸಿ ವಲಯದಲ್ಲಿ ಉತ್ತಮ ನಿರ್ವಹಣೆ ನೀಡಲು ಹೆಚ್ಚು ಶ್ರಮ ಹಾಕಿರುವುದು. ಈ ಪ್ರದೇಶದಲ್ಲಿ ಮಮತಾ ಕೋಟೆಯನ್ನು ಭೇದಿಸಿದರೆ ಪ.ಬಂಗಾಳವನ್ನು ಗೆಲ್ಲುವುದು ಕಷ್ಟವಲ್ಲವೆಂದು ಬಿಜೆಪಿ ಕೂಡಾ ಅರಿತಿದೆ. 2011ರಲ್ಲಿ ಕಮ್ಯುನಿಸ್ಟರು ಧೂಳೀಪಟವಾದಂತೆಯೇ ಈ ಬಾರಿ ತೃಣಮೂಲ ಕಾಂಗ್ರೆಸ್ ಧೂಳೀಪಟವಾಗಬಹುದೆಂದು ಬಿಜೆಪಿ ನಿರೀಕ್ಷಿಸುತ್ತಿದೆ. ಆದರೆ ಅದು ಅಷ್ಟು ಸುಲಭವಲ್ಲ ಎಂಬುದೂ ನಿಜವೆ. ಯಾಕೆಂದರೆ ಈ ಪ್ರದೇಶದಲ್ಲಿ ಮುಸ್ಲಿಮರ ಸಂಖ್ಯೆಯೂ ಅಧಿಕವಿದೆ. ಮಮತಾ ಪಕ್ಷವಂತೂ ಮುಸ್ಲಿಮರನ್ನು ಅತಿಯಾಗಿ ಓಲೈಸುತ್ತಿದೆ.

ಬಿಜೆಪಿ ತಾಳ್ಮೆಯುತ ಸಿದ್ಧತೆ

ಬಿಜೆಪಿಯೇನೂ ಹಠಾತ್ತನೆ ಪ.ಬಂಗಾಳದಲ್ಲಿ ಸ್ಪರ್ಧೆಗೆ ಧುಮುಕುತ್ತಿರುವುದಲ್ಲ. 2021ರಲ್ಲಿ ಈ ಐದು ಜಿಲ್ಲೆಗಳಲ್ಲಿ ಬಿಜೆಪಿ ಸೋಲಲು ಕಾರಣ ಅದಕ್ಕೆ ಅಭ್ಯರ್ಥಿಗಳು ದೊರಕದಿದ್ದುದು. ತೃಣಮೂಲದಿಂದ ಅತೃಪ್ತರಾಗಿ ಬಂದ ವ್ಯಕ್ತಿಗಳಿಗೆ ಬಿಜೆಪಿ ಟಿಕೆಟ್ ನೀಡಲಾಗಿತ್ತು. ಅವರೆಲ್ಲರೂ ಸೋತಿದ್ದರು. ಸೋತ ಬಳಿಕ ಅವರೆಲ್ಲ ಮತ್ತೆ ತೃಣಮೂಲ ಪಕ್ಷವನ್ನು ಸೇರಿಕೊಂಡಿದ್ದರು. ಬಿಜೆಪಿ ಇದರಿಂದ ಪಾಠ ಕಲಿತುಕೊಂಡಿತು. ಕಳೆದ ಐದು ವರ್ಷಗಳಿಂದ ಬಿಜೆಪಿ ಈ ಪ್ರದೇಶದಲ್ಲಿ ತನ್ನದೇ ಆದ ಬಲಿಷ್ಠ ಅಭ್ಯರ್ಥಿಗಳನ್ನು ಬೆಳೆಸುವ ಪ್ರಯತ್ನ ನಡೆಸಿದೆ. ಈ ಬಾರಿಯ ಅಭ್ಯರ್ಥಿ ಪಟ್ಟಿಯಲ್ಲಿ ಸ್ಥಳೀಯ ಮುಖಂಡರೇ ಹೆಚ್ಚು ಕಾಣುತ್ತಿದ್ದಾರೆ.

ತಾಳ್ಮೆ ಹಾಗೂ ವ್ಯವಸ್ಥಿತ ಸಿದ್ಧತೆ ರಾಜ್ಯ ಗೆಲ್ಲಲು ಮುಖ್ಯ ಎಂಬುದನ್ನು ಬಿಜೆಪಿ ಅರಿತಿದೆ. ಈಗ ಬಿಜೆಪಿ ಪ್ರಬಲವಾಗಿರುವ ಪ್ರತಿಯೊಂದು ರಾಜ್ಯದಲ್ಲಿ ಕೂಡಾ ಆರಂಭದಲ್ಲಿ ಪಕ್ಷವು ಸೋಲು ಕಂಡಿತ್ತು.

ಹಿನ್ನಡೆ ಅನುಭವಿಸಿತ್ತು. ಆ ಸೋಲುಗಳಿಂದಲೇ ಪಾಠ ಕಲಿತು ಮೇಲೇರಿ ಬಂದಿತ್ತು. ಮಹಾರಾಷ್ಟ್ರದಲ್ಲಿ ಪಕ್ಷ ಬೆಳೆಸುವ ಕಾರ್ಯ 1970ರಿಂದಲೇ ಆರಂಭವಾಗಿತ್ತು. ಕರ್ನಾಟಕದಲ್ಲಿ 1990ರಲ್ಲಿ ಇಂತಹ ಕಾರ್ಯಕ್ಕೆ ಚಾಲನೆ ನೀಡಲಾಗಿತ್ತು. ತನ್ನ ಹಿಂದೆ ಬಲಿಷ್ಠ ಸಂಘಟನಾ ಸಾಮರ್ಥ್ಯವಿದೆ ಎಂದು ಖಚಿತವಾದ ಬಳಿಕವೇ ಬಿಜೆಪಿ ಚುನಾವಣೆ ಗೆಲ್ಲುವ ಮತ್ತು ಸರಕಾರ ರಚಿಸುವ ಕುರಿತಂತೆ ಗಂಭೀರ ಚಿಂತನೆ ನಡೆಸುವುದು. ಬಿಜೆಪಿಯ ತಾಳ್ಮೆ ಮತ್ತು ಸಂಘಟನಾ ಚತುರತೆ ಈ ಬಾರಿಯ ಚುನಾವಣೆಯಲ್ಲಿ ಫಲ ನೀಡುವುದೆ, ತೃಣಮೂಲದ ಕೋಟೆಯನ್ನು ಭೇದಿಸುವುದೇ ಎಂಬುದನ್ನು ಮೇ 4ರ ಫಲಿತಾಂಶ ತಿಳಿಸಲಿದೆ.

ಕಟ್ಟಡ ಉಪವಿಧಿಗಳ ತಿದ್ದುಪಡಿಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯ

▸ ಡಾ. ಎಂ.ಕೆ.ಶ್ರೀಧರನ್, ಸಾರ್ವಜನಿಕ ವ್ಯವಹಾರಗಳ ವಿಶ್ಲೇಷಕರು

ಗ್ರೇಟರ್ ಬೆಂಗಳೂರು ಪ್ರಾಧಿಕಾರವು (ಜಿಬಿಎ) ತನ್ನ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳ ಉಪವಿಧಿಗಳ ತಿದ್ದುಪಡಿಗಾಗಿ ಕರಡು ಅಧಿಸೂಚನೆ ರೂಪಿಸಿ ದಿನಾಂಕ 1 ನೇ ಏಪ್ರಿಲ್ 2026 ರಂದು ಐದೂ ನಗರ ಪಾಲಿಕೆಗಳ ಮೂಲಕ ಪ್ರಕಟಿಸಿ ಮುಂದಿನ 30 ದಿನಗಳಲ್ಲಿ ಆಯಾ ನಗರ ಪಾಲಿಕೆಗಳಲ್ಲಿ ಆಕ್ಷೇಪಣೆ ಹಾಗೂ ಸಲಹೆಗಳನ್ನು ಅವಕಾಶ ಕಲ್ಪಿಸಿದೆ. ಈ ಅಧಿಸೂಚನೆಯಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಿರುವ ಹಲವಾರು ಕಟ್ಟಡ ನಿರ್ಮಾಣಗಳಲ್ಲಿನ ಉಲ್ಲಂಘನೆ ಮಿತಿಯನ್ನು ಹಾಲಿ ಇರುವ ಶೇ. 5 ರಿಂದ ಶೇ.15ಕ್ಕೆ ಹೆಚ್ಚಿಸುವ ಪ್ರಸ್ತಾವವನ್ನು ಮಾಡಲಾಗಿದೆ. ನಕ್ಷೆಯ ಉಲ್ಲಂಘನೆ ಮಾಡಿರುವ ಕಟ್ಟಡಗಳ ಸಂಖ್ಯೆ ಹೆಚ್ಚಾಗಿದ್ದು, ಅವುಗಳಿಗೆ ನೀರು ಮತ್ತು ವಿದ್ಯುತ್ ಸಂಪರ್ಕ ಸಿಗದಿರುವುದರಿಂದ ಜನರಿಗೆ ತೊಂದರೆ ಆಗುತ್ತಿದ್ದು ಅದನ್ನು ಪರಿಹರಿಸಲು ಈ ಅಧಿಸೂಚನೆ ಸಹಕಾರಿ ಎಂಬುದು ಸರ್ಕಾರದ ನಿಲುವು.

ಆದರೆ ನಿಯಮ ಉಲ್ಲಂಘನೆ ಮಾಡಿದ ಕಟ್ಟಡಗಳನ್ನು ಕ್ರಮಬದ್ಧಗೊಳಿಸುವ ಕ್ರಮ ಹಲವು ಅನಪೇಕ್ಷಿತ ಪರಿಣಾಮಗಳನ್ನು ಉಂಟುಮಾಡುತ್ತವೆ ಎಂದು ವಿಷಯ ಪರಿಣಿತರು ಎಚ್ಚರಿಸುತ್ತಾರೆ. ಮೊದಲನೆಯದು ಉಲ್ಲಂಘನೆಯನ್ನು ಕ್ರಮಬದ್ಧಗೊಳಿಸುವುದು ಒಳ್ಳೆಯ ಆಡಳಿತದ ಲಕ್ಷಣವಲ್ಲ. ಇಂಥ ಕ್ರಮಗಳನ್ನು ನ್ಯಾಯಾಲಯಗಳು ಪದೇ ಪದೇ ಸ್ಥಗಿತಮಾಡಿವೆ ಮತ್ತು ರದ್ದುಗೊಳಿಸಿವೆ. ಯೋಜನಾಬದ್ಧವಾದ ನಗರದ ಬೆಳವಣಿಗೆ ಇದು ಮಾರಕವೂ ಹೌದು. ಜೊತೆಗೆ ನಿಯಮಗಳನ್ನು ಅನುಸರಿಸಿ ಮನೆ-ಕಟ್ಟಡ ಕಟ್ಟಿರುವ ಎಲ್ಲಾ ನಾಗರಿಕರನ್ನೂ ಅಗೌರವಿಸಿದಂತೆ ಭಾಸವಾಗುವ ಪರಿಣಾಮ ಈ ಅಧಿಸೂಚನೆಯಿಂದ ಆಗುತ್ತದೆ. ಕಾನೂನಿಗೆ ಅನುಗುಣವಾಗಿ ಇಷ್ಟು ಸಂಖ್ಯೆಯ ಕಟ್ಟಡಗಳು ಏಕೆ ನಿರ್ಮಾಣವಾದವು ಎಂಬ ಪ್ರಶ್ನೆ ಇಲ್ಲಿ ಪ್ರಸ್ತುತ. ಪಾಲಿಕೆಯ ಮತ್ತು ಸರ್ಕಾರದ ಅಧಿಕಾರಿಗಳು ಕಾನೂನುಗಳ ಪಾಲನೆಯಲ್ಲಿ ವಿಫಲವಾಗಿರುವುದೇ ಇದಕ್ಕೆ ಮೂಲ ಕಾರಣ. ಭ್ರಷ್ಟಾಚಾರವು ಕಾನೂನುಗಳ ಅನುಷ್ಠಾನವನ್ನು ಸಡಿಲಗೊಳಿಸಿದೆ ಎಂಬುದು ವ್ಯಾಪಕವಾಗಿರುವ ಅಭಿಪ್ರಾಯವಾಗಿದೆ. ಜನಪ್ರತಿನಿಧಿಗಳ ಸಮ್ಮತಿ ಇಲ್ಲದೇ ಈ ವೈಫಲ್ಯ ಸಾಧ್ಯವಾಗುವುದಾಗಲೀ ಅಥವಾ ಮುಂದುವರೆಯುವುದಾಗಲೀ ಅಸಂಭವ.

ಕಳೆದ ಎರಡು ದಶಕಗಳಿಂದ ಕರ್ನಾಟಕದ ಸರ್ಕಾರಗಳು ಉಲ್ಲಂಘನೆ ಮಾಡಿದ ಕಟ್ಟಡಗಳನ್ನು ಕ್ರಮಬದ್ಧಗೊಳಿಸಲು ಪ್ರಯತ್ನಿಸುತ್ತಿವೆ. 2004 ರಲ್ಲಿ ಧರ್ಮ ಸಿಂಗ್ ಮುಖ್ಯಮಂತ್ರಿಯಾಗಿದ್ದು, ಸಿದ್ದರಾಮಯ್ಯನವರು ಉಪಮುಖ್ಯಮಂತ್ರಿಯಾಗಿದ್ದಾಗ ಕ್ರಮಬದ್ಧಗೊಳಿಸುವ ನಿಯಮಗಳನ್ನು ರೂಪಿಸುವ ಮತ್ತು ಜಾರಿಮಾಡುವ ಪ್ರಯತ್ನಗಳು ಪ್ರಾರಂಭವಾದವು. ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆದ ಕೂಡಲೇ, 2007 ರಲ್ಲಿ ಮೂರು ತಿಂಗಳ ಅವಧಿಯಲ್ಲಿ ಕಟ್ಟಡಗಳನ್ನು ಕ್ರಮಬದ್ಧಗೊಳಿಸುವ ಅವಕಾಶ ನೀಡಲಾಯಿತು. 2013 ರಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಕ್ರಮಬದ್ಧಗೊಳಿಸುವ ಪ್ರಯತ್ನವನ್ನು ಮತ್ತೊಮ್ಮೆ ಮಾಡಲಾಯಿತು. 2013-2014 ಅವಧಿಯಲ್ಲಿ ಜಾರಿಗೆ ತರಲಾದ ಕಾನೂನು ಶೇ 50ರಷ್ಟು ನಿಯಮ ಉಲ್ಲಂಘನೆಯನ್ನು ಕ್ರಮಬದ್ಧಗೊಳಿಸುವ ಅವಕಾಶ ನೀಡಿತ್ತು. ಆದರೆ, 2017 ರಲ್ಲಿ ಸರ್ವೋಚ್ಚ ನ್ಯಾಯಾಲಯವು ಇದಕ್ಕೆ ತಡೆ ನೀಡಿತು. 2020-2021 ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಬಿ-ಖಾತಾ ಸಕ್ರಮಗೊಳಿಸುವ, ಮತ್ತು ಮಾರ್ಗದರ್ಶಿ ಮೌಲ್ಯಾಧಾರಿತ ಶುಲ್ಕದೊಂದಿಗೆ ಉಲ್ಲಂಘನೆಗಳನ್ನು ಕ್ರಮಬದ್ಧಗೊಳಿಸುವ ಪ್ರಯತ್ನ ಮಾಡಲಾಯಿತು. ನ್ಯಾಯಲಾಲಯಗಳು ಈ ಪ್ರಯತ್ನಗಳಿಗೆ ಮನ್ನಣೆ ನೀಡುತ್ತಿಲ್ಲ, ಏಕೆಂದರೆ, ಈ ಬದಲಾವಣೆಗಳು ನಗರದ ಬೆಳವಣಿಗೆಯಲ್ಲಿ ಅವ್ಯವಸ್ಥೆಯನ್ನು ತರಲಿದ್ದು ಅದು ಸಂವಿಧಾನದ ಆಶಯಗಳಿಗೆ ಅನುಗುಣವಾಗಿಲ್ಲ ಎಂಬುದೇ ಆಗಿದೆ.

ಹಾಗಾದರೆ, ಸರ್ಕಾರಗಳು ಏಕೆ ಉಲ್ಲಂಘನೆಯನ್ನು ಕ್ರಮಬದ್ಧಗೊಳಿಸುವ ಪ್ರಯತ್ನಗಳನ್ನು ಸತತವಾಗಿ ಮಾಡುತ್ತಿವೆ ಎಂಬ ಪ್ರಶ್ನೆಗೂ ಕೂಡ ಉತ್ತರ ಅಗತ್ಯ. ಮೊದಲನೆಯದಾಗಿ, ನಿಯಮಗಳ ಉಲ್ಲಂಘನೆಯನ್ನು ತಡೆಯದ ಸರ್ಕಾರಗಳು ಅಂಥಹಾ ಕಟ್ಟಡಗಳ ಸಂಖ್ಯೆ ಹೆಚ್ಚಾದಂತೆ ಸಾರ್ವಜನಿಕರ ಒತ್ತಡಕ್ಕೆ ಒಳಗಾಗುತ್ತವೆ. ಅವರಿಗೆ ಪರಿಹಾರವನ್ನು ಕೊಡುವ ನಿಟ್ಟಿನಲ್ಲಿ ಕಾನೂನು ಬದಲಾವಣೆಗೆ ಸರ್ಕಾರಗಳು ಮುಂದಾಗಬಹುದು. ಕಟ್ಟಡ ಉಲ್ಲಂಘನೆಯು ವ್ಯಾಪಕವಾಗಿ ನಡೆಯುತ್ತಿದ್ದು ಇದನ್ನು ತಡೆಯುವುದು ಹೇಗೆ ಎನ್ನುವ ಬಗ್ಗೆ ಚಿಂತನೆ ಅಗತ್ಯವಿದೆ. ಕಾನೂನುಗಳ ಸಮರ್ಪಕ ನಿರ್ವಹಣೆ ಆಗಬೇಕಿದ್ದು ಅದಕ್ಕಾಗಿ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಸಾಧ್ಯಮಾಡುವುದು ಅಪೇಕ್ಷಿತ ಪರಿಣಾಮಗಳನ್ನು ತರಬಹುದು. ಸೆಟ್ ಬ್ಯಾಕ್ ಉಲ್ಲಂಘನೆಗಳು, ನೆರೆಹೊರೆಯವರಲ್ಲಿ ಅವುಗಳಿಂದ ಉಂಟಾಗುವ ವಿವಾದಗಳನ್ನು ಪರಿಹರಿಸಲು ಕಟ್ಟಡ ನಿಯಂತ್ರಣ ಸಮಿತಿಗಳನ್ನು ಸ್ಥಾಪಿಸಬೇಕು. ನಿಯಮಿತ ಪರಿಶೀಲನೆಗಳನ್ನು ಸಾರ್ವಜನಿಕರೇ ಪ್ರಾರಂಭಿಸಲು ಅನುಮತಿಸುವ ಕಾನೂನು ನಿಯಮಗಳನ್ನು ಜಾರಿಮಾಡಬಹುದು. ಈ ಸಮಿತಿಗಳಿಗೆ ತಾಂತ್ರಿಕ ಪರಿಶೀಲನೆ ನಡೆಸುವ ಮತ್ತು ನಿಯಮಗಳ ಪಾಲನೆಯ ಕರ್ತವ್ಯ ಇರುವ ಅಧಿಕಾರಿಗಳನ್ನು ಉಲ್ಲಂಘನೆಗಳಿಗೆ ಹೊಣೆಯಾಗಿಸುವ ಅಧಿಕಾರಗಳನ್ನು ನೀಡಬಹುದು.

ಕಟ್ಟಡಗಳನ್ನು ಕ್ರಮಬದ್ಧಗೊಳಿಸುವ ಮುನ್ನ ಹೊಸ ಕಟ್ಟಡಗಳ ನಿರ್ಮಾಣದಲ್ಲಿ ನಿಯಮಗಳನ್ನು ವಿನಾಯಿತಿ ಇಲ್ಲದಂತೆ ಜಾರಿ ಮಾಡುವ ಕ್ರಮಗಳನ್ನು ತೆಗೆದುಕೊಳ್ಳಬೇಕು. ಬೇಕಾದರೆ ನಿವೇಶನದ ಸುತ್ತಾ ಖಾಲಿ ಬಿಡಲೇಬೇಕಾದ ಜಾಗವನ್ನು ಹೊಸದಾಗಿ ನಿರ್ದೇಶಿಸಬಹುದು. ಖಾಲಿ ಜಾಗವನ್ನು ಮಿತಿಗೊಳಿಸಬಹುದಾದರೂ ನಾಲ್ಕೂ ದಿಕ್ಕುಗಳಲ್ಲಿ ಜಾಗ ಬಿಡುವುದರಿಂದ ವ್ಯಾಜ್ಯಗಳನ್ನು ಕಡಿಮೆ ಮಾಡಬಹುದು. ನಂತರ ಅದೇ ನಿಯಮಗಳನ್ನು ಉಲ್ಲಂಘಿಸಿದ ಕಟ್ಟಡಗಳೂ ಅಳವಡಿಸಿಕೊಳ್ಳಬೇಕಾದ ಸಕ್ರಮ ಕಾನೂನನ್ನು ಜಾರಿ ಮಾಡಬೇಕಾದದ್ದು ಸೂಕ್ತ. ಈ ಕ್ರಮ ಸೂಕ್ತ ಆಡಳಿತದ ವಿಧಾನವಾಗಿದ್ದು ನ್ಯಾಯಾಲಯಗಳೂ ಅದನ್ನು ಅಂಗೀಕರಿಸುವ ಸಾಧ್ಯತೆ ಹೆಚ್ಚು.

ಕಳೆದ ಒಂದು ತಿಂಗಳಲ್ಲಿ ಸಾರ್ವಜನಿಕರಿಂದಲೂ, ಸಂಘ-ಸಂಸ್ಥೆಗಳಿಂದಲೂ ಸಹಾರಣಗಳೊಂದಿಗೆ ಹಲವಾರು ಆಕ್ಷೇಪಗಳನ್ನು ಐದೂ ಪಾಲಿಕೆಗಳಿಗೆ ಸಲ್ಲಿಕೆಯಾಗಿದೆ. ಈಗ ಜನಾಭಿಪ್ರಾಯವನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿ ಶಾಸಕಾಂಗದ ಮೇಲೆ ಇದೆ.

400 ರೋಸ್ಟರ್ ಬಿಂದು ನಿಗದಿ

• **ಬೆಂಗಳೂರು:** ಪರಿಶಿಷ್ಟ ಜಾತಿ ಒಳಮೀಸಲಾತಿ ಅನುಷ್ಠಾನಕ್ಕೆ 400 ರೋಸ್ಟರ್ ಬಿಂದುಗಳನ್ನು ತೀರ್ಮಾನಿಸಲಾಗಿದೆ. ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿರುವ ಅಧಿಸೂಚನೆಗಳನ್ನು ಹೊರತುಪಡಿಸಿ, ಇನ್ನುಳಿದ ಹುದ್ದೆಗಳಿಗೆ ಹೊಸದಾಗಿ ಅಧಿಸೂಚನೆ ಸಮಾಜ ಕಲ್ಯಾಣ ಇಲಾಖೆಯಿಂದ ಹೊರಡಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ಮಾಧ್ಯಮದವರಿಗೆ ತಿಳಿಸಿದರು.

ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿಗೆ ನಿಗದಿಪಡಿಸಿದ ಶೇ.15 ಮೀಸಲಾತಿಯಲ್ಲಿ ಪ್ರವರ್ಗ-ಎ, ಪ್ರವರ್ಗ-ಬಿ, ಪ್ರವರ್ಗ-ಸಿಗಳಿಗೆ ಒಳಮೀಸಲಾತಿಯನ್ನು ಕ್ರಮವಾಗಿ ಶೇ. 5.25, ಶೇ. 5.25 ಮತ್ತು ಶೇ.4.5 ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಈ ಪ್ರಮಾಣವನ್ನು ಅನುಷ್ಠಾನಗೊಳಿಸಲು 400 ರೋಸ್ಟರ್ ಬಿಂದುಗಳನ್ನು ಅನುಪಾಲಿಸಲಾಗುತ್ತದೆ. ಯಾವುದೇ ವೃಂದದಲ್ಲಿ 3ಕ್ಕಿಂತ ಕಡಿಮೆ ಪರಿಶಿಷ್ಟ ಜಾತಿ ಬಿಂದುಗಳು ಲಭ್ಯವಾಗುತ್ತಿದ್ದರೆ, ಪರಿಶಿಷ್ಟ ಜಾತಿಗೆ ಮೀಸಲಾದ ಹುದ್ದೆಗಳನ್ನು ಪರಿಶಿಷ್ಟ ಜಾತಿ ಸಾಮಾನ್ಯ ಎಂದು ಪರಿಗಣಿಸಿ ನೇಮಕಾತಿ ಮಾಡುವಂತೆ ಸಂಪುಟದಲ್ಲಿ ತೀರ್ಮಾನಿಸಲಾಗಿದೆ ಎಂದರು.

ವಿಶೇಷ ಸಭೆಗೆ ತೀರ್ಮಾನ: ರಾಜ್ಯ ಶಿಕ್ಷಣ ನೀತಿ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಇದು ಮಹತ್ವದ ಮತ್ತು ಗಂಭೀರವಾದ ವಿಷಯವಾದ್ದರಿಂದ ವಿವರವಾಗಿ ಚರ್ಚಿಸುವುದಕ್ಕಾಗಿ ವಿಶೇಷ ಸಭೆ ನಡೆಸಲು ನಿರ್ಣಯಿಸಲಾಯಿತು. ಶೀಘ್ರದಲ್ಲೇ ಸಭೆ ನಡೆಸಲಾಗುತ್ತದೆ ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಮುಂದಿನ ಆ.21ರಿಂದ 23ರವರೆಗೆ ನಡೆಯುವ ಸಮಾಧಾನ್ ಸಮಾರೋಹ್ ಕ್ರಿಯಾಯೋಜನೆಯಂತೆ ಸುಪ್ರೀಂಕೋರ್ಟ್‌ನಲ್ಲಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸಚಿವ ಸಂಪುಟ ಸಭೆ ಒಪ್ಪಿದೆ.

ರಾಮ ಬಾಣ



ಬಿಎಸ್‌ವೈ ಅಭಿಮಾನೋತ್ಸವ ಹಲವೆಡೆ ಪೂರ್ವಭಾವಿ ಸಭೆ

ಪುಟ 1 ➡ ಸಂಸದ ಗೋವಿಂದ ಕಾರಜೋಳ ಅವರು ಮಾತನಾಡಿ, ಒಂದು ಶಾಸಕ ಸ್ಥಾನದಿಂದ 110 ಸ್ಥಾನ ತಲುಪಿ ಬಿಜೆಪಿ ಅಧಿಕಾರಕ್ಕೆ ತರಲು ಪ್ರಮುಖ ಕಾರಣಕರ್ತರು ಯಡಿಯೂರಪ್ಪನವರು. ಅವರು ಕಟ್ಟಿದ ಪಕ್ಷದ ಫಲಾನುಭವಿಗಳು ನಾವೆಲ್ಲಾ ಎಂದು ಹೇಳಿದರು. ಈ ಕಾರ್ಯಕ್ರಮಕ್ಕೆ 10 ಲಕ್ಷಕ್ಕೂ ಹೆಚ್ಚು ಜನರನ್ನು ನಿರೀಕ್ಷಿಸಿರುವುದಾಗಿ ತಿಳಿಸಿದರು.

ಬಿಎಸ್‌ವೈ ಧೀಮಂತ ನಾಯಕ

• **ಹಾವೇರಿ:** ಅಧಿಕಾರ ಮತ್ತು ಆದರ್ಶದ ನಡುವೆ ಯಾವಾಗಲೂ ಸಂಘರ್ಷ ಇರುತ್ತದೆ. ಆದರೆ, ಅಧಿಕಾರ ಬಂದಾಗಲೂ ಕೂಡ ಆದರ್ಶಗಳನ್ನು ಬಿಡದೆ ಅಧಿಕಾರವನ್ನು ಆದರ್ಶದ ಪಾಲನೆಗೆ ಉಪಯೋಗ ಮಾಡಿಕೊಂಡವರು ಧೀಮಂತ ನಾಯಕರಾಗುತ್ತಾರೆ. ಅವರು ಯಡಿಯೂರಪ್ಪನವರು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.
ಗುರುವಾರ ಹಾವೇರಿಯ ಭಾರತೀಯ ಜನತಾ ಪಾರ್ಟಿಯ ಜಿಲ್ಲಾ ಕಾರ್ಯಾಲಯದಲ್ಲಿ ಮೇ 9 ರಂದು ಚಿತ್ರದುರ್ಗದಲ್ಲಿ ನಡೆಯುವ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪನವರ ಅಭಿಮಾನೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ನನ್ನ ನೆಚ್ಚಿನ ನಾಯಕರಾದ ಬಿಎಸ್‌ವೈ ಅಭಿಮಾನೋತ್ಸವ ತಮ್ಮ ಕಠಿಣ ಪರಿಶ್ರಮದ ಫಲ. ಗುರಿ ಸಾಧನೆಯ ಛಲದಿಂದ ನಿರಂತರವಾಗಿ ಜನರ ಜತೆಗಿದ್ದು, ಪರಿಶ್ರಮದ ನಾಯಕರು ಯಾರಾದರೂ ಇದ್ದರೆ ಅದು ಕರ್ನಾಟಕದ ರಾಜಾಹುಲಿ ಯಡಿಯೂರಪ್ಪ ಎಂದು ಹೇಳಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಕುಕ್ಕರ್ ಬಾಂಬ್ ಸ್ಫೋಟದ ಆರೋಪಿಗೆ ನ್ಯಾಯಾಲಯ ನೀಡಿದ ಶಿಕ್ಷೆ ಸ್ವಾಗತಾರ್ಹ. ಇಂಥವನನ್ನು ಅಂದು ಬ್ರದರ್ಸ್, ಅಮಾಯಕರು ಅಂತ ಸಮರ್ಥನೆ ಮಾಡಿದವರು ಈಗ ಆತ್ಮವಿಮರ್ಶೆ ಮಾಡಿಕೊಳ್ಳಲಿ -ವೇದವ್ಯಾಸ ಕಾಮತ್
- ಆತ್ಮವಿಮರ್ಶೆ ಮಾಡಿಕೊಳ್ಳಲು ಅವರಲ್ಲಿ ಆತ್ಮವೇ ಇಲ್ಲವಲ್ಲ, ಬಹಳ ಹಿಂದೆಯೇ ಅವರು ಅದನ್ನು ಅಧಿಕಾರಕ್ಕಾಗಿ ಮಾರಿ ಬಿಟ್ಟಿದ್ದಾರೆ!

ದಿನ ಭವಿಷ್ಯ

ಮೇಷ
ನಿರಾಶೆ ಬಿಡಿ, ಇಂದು ನಿಮಗೆ ಒಳ್ಳೆಯದಾಗುವ ಕಾಲ. ಗುರಿ ಸಾಧನೆ. ಚಿಂತೆ ಪರಿಹಾರ. ಉದ್ಯೋಗದ ಆತಂಕ ನಿವಾರಣೆ. ಕೌಟುಂಬಿಕ ಸಮರಸತೆ.

ವೃಷಭ
ವೃತ್ತಿಯಲ್ಲಿ ನೀವು ಬಯಸಿದ ಬೆಳವಣಿಗೆ. ನಿಮ್ಮ ಕ್ಷಮತೆ ಮೆಚ್ಚುಗೆಗೆ ಪಾತ್ರವಾಗಲಿದೆ. ಆಸ್ತಿ ಯಾ ವಾಹನ ಖರೀದಿಗೆ ಕಾಲ ಕೂಡಿಬರಲಿದೆ.

ಮಿಥುನ
ವೃತ್ತಿಗೆ ಸಂಬಂಧಿಸಿ ಶುಭ ಬೆಳವಣಿಗೆ. ದಂಪತಿಗಳ ವಿರಸ ಶಮನಕ್ಕೆ ನಿಧಾನಗತಿ ಹಿಡಿದೀತು. ಈ ಹಂತದಲ್ಲಿ ಮೌನ ಸಾಧಿಸಿ.

ಕಟಕ
ಚಿಂತೆ ತಂದ ವಿಷಯವೊಂದು ಇಂದು ಇತ್ಯರ್ಥ ಕಾಣಲಿದೆ. ಹಿರಿಯರ ಮಾತಿಗೆ ಪ್ರತಿಯಾಡದಿರಿ. ಹಣದ ಕೊರತೆ ನೀಗುವುದು.

ಸಿಂಹ
ಹೊಸತನಕ್ಕೆ ತುಡಿಯುವಿರಿ. ಜೀವನಶೈಲಿ ಬದಲಿಸಲು ಮನಸ್ಸು ಮಾಡಿ. ಪ್ರಗತಿಗೆ ಅಡ್ಡಿ ತರುವ ಸಂಗತಿ ತ್ಯಜಿಸಿರಿ. ಧನವ್ಯಯ.

ಕನ್ಯಾ
ಅನಪೇಕ್ಷಿತ ಬೆಳವಣಿಗೆ. ಆಪ್ತರ ಜತೆ ವಿಶ್ವಾಸದಲ್ಲಿ ಕೊರತೆ. ನಿಮ್ಮ ಸಾಧನೆಗೆ ತೃಪ್ತಿ ಪಡಿ. ಸಾಧ್ಯವಾಗದ್ದಕ್ಕೆ ಕೊರಗುತ್ತಾ ಕೂರದಿರಿ.

ತುಲಾ
ನಿಮ್ಮ ಸಾಧನೆಗೆ ಮೆಚ್ಚುಗೆ ಪಡೆಯುವಿರಿ. ಆತ್ಮೀಯರ ಸ್ನೇಹದಲ್ಲಿ ಹುಳಿ ಹಿಂಡಲು ಕೆಲವರ ಯತ್ನ. ಅದಕ್ಕೆ ಆಸ್ಪದ ಕೊಡಬೇಡಿ.

ವೃಶ್ಚಿಕ
ನಿರೀಕ್ಷಿಸಿದ್ದಕ್ಕಿಂತ ಹೆಚ್ಚೇ ನಿಮಗಿಂದು ಒಳಿತಾಗಲಿದೆ. ಮನಸ್ಸಿಗೆ ಉಲ್ಲಾಸ. ಆತ್ಮೀಯರ ಜತೆ ಕಾಲಕ್ಷೇಪ. ಕೌಟುಂಬಿಕ ಸಮಾರಂಭದಲ್ಲಿ ಭಾಗಿ.

ಧನು
ಮನಸ್ಸಿನ ಶಾಂತಿ ಕಾಯ್ದುಕೊಳ್ಳಿ. ಕ್ಷುಲ್ಲಕ ವಿಚಾರಕ್ಕೆ ಜಗಳ ಮಾಡಬೇಡಿ. ಎಲ್ಲರ ಜತೆ ಹೊಂದಾಣಿಕೆಯಿರಲಿ. ಮಕ್ಕಳ ಸಾಧನೆ ತೃಪ್ತಿಕರ.

ಮಕರ
ಇತರರ ಜತೆ ಮಾತನಾಡುವಾಗ ಎಚ್ಚರ ವಹಿಸಿ. ಹದತಪ್ಪಿದ ಮಾತು ದೊಡ್ಡ ಜಗಳಕ್ಕೆ ಕಾರಣವಾದೀತು. ಆರ್ಥಿಕ ಉನ್ನತಿ ಸಾಧಿಸುವಿರಿ.

ಕುಂಭ
ನಿಮ್ಮ ಕೌಶಲದ ಕೆಲಸಕ್ಕೆ ಮೆಚ್ಚುಗೆ. ವೃತ್ತಿಯಲ್ಲಿ ತೋರುವ ಪೈಪೋಟಿಯಲ್ಲಿ ಗೆಲ್ಲುವಿರಿ. ದಂಪತಿ ಮಧ್ಯೆ ಅನವಶ್ಯ ಜಗಳವಾದೀತು.

ಮೀನ
ವೃತ್ತಿಯಲ್ಲಿ ಹೊಸ ಯೋಜನೆ ಅಳವಡಿಸಲು ಸಕಾಲ. ಒತ್ತಡವು ನಿಮ್ಮ ಏಕಾಗ್ರತೆಗೆ ಭಂಗ ತಂದೀತು. ಏಕಾಂಗಿಗಳಿಗೆ ವಿವಾಹ ಬಂಧ ಸಂಭವ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00
ಅದೃಷ್ಟ ಸಂಖ್ಯೆ : 4,9,2,5

ಬೆಂಗಳೂರು, ಮೈಸೂರು, ಮಂಗಳೂರಿನಲ್ಲಿ ಕೇಂದ್ರ ಸ್ಥಾಪನೆ: ಎಂಬಿಪಾ

3 ಕಡೆ ಡೇಟಾ ಪಾರ್ಕ್

• **ಬೆಂಗಳೂರು:** ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಸುಸ್ಥಿರ ಡೇಟಾ ಕೇಂದ್ರಗಳು(ಸಸ್ಟೇನಬಲ್ ಡೇಟಾ ಸೆಂಟರ್ಸ್) ಅಗತ್ಯವಿದ್ದು ಬೆಂಗಳೂರು, ಮೈಸೂರು ಮತ್ತು ಮಂಗಳೂರಿನಲ್ಲಿ ಡೇಟಾ ಪಾರ್ಕ್ ಸ್ಥಾಪಿಸಲು ಗುರುವಾರ ನಡೆದ ಸಂಬಂಧಿತ ಸಚಿವರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಗುರುವಾರ ಶಕ್ತಿ ಭವನದಲ್ಲಿ ನಡೆದ ಈ ಪ್ರಾಥಮಿಕ ಸಭೆಯಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮತ್ತು ಐಟಿ ಸಚಿವ ಪ್ರಿಯಾಂಕ್ ಖರ್ಗೆ ಪಾಲ್ಗೊಂಡಿದ್ದರು.

ಬಳಿಕ ಮಾತನಾಡಿದ ಸಚಿವ ಎಂ.ಬಿ.ಪಾಟೀಲ್, ಬೆಂಗಳೂರಿನಲ್ಲಿ ಹೊಸಕೋಟೆಯ ಸಮೀಪ 500 ಮೆಗಾವ್ಯಾಟ್ ಸಾಮರ್ಥ್ಯದ ಸುಸ್ಥಿರ ಡೇಟಾ ಕೇಂದ್ರ ಪಾರ್ಕ್ ಸ್ಥಾಪಿಸಲಾಗುವುದು. ಪಾವಗಡದಿಂದ ಪೂರೈಕೆಯಾಗುವ ಸೌರ ವಿದ್ಯುತ್ ನೇರವಾಗಿ ಇಲ್ಲಿಗೆ ತಲುಪುತ್ತದೆ. ಜತೆಗೆ ಬೆಂಗಳೂರು ಜಲ ಮಂಡಳಿಯು ಎರಡು ಹಂತಗಳಲ್ಲಿ ಸಂಸ್ಕರಿಸಿದ 60 ಎಂ.ಎಲ್.ಡಿ ನೀರು ಪೂರೈಕೆಗೆ ತೊಂದರೆ ಇಲ್ಲ ಎಂದು ತಿಳಿಸಿದೆ. ಸ್ವತಃ ಉದ್ಯಮಗಳೇ ಈ ನೀರಿನ ಮೂರನೇ ಹಂತದ ಶುದ್ಧೀಕರಣ ಮಾಡಿಕೊಳ್ಳುತ್ತವೆ. ಈ ಮೂರೂ ಪಾರ್ಕ್‌ಗಳ ಒಟ್ಟು ಸಾಮರ್ಥ್ಯ 1,000 ಮೆಗಾವ್ಯಾಟ್ ಇರಲಿದೆ ಎಂದರು.

ಮಂಗಳೂರಿನಲ್ಲಿ ಕೂಡ ಡೇಟಾ ಪಾರ್ಕ್ ಸ್ಥಾಪನೆಗೆ ಭೂಮಿಯು ಲಭ್ಯವಿದೆ. ಅಲ್ಲಿನ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿ ಕೆಐಎಡಿಬಿಗೆ ಸೇರಿದ 350 ಎಕರೆ ಇದೆ. ಮೈಸೂರಿನಲ್ಲಿ ಈ ಉದ್ದೇಶಕ್ಕೆ ಸೂಕ್ತ ಜಾಗ ಗುರುತಿಸಲಾಗುವುದು ಎಂದು ಅವರು ವಿವರಿಸಿದ್ದಾರೆ.



> **ಬೆಂಗಳೂರಿನಲ್ಲಿ ಹೊಸಕೋಟೆಯ ಸಮೀಪ 500 ಮೆಗಾವ್ಯಾಟ್ ಸಾಮರ್ಥ್ಯದ ಸುಸ್ಥಿರ ಡೇಟಾ ಕೇಂದ್ರ ಪಾರ್ಕ್ ಸ್ಥಾಪಿಸಲಾಗುವುದು. ಪಾವಗಡದಿಂದ ಪೂರೈಕೆಯಾಗುವ ಸೌರ ವಿದ್ಯುತ್ ನೇರವಾಗಿ ಇಲ್ಲಿಗೆ ತಲುಪುತ್ತದೆ.**
> ■ **ಎಂ.ಬಿ. ಪಾಟೀಲ್, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ**

ಈ ಪಾರ್ಕ್‌ಗಳಲ್ಲಿ ಯಾರೇ ಬಂದು ಡಾಟಾ ಸೆಂಟರ್ ಸ್ಥಾಪನೆಗೆ ಹೂಡಿಕೆ ಮಾಡಿದರೆ ಅವರಿಗೆ ವಿದ್ಯುತ್ ಮತ್ತು ನೀರು ನೀಡಲಾಗುವುದು. ಇದಕ್ಕೆ ಪೂರಕವಾದ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸದ್ಯದಲ್ಲೇ ಹೂಡಿಕೆದಾರರ ಜತೆಗೂ ಸಭೆ ಮಾಡಲಾಗುವುದು ಎಂದು ಪಾಟೀಲ್ ತಿಳಿಸಿದರು.

ಮುಂದಿನ ಸಭೆಯಲ್ಲಿ ಜಲಸಂಪನ್ಮೂಲ ಖಾತೆಯನ್ನು ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಇನ್ನೊಂದು ಸಚಿವರ ಮತ್ತು ಉನ್ನತ ಅಧಿಕಾರಿಗಳ ತಂಡವನ್ನೂ ಈ ಸಂಬಂಧ ರಚಿಸಲಾಗುವುದು. ಒಟ್ಟಿನಲ್ಲಿ ತ್ವರಿತವಾಗಿ ಈ ಡೇಟಾ ಪಾರ್ಕ್‌ಗಳನ್ನು ಸ್ಥಾಪಿಸಲಾಗುವುದು ಎಂದರು.

ಸಭೆಯಲ್ಲಿ ಇಂಧನ ಮತ್ತು ಜಲಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಗೌರವ್ ಗುಪ್ತ, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಐಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಂಜುಳಾ, ಕೆಎಸ್‌ಐಐಡಿಸಿ ಎಂಡಿ ಖುಷ್ಬೂ ಗೋಯಲ್, ಕೆಐಎಡಿಬಿ ಆಯುಕ್ತ ಡಾ.ಮಹೇಶ್, ಬೆಂಗಳೂರು ಜಲ ಮಂಡಳಿಯ ಅಧ್ಯಕ್ಷ ರಾಮಪ್ರಸಾತ್ ಮನೋಹರ್, ಐಟಿ ನಿರ್ದೇಶಕ ರಾಹುಲ್ ಸಂಕನೂರು ಭಾಗವಹಿಸಿದ್ದರು.

ಮರುಪರೀಕ್ಷೆ ಬರೆಯಲು ಅವಕಾಶ

»» ಸಿಇಟಿ ವೇಳೆ ಜನಿವಾರ, ಹಿಜಾಬ್ ತೆಗೆಸಿದ ಪ್ರಕರಣ

• **ಬೆಂಗಳೂರು:** ಸಿಇಟಿ ವೇಳೆ ಜನಿವಾರ ಮತ್ತು ಹಿಜಾಬ್ ತೆಗೆಯುವಂತೆ ಸೂಚಿಸಲ್ಪಟ್ಟ ವಿದ್ಯಾರ್ಥಿಗಳಿಗೆ ಮರುಪರೀಕ್ಷೆ ಬರೆಯಲು ಅವಕಾಶ ನೀಡುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದರು.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಅವರು, ಸಿಬ್ಬಂದಿಗೆ ಡ್ರೆಸ್ ಕೋಡ್ ಬಗ್ಗೆ ತರಬೇತಿ ನೀಡಲಾಗಿತ್ತು. ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ 2ಗಂಟೆ ಮುಂಚಿತವಾಗಿ ತಲುಪಬೇಕು ಎಂಬ ಸೂಚನೆಯೂ ನೀಡಲಾಗಿತ್ತು. ಆದರೆ, ಬೆಂಗಳೂರಿನ ಕೃಪಾನಿಧಿ ಪದವಿಪೂರ್ವ ಕಾಲೇಜು, ಚಿಕ್ಕಬಳ್ಳಾಪುರದ ನಾಗಾರ್ಜುನ ಕಾಲೇಜು ಮತ್ತು ಬಿಜಿಎಸ್ ಕಾಲೇಜಿನ ಸಿಬ್ಬಂದಿ ನಿಯಮ ಉಲ್ಲಂಘಿಸಿದ್ದಾರೆ ಎಂದು ಅಸಮಧಾನ ವ್ಯಕ್ತಪಡಿಸಿದರು. ಈ ವರ್ಷ ನಾಲ್ವರು ವಿದ್ಯಾರ್ಥಿಗಳಿಗೆ ಜನಿವಾರ ಮತ್ತು ಓರ್ವ ವಿದ್ಯಾರ್ಥಿನಿಗೆ ಹಿಜಾಬ್ ತೆಗೆಯುವಂತೆ ಸೂಚಿಸಲಾಗಿದೆ. ಈ ಘಟನೆಯಿಂದ ನಮಗೆ ತೊಂದರೆಯಾಯಿತು ಮತ್ತು ಪರೀಕ್ಷೆಯ ಮೇಲೆ ಗಮನ ಹರಿಸಲು ಸಾಧ್ಯವಾಗಲಿಲ್ಲ, ಆದ್ದರಿಂದ ಕೃಪಾಂಕ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ರಚಿಸಿದ ಸಮಿತಿಯು ಸಲ್ಲಿಸಿದ ವರದಿಯನ್ನು ನಾವು ಪರಿಶೀಲಿಸುತ್ತಿದ್ದೇವೆ ಎಂದರು.

ರೈಲ್ವೆ ಸೇವೆ ಮಹತ್ವದ ಮೈಲಿಗಲ್ಲು

ಪುಟ 1 ➡ ಕಳೆದ ವರ್ಷ ಜೂ.6ರಂದು ಕತ್ರಾ ಮತ್ತು ಕಾಶ್ಮೀರ ಸಂಪರ್ಕಿಸುವ ವಂದೇ ಭಾರತ್ ರೈಲು ಸೇವೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದ್ದರು. ಪ್ರಸಕ್ತ ಈ ರೈಲಿನ ಓಡಾಟ ವ್ಯಾಪ್ತಿಯನ್ನು ಜಮ್ಮುತಾವಿ ರೈಲು ನಿಲ್ದಾಣವರೆಗೆ ವಿಸ್ತರಿಸಲಾಗಿದೆ. ಈ ರೈಲು ಬಲು ಜನಪ್ರಿಯತೆಯನ್ನೂ ಗಳಿಸಿದೆ ಎಂದು ಗಮನ ಸೆಳೆದರು. ರೈಲಿನ ಪ್ರಯಾಣಿಕ ಸಾಮರ್ಥ್ಯ ಹೆಚ್ಚಿಸಲು ಬಲು ಬೇಡಿಕೆಯಿದೆ ಎಂದು ಹೇಳಿದರು.

ಈ ಹಿಂದೆ ಎಂಟು ಬೋಗಿಗಳ ರೈಲು ಓಡಾಡುತ್ತಿತ್ತು. ಸಾಮರ್ಥ್ಯ ಹೆಚ್ಚಿಸಲು ಬೇಡಿಕೆ ಬಂದ ಹಿನ್ನೆಲೆಯಲ್ಲಿ ಪ್ರಸ್ತುತ ವಂದೇ ಭಾರತ್ ರೈಲಿಗೆ 20 ಕೋಚ್‌ಗಳನ್ನು ಅಳವಡಿಸಲಾಗಿದೆ. ರೈಲಲ್ಲಿ ಸಿಮೆಂಟ್, ಕಾರುಗಳು, ಬೈಕ್‌ಗಳೇ ಇತ್ಯಾದಿ ವಸ್ತುಗಳ ಸಾಗಣೆಗೆ ಅವಕಾಶವಿರುವ ಕಾರಣ ಕಾಶ್ಮೀರ ಜನತೆಗೆ ತುಂಬು ಪ್ರಯೋಜನವಾಗಲಿದೆ ಎಂದು ಸಚಿವರು ವಿವರಿಸಿದರು. ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಪ್ರಧಾನಿ ಕಾರ್ಯಾಲಯದ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಕಾರ್ಯಕ್ರಮದಲ್ಲಿದ್ದರು. ಶ್ರೀನಗರ-ಜಮ್ಮು ನಡುವಣ ನೇರ ರೈಲು ಸೇವೆಗಳು ಪ್ರಯಾಣದ ಸಮಯವನ್ನು ಕುಗ್ಗಿಸಲಿವೆ ಮತ್ತು ಪ್ರವಾಸೋದ್ಯಮ ಅಭಿವೃದ್ಧಿಗೆ ವೇಗ ಕೊಡಲಿವೆ. ಅಲ್ಲದೆ, ಸರ್ವಋತು ಭೂಸಾರಿಗೆ ಸಂಪರ್ಕವನ್ನೂ ಕಲ್ಪಿಸಲಿವೆ.

ಆರು ಕೊಲೆ ಅಪರಾಧಿಗಳಿಗೆ ಮರಣದಂಡನೆ

ಪುಟ 1 ➡ ಪ್ರಕರಣ ಸಂಬಂಧ ವಿಚಾರಣೆ ನಡೆಸಿದ ಗಂಗಾವತಿ ಒಂದನೇ ಹೆಚ್ಚುವರಿ ಸತ್ರ ನ್ಯಾಯಾಲಯ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯಕ ಅವರು ಆರು ಹಂತಕರಿಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ. ಇದರ ಜೊತೆಗೆ ಆರು ಜನರಿಗೆ ತಲಾ ಮೂರು ಲಕ್ಷ ದಂಡ ವಿಧಿಸಿದ್ದಾರೆ. ರವಿ, ವಿಜಯ್ ಅಲಿಯಾಸ್ ಮೈಲಾರಿ, ಧನರಾಜ್, ಭೀಮ್ ಅಲಿಯಾಸ್ ಭರತ್, ಸಲೀಮ್ ಮಹಮ್ಮದ್ ರಫೀಕ್, ಗಂಗಾಧರ ಗೌಲಿ ಗಲ್ಲು ಶಿಕ್ಷೆಗೆ ಗುರಿಯಾದವರು.

ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಟಿವಿಯ ದೃಶ್ಯಾವಳಿ ಪರಿಶೀಲಿಸಿದ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯ್ಕ್, ಅಪರಾಧಿಗಳು ಈ ಹಿಂದೆ ವಿವಿಧ ಪ್ರಕರಣಗಳಲ್ಲಿ ಭಾಗಿಯಾದ ಹಿನ್ನೆಲೆಯ ಬಗ್ಗೆಯೂ ಪರಿಶೀಲನೆ ನಡೆಸಿದರು.

ಏನಿದು ಪ್ರಕರಣ?: ಗಂಗಾವತಿ ನಗರದ ಹೊರ ವಲಯದಲ್ಲಿರುವ ರಾಣಾ ಪ್ರತಾಪ್ ಸಿಂಗ್ ವೃತ್ತದಲ್ಲಿರುವ ಖಾಸಗಿ ಆಸ್ಪತ್ರೆಯ ಬಳಿ 2025ರ ಅಕ್ಟೋಬರ್ 8ರ ಮಧ್ಯರಾತ್ರಿ ಬಿಜೆಪಿ ಯುವ ಮೋರ್ಚಾದ ನಗರ ಘಟಕದ ಅಧ್ಯಕ್ಷ ವೆಂಕಟೇಶ ಕುರುಬರ (32) ಅವರನ್ನು ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿ ಆರೋಪಿಗಳು ಪರಾರಿಯಾಗಿದ್ದರು. ಅ.8ರ ತಡರಾತ್ರಿ ಊಟ ಮುಗಿಸಿಕೊಂಡು ಸ್ನೇಹಿತರೊಂದಿಗೆ ದ್ವಿಚಕ್ರ ವಾಹನದಲ್ಲಿ ವೆಂಕಟೇಶ ತೆರಳುತ್ತಿದ್ದ ಸಂದರ್ಭದಲ್ಲಿ ಕಾರಿನಲ್ಲಿ ಹಿಂಬಾಲಿಸಿದ ಯುವಕರ ಗುಂಪು, ದ್ವಿಚಕ್ರ ವಾಹನಕ್ಕೆ ಗುದ್ದಿ ಬೀಳಿಸಿದ್ದರು. ಬಳಿಕ ಕೆಳಕ್ಕೆ ಬಿದ್ದ ವೆಂಕಟೇಶನ ಮೇಲೆ ಮಾರಕಾಸ್ತ್ರಗಳಿಂದ ದಾಳಿ ಮಾಡಿ ಮನಬಂದಂತೆ ಕೊಚ್ಚಿ ಕೊಲೆ ಮಾಡಿದ್ದರು. ತೀವ್ರವಾಗಿ ಗಾಯಗೊಂಡು ರಕ್ತದ ಮಡುವಿನಲ್ಲಿ ಬಿದ್ದಿದ್ದ ವೆಂಕಟೇಶನನ್ನು ಸರ್ಕಾರಿ ಉಪ ವಿಭಾಗ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದರು. ಈ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ನಗರ ಪೊಲೀಸರು, 12 ಜನರನ್ನು ಬಂಧಿಸಿದ್ದು, ಸುಮಾರು 927 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದ್ದರು.

ತೀರ್ಪಿನಲ್ಲಿ ಏನಿದೆ?: ಗಂಗಾವತಿಯ ರೈಲ್ವೆ ನಿಲ್ದಾಣದ ಬಳಿ ನಡೆದಿದ್ದ ಮಾರುತಿ ಎಂಬ ಯುವಕನ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ ಪ್ರಕರಣದಲ್ಲಿ ವೆಂಕಟೇಶ ಪ್ರತ್ಯಕ್ಷ ಸಾಕ್ಷಿಯಾಗಿದ್ದರು. ಅಲ್ಲದೆ, ಮಾರುತಿ ಚಿಕಿತ್ಸೆಗೆ ಕೊನೆಯವರೆಗೂ ಬೆಂಬಲವಾಗಿ ನಿಂತಿದ್ದ ಎಂಬ ಕಾರಣಕ್ಕೆ ವೆಂಕಟೇಶನನ್ನು ಕೊಲೆ ಮಾಡಿದ್ದೀರಿ. ಸಭ್ಯ ನಾಗರಿಕ ಸಮಾಜ ಇಂತಹ ಕೃತ್ಯಗಳನ್ನು ಒಪ್ಪುವುದಿಲ್ಲ, ಅಪರಾಧ ಕೃತ್ಯಗಳ ಹಿನ್ನೆಲೆ ಪರಿಗಣಿಸಿ ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸಿ ತೀರ್ಮ ಪ್ರಕಟಿಸಿದ್ದಾರೆ.

ಕಠಿಣ ಕ್ರಮಕ್ಕೆ ಆದೇಶ

ಪುಟ 1 ➡ ಗಾಯಗೊಂಡವರಿಗೆ ಉಚಿತ ಚಿಕಿತ್ಸೆ ನೀಡುವಂತೆ ಸೂಚಿಸಿದರು.

ಮುಂಗಾರು ಮಳೆಗೂ ಮೊದಲೇ ಸಿದ್ಧತೆ ಕೈಗೊಳ್ಳಿ: ಮುಂಗಾರು ಮಳೆ ಪ್ರಾರಂಭವಾಗುವ ಮೊದಲೇ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಬೆಂಗಳೂರಿನ ಐದೂ ವಲಯಗಳ ಆಯುಕ್ತರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಒಣಗಿರುವ ಅಪಾಯಕಾರಿ ಮರಗಳ ರೆಂಬೆಗಳನ್ನು ಕತ್ತರಿಸಬೇಕು ಎಂದು ಮುಖ್ಯಮಂತ್ರಿಗಳು ಸೂಚಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಸಕ ರಿಜ್ವಾನ್ ಅರ್ಷದ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಜಿಬಿಎ ಆಯುಕ್ತ ಮಹೇಶ್ವರ ರಾವ್, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ಅಂಜುಮ್ ಪರ್ವೇಜ್ ಇದ್ದರು.

ರಾಜ್ಯಾದ್ಯಂತ ಶಿಥಿಲ ಆಸ್ಪತ್ರೆ ಕಟ್ಟಡ ಪರಿಶೀಲನೆ

ಪುಟ 1 ➡ ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಸೇರಿದಂತೆ ರಾಜ್ಯದಲ್ಲಿರುವ ಎಲ್ಲ ಆಸ್ಪತ್ರೆ ಕಟ್ಟಡಗಳನ್ನು ಹಾಗೂ ಕಾಂಪೌಂಡ್‌ಗಳನ್ನು ತಜ್ಞರ ತಂಡ ಪರಿಶೀಲನೆ ನಡೆಸಲು ಆದೇಶಿಸಲಾಗಿದೆ ಎಂದರು.



ಪ್ರಧಾನಿ ಮೋದಿ ಸಂತಾಪ

ಪುಟ 1 ➡ ದುರ್ಘಟನೆ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಕರ್ನಾಟಕದ ಬೆಂಗಳೂರಿನಲ್ಲಿ ಗೋಡೆ ಕುಸಿತದಿಂದ ಸಂಭವಿಸಿದ ಅನಾಹುತವು ಅತ್ಯಂತ ದುರದೃಷ್ಟಕರ. ದುಃಖತಪ್ತ ಕುಟುಂಬಗಳಿಗೆ ನನ್ನ ಸಂತಾಪಗಳು. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸುವೆ ಎಂದು ಅಧಿಕೃತ ಎಕ್ಸ್ ಖಾತೆಯಲ್ಲಿ ಬರೆದಿದ್ದಾರೆ. ಘಟನೆಯಲ್ಲಿ ಮೃತಪಟ್ಟವರ ಕುಟುಂಬಕ್ಕೆ ಕೇಂದ್ರ ಸರ್ಕಾರ ಪರಿಹಾರ ಘೋಷಿಸಿದೆ. ಮೃತರ ಕುಟುಂಬಕ್ಕೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರೂಪಾಯಿ ಹಾಗೂ ಗಾಯಗೊಂಡವರಿಗೆ 50,000 ರೂಪಾಯಿಗಳ ಪರಿಹಾರ ನೀಡುವುದಾಗಿ ತಿಳಿಸಿದೆ.

ವಾರದೊಳಗೆ ಎತ್ತಿನಹೊಳೆ ಬಾಕಿ ಕಾಮಗಾರಿ: ಡಿಕೆಶಿ

ಪುಟ 1 ➡ ತುಮಕೂರು ಭಾಗದಲ್ಲೂ ಭೂಸ್ವಾಧೀನಕ್ಕೆ ಸರ್ವೇ ನಡೆಸಲು ಕ್ರಮ ತೆಗೆದುಕೊಳ್ಳಲಾಗುವುದು. ಆದಷ್ಟು ಬೇಗ ಚಿಕ್ಕಬಳ್ಳಾಪುರ ಹಾಗೂ ಕೋಲಾರಕ್ಕೆ ನೀರನ್ನು ತೆಗೆದುಕೊಂಡು ಹೋಗಲಾಗುವುದು. ಎತ್ತಿನಹೊಳೆ, ಭದ್ರಾ ಮೇಲ್ದಂಡೆ ಹಾಗೂ ಮೇಕೆದಾಟು ವಿಚಾರವಾಗಿ ಸಂಬಂಧಪಟ್ಟ ಶಾಸಕರ, ಅಧಿಕಾರಿಗಳ ಸಭೆ ನಡೆಸಿದ್ದೇವೆ. ಈ ಸಭೆಯಲ್ಲಿ, ಕಂದಾಯ, ಅರಣ್ಯ ಹಾಗೂ ಗೃಹಸಚಿವರು ಭಾಗವಹಿಸಿದ್ದರು. ಎತ್ತಿನಹೊಳೆ ವಿಚಾರವಾಗಿ ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರನ್ನು ಭೇಟಿಯಾಗಿದ್ದೆ. ನಾವು ಅವರ ಷರತ್ತುಗಳನ್ನು ಒಪ್ಪಿಕೊಂಡು ಮುಂದುವರಿದಿದ್ದೇವೆ ಎಂದು ತಿಳಿಸಿದರು.

ಸಭೆಯಲ್ಲಿ ಸಚಿವರಾದ ಡಾ. ಜಿ. ಪರಮೇಶ್ವರ, ಕೃಷ್ಣಬೈರೇಗೌಡ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

5,300 ಎಕರೆ ಅರಣ್ಯ ಇಲಾಖೆಗೆ

ಮೇಕೆದಾಟು ವಿಚಾರವಾಗಿ ಡಿಪಿಆರ್ ಸಿದ್ಧವಾಗಿದ್ದು ಅದನ್ನು ಸಹ ಸಮಿತಿ ಮುಂದೆ ಸಲ್ಲಿಸಲಾಗುವುದು. ಮತ್ತೊಮ್ಮೆ ಪೆಟ್ಟ ಪರಿಷ್ಕರಣೆ ಮಾಡಿದ್ದೇವೆ. ಸುಮಾರು 5,300 ಎಕರೆ ಜಮೀನನ್ನು ನಾವು ಅರಣ್ಯ ಇಲಾಖೆಗೆ ನೀಡಬೇಕಿದೆ. ಈ ಬಗ್ಗೆಯೂ ಕಂದಾಯ ಇಲಾಖೆ ಜತೆ ಮಾತನಾಡಲಾಗುವುದು ಎಂದರು.

ಜೆಡಿಎಸ್‌ನಿಂದ ತಲಾ ಒಂದು ಲಕ್ಷ ಪರಿಹಾರ

ಬೌರಿಂಗ್ ಆಸ್ಪತ್ರೆ ಬಳಿ ಸಂಭವಿಸಿದ ದುರ್ಘಟನೆಯಲ್ಲಿ ಮೃತಪಟ್ಟವರ ಮನೆಗಳಿಗೆ ಹಾಗೂ ಆಸ್ಪತ್ರೆಗೆ ವಿಧಾನ ಪರಿಷತ್‌ನ ಜೆಡಿಎಸ್ ಶಾಸಕಾಂಗ ಪಕ್ಷದ ಉಪ ನಾಯಕ ಟಿ.ಎ.ಶರವಣ ನೇತೃತ್ವದ ಜೆಡಿಎಸ್ ನಿಯೋಗ ಭೇಟಿ ನೀಡಿತು. ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ನಿಯೋಗವು, ಗಾಯಾಳುಗಳ ಆರೋಗ್ಯ ವಿಚಾರಿಸಿತು. ಜೆಡಿಎಸ್ ಪಕ್ಷದಿಂದ ಮೃತರ ಕುಟುಂಬಸ್ಥರಿಗೆ ತಲಾ 1 ಲಕ್ಷ ರೂ.ಗಳಂತೆ 7 ಲಕ್ಷ ರೂ. ಹಾಗೂ ಗಾಯಾಳುಗಳ ಕುಟುಂಬಗಳಿಗೆ ತಲಾ 25 ಸಾವಿರ ರೂ. ಪರಿಹಾರವನ್ನು ಶರವಣ ಘೋಷಣೆ ಮಾಡಿದರು.

ಬಂಗಾಳ, ಅಸ್ಸಾಂನಲ್ಲಿ ಬಿಜೆಪಿ ಸರ್ಕಾರ ರಚಿಸುವುದು ಖಚಿತ



• **ಬೆಂಗಳೂರು:** ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಬಿಜೆಪಿ ಸರ್ಕಾರ ರಚನೆಯಾಗುವುದು ಖಚಿತ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಗುರುವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ಬಂಗಾಳದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮೇಲೆ ಜನತೆ ವಿಶ್ವಾಸ ಇಟ್ಟಿದ್ದಾರೆ. ಅಸ್ಸಾಂನಲ್ಲಿ ಮತದಾರರು ಮೂರನೇ ಬಾರಿ ಸೇವೆ ಮಾಡುವ ಅವಕಾಶ ನೀಡಲಿದ್ದಾರೆ ಎಂದು ತಿಳಿಸಿದರು. ಬಂಗಾಳದಲ್ಲಿ ಈ ಬಾರಿ ರಾಷ್ಟ್ರವಾದಿಗಳ ಸರ್ಕಾರ ರಚನೆ ಆಗಲಿದೆ ಎಂದು ನುಡಿದರು. ಪುದುಚೇರಿಯಲ್ಲಿ ಎನ್‌ಡಿಎ ಸರ್ಕಾರ ಬರಲಿದೆ. ತಮಿಳುನಾಡಿನಲ್ಲಿ ಒಳ್ಳೆಯದೇ ಆಗಲಿದೆ. ಕೇರಳದಲ್ಲಿ ಬಿಜೆಪಿ ಪ್ರಮುಖ ಶಕ್ತಿಯಾಗಿ ಹೊರಹೊಮ್ಮುತ್ತದೆ ಎಂದು ವಿವರಿಸಿದರು.

ಎಲ್ಲಾ ಭಾರತೀಯರದ್ದೂ ಮಹಾದೇವನ ಡಿಎನ್‌ಎ

ಪುಟ 1 ➡ ಎಲ್ಲಾ ಭಾರತೀಯರ ಡಿಎನ್‌ಎ ಭಗವಾನ್ ಮಹಾದೇವನೊಂದಿಗೆ ಸಂಬಂಧ ಹೊಂದಿದೆ ಎಂದು ಹೇಳಿದ್ದರು.

ಮೇಜರ್ ಆಸೀಫ್ ನೀಡಿದ ಹೇಳಿಕೆಯ ವೀಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ವಿವಾದಕ್ಕೆ ಕಾರಣವಾಗಿತ್ತು. ವಿವಿಧ ಭಾಷೆ, ಧರ್ಮ ಮತ್ತು ಭೌಗೋಳಿಕ ಹಿನ್ನೆಲೆ ಹೊಂದಿದ್ದರೂ, ಭಾರತೀಯರು ಸಾಮಾನ್ಯ ಡಿಎನ್‌ಎ ಮೂಲಕ ಪರಸ್ಪರ ಸಂಬಂಧ ಹೊಂದಿದ್ದಾರೆ ಎಂದು ಅವರು ಪ್ರತಿಪಾದಿಸಿದ್ದರು.



ರಾಜಕೀಯ ಸಮರ್ಥನೆ: ಬಿಜೆಪಿಯ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ಆಸೀಫ್ ಹೇಳಿಕೆಯನ್ನು ಶಬ್ದಶಃ ಅರ್ಥೈಸುವ ಬದಲು ಅದನ್ನು ನಾಗರಿಕತೆಯ ಸಂಕೇತವಾಗಿ ನೋಡಬೇಕು ಎಂದು ತಿಳಿಸಿದ್ದಾರೆ. ಹಂಚಿ ಹೋಗಿರುವ ಪೂರ್ವಜರು ಮತ್ತು ಸಾಂಸ್ಕೃತಿಕ ನಿರಂತರತೆಯನ್ನು ಈ ಹೇಳಿಕೆ ಪ್ರತಿಬಿಂಬಿಸುತ್ತದೆ ಎಂದು ಅವರು ವಾದಿಸಿದ್ದಾರೆ. ಇಂತಹ ಹೇಳಿಕೆಗಳನ್ನು ಅವೈಜ್ಞಾನಿಕ ಎಂದು ಟೀಕಿಸುವುದು ನಾಗರಿಕತೆಯ ಕಲ್ಪನೆಗಳ ಬಗ್ಗೆ ಇರುವ ಅಸಹಿಷ್ಣುತೆಯನ್ನು ತೋರಿಸುತ್ತದೆ ಎಂದು ಅವರು ಹೇಳಿದ್ದಾರೆ.

ಐತಿಹಾಸಿಕ ಮತ್ತು ಸಾಂಸ್ಕೃತಿಕ ಉಲ್ಲೇಖ

ಭಾರತದ ಸಮ್ಮಿಶ್ರ ಸಂಸ್ಕೃತಿಯನ್ನು ಬೆಂಬಲಿಸಲು ಮಾಳವೀಯ, ಮೌಲಾನಾ ಅಬುಲ್ ಕಲಾಂ ಆಜಾದ್ ಮತ್ತು ಮೌಲಾನಾ ವಹೀದುದ್ದೀನ್ ಖಾನ್ ರಂತಹ ನಾಯಕರನ್ನು ಉಲ್ಲೇಖಿಸಿದ್ದಾರೆ. ಮತಾಂತರ ಒಬ್ಬರ ಜನಾಂಗ ಅಥವಾ ಮೂಲವನ್ನು ಬದಲಿಸುವುದಿಲ್ಲ ಎಂದು ವಹೀದುದ್ದೀನ್ ಖಾನ್ ಹೇಳಿದ್ದರು. ಅಲ್ಲದೆ, ಕವಿ ಮುಹಮ್ಮದ್ ಇಕ್ಬಾಲ್, ಭಗವಾನ್ ರಾಮನನ್ನು ಇಮಾಮ್-ಎ-ಹಿಂದ್ ಎಂದು ಬಣ್ಣಿಸಿರುವುದನ್ನೂ ಅವರು ಈ ಸಂದರ್ಭದಲ್ಲಿ ಉಲ್ಲೇಖಿಸಿದ್ದಾರೆ.

ಐಟಿಗೆ ಟೆರರ್‌ನ ಅರ್ಥ

ಪುಟ 1 ➡ ಆಪರೇಷನ್ ಸಿಂದೂರನ್ನು ಭಾರತ ತನ್ನದೇ ಷರತ್ತು ಗಳಲ್ಲಿ, ತನ್ನದೇ ಸಮಯದಲ್ಲಿ ನಡೆಸಿ, ತನ್ನದೇ ನಿರ್ಧಾರದಲ್ಲಿ ಸ್ಥಗಿತಗೊಳಿಸಿತು ಎಂದು ಅವರು ತಿಳಿಸಿದರು. ಕಾರ್ಯಾಚರಣೆಯ ವೇಳೆ ಕೇವಲ ದಾಳಿಗೆ ಕಾರಣರಾದವರನ್ನೇ ನಿಖರವಾಗಿ ಗುರಿಯಾಗಿಸಲಾಗಿದೆ ಎಂದು ಹೇಳಿದರು.

ಉತ್ಪಾದನಾ ಕ್ಷೇತ್ರದ ಸಾಧನೆ

ಪುಟ 1 ➡ ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ.62.66 ಹೆಚ್ಚಳವಾಗಿದೆ ಎಂದು ರಾಜ್‌ನಾಥ್ ಸಿಂಗ್ ಅವರು ಮಾಹಿತಿ ನೀಡಿದರು. ಹೊಸ ಜಾಗತಿಕ ವ್ಯವಸ್ಥೆಯಲ್ಲಿ ಹೊಸ ಭಾರತ ಯಾವುದೇ ಭಯೋತ್ಪಾದಕರನ್ನು ಹಾಗೂ ಅದನ್ನು ಪ್ರೋತ್ಸಾಹಿಸುವವರನ್ನು ವಿಭಿನ್ನವಾಗಿ ನೋಡುವುದಿಲ್ಲ ಎಂಬ ಸ್ಪಷ್ಟ ನೀತಿಯನ್ನು ಅನುಸರಿಸುತ್ತಿದೆ ಎಂದು ಅವರು ಹೇಳಿದರು.

8 ಜಿಪಂ ಕ್ಷೇತ್ರಗಳ ಗಡಿ ನಿಗದಿ

• **ಬೆಂಗಳೂರು:** ರಾಜ್ಯದ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಬೆಂಗಳೂರು ದಕ್ಷಿಣ, ಹಾಸನ, ಉತ್ತರ ಕನ್ನಡ, ಯಾದಗಿರಿ, ಬೀದರ್ ಮತ್ತು ಕೊಪ್ಪಳ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಚುನಾಯಿತ ಸದಸ್ಯರ ಸಂಖ್ಯೆಯನ್ನು ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಗಡಿಗಳನ್ನು ಮರು ನಿಗದಿಪಡಿಸಿ ರಾಜ್ಯ ಸರ್ಕಾರ ಅಧಿಸೂಚನೆ ಪ್ರಕಟಿಸಿದೆ.

ನಗರಾಭಿವೃದ್ಧಿ ಇಲಾಖೆಯು 8 ಜಿಲ್ಲೆಗಳ ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಪರಿವರ್ತಿಸಿರುವ ಹಿನ್ನೆಲೆಯಲ್ಲಿ ಹಾಗೂ ಕಂದಾಯ ಇಲಾಖೆಯು ಮಾಗಡಿ ಹಾಗೂ ನೆಲಮಂಗಲ ತಾಲ್ಲೂಕುಗಳ ಗಡಿಗಳನ್ನು ಪುನರ್ ರಚಿಸಿರುವುದರಿಂದ ಮತ್ತೊಮ್ಮೆ ಕ್ಷೇತ್ರಗಳನ್ನು ಪುನರ್ ರಚಿಸಿ 8 ಜಿಲ್ಲೆಗಳಿಗೆ ಸಂಬಂಧಿಸಿದ ತಾಲ್ಲೂಕುಗಳ, ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಗಡಿಗಳನ್ನು ಮರು ನಿಗದಿಪಡಿಸಲಾಗಿದೆ.

ತೆರಿಗೆ ನೀತಿಗೆ ಅಭಿಪ್ರಾಯ ಸಂಗ್ರಹಣೆ

• **ಬೆಂಗಳೂರು:** ಅಬಕಾರಿ ಇಲಾಖೆ ಜಾರಿಗೆ ತರಲಿರುವ ಆಲ್ಕೋಹಾಲ್ ಆಧಾರಿತ ತೆರಿಗೆ ನೀತಿಯ ಅನುಷ್ಠಾನಕ್ಕೂ ಮುನ್ನ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿದ್ದು, ಸಾರ್ವಜನಿಕರು, ವ್ಯಾಪಾರಿಗಳು, ತಜ್ಞರು ತಮ್ಮ ಅನಿಸಿಕೆಗಳನ್ನು ನೀಡಬಹುದಾಗಿದೆ. ಸಮಾಲೋಚನಾ ಪೋರ್ಟಲ್ http://www.civis.vote/consultations/1524/read ಗೆ ಭೇಟಿ ನೀಡಿ ಅಥವಾ ವಾಟ್ಸಾಪ್ ಚಾಟ್‌ಬಾಟ್ ಮೂಲಕ ಸಂಪರ್ಕಿಸಿ. Karnatakaexcise ಎಂಬ ಕೀವರ್ಡ್ ಅನ್ನು wa.link/uv7q49 ಲಿಂಕ್‌ಗೆ ಕಳುಹಿಸಿ ಅಭಿಪ್ರಾಯ ತಿಳಿಸಬೇಕಿದೆ. ಸುಧಾರಣೆಗಳ ನೀತಿಯಡಿ ಮುಖ್ಯವಾಗಿ ಮುಂದಿನ 6 ವರ್ಷಗಳಲ್ಲಿ ಮದ್ಯ ಸೇವನೆಯ ಪ್ರಮಾಣವನ್ನು 8-9%ಗೆ ಇಳಿಕೆ ಮಾಡುವ ಗುರಿಯನ್ನು ಹೊಂದಲಾಗಿದೆ. ಕಡಿಮೆ ಪ್ರಮಾಣದ ಆಲ್ಕೋಹಾಲ್ ಇರುವ ಮದ್ಯಕ್ಕೆ ಉತ್ತೇಜನ ನೀಡುವುದು, ಸರಳೀಕೃತ ತೆರಿಗೆ ವ್ಯವಸ್ಥೆ ಜಾರಿ ಮಾಡುವುದು ಹಾಗೂ ಅಕ್ರಮ ವ್ಯಾಪಾರಕ್ಕೆ ಕಡಿವಾಣ ಹಾಕುವುದು ಕೂಡ ಸೇರಿವೆ.

ಕಿರುಸುದ್ದಿ

ಸಂಭ್ರಮದ ಹಸಿಕರಗ ಮಹೋತ್ಸವ

• **ದೊಡ್ಡಬಳ್ಳಾಪುರ:** ನಗರದ ಚಿಕ್ಕಪೇಟೆಯ ಇತಿಹಾಸ ಪ್ರಸಿದ್ಧ ಶ್ರೀ ಆದಿಶಕ್ತ್ಯಾತ್ಮಕ ದ್ರಾಪದಿದೇವಿ ಕರಗ ಮಹಮಹೋತ್ಸವ ಅಂಗವಾಗಿ ಹಸಿ ಕರಗ ಉತ್ಸವ ಸಂಭ್ರಮದಿಂದ ನೆರವೇರಿತು. ಹಸಿ ಕರಗ ಉತ್ಸವವನ್ನು ಸಹಸ್ರಾರು ಜನ ವೀಕ್ಷಿಸಿದರು. ಹೊಸಕೋಟೆ ತಾಲೂಕಿನ ಉಪ್ಪಾರಹಳ್ಳಿ ಪೂಜಾರಿ ವೈ.ಭೀಮರಾಜ್ ಹಸಿ ಕರಗವನ್ನು ಹೊತ್ತು ಕರಗದ ಧಾರ್ಮಿಕ ವಿಧಿಗಳನ್ನು ನೆರವೇರಿಸಿದರು. ನಗರದ ಗಗನಾರ್ಯಸ್ವಾಮಿ ಮಠದಿಂದ ಹೊರಟ ಉತ್ಸವ ಹಳೇ ಬಸ್ ನಿಲ್ದಾಣ, ಶ್ರೀ ನೆಲದಾಂಜನೇಯಸ್ವಾಮಿ



ದೇವಾಲಯ, 7 ಸುತ್ತಿನ ಕೋಟೆ, ತೂಬಗೆರೆ ಪೇಟೆ, ವನ್ನಿಗರಪೇಟೆ ಮೊದಲಾದೆಡೆ ಸಂಚರಿಸಿ ದೇವಾಲಯದ ಬಳಿ ಆಗಮಿಸಿತು. ಶುಕ್ರವಾರ ರಾತ್ರಿ ನಡೆಯಲಿರುವ ಶ್ರೀ ಆದಿಶಕ್ತ್ಯಾತ್ಮಕ ದ್ರೌಪದಾದೇವಿ ಕರಗ ಮಹೋತ್ಸವಕ್ಕೆ ಸಿದ್ಧತೆಗಳು ಪೂರ್ಣಗೊಂಡಿವೆ. ದೇವಾಲಯವನ್ನು ವಿದ್ಯುತ್ ದೀಪಾಲಂಕಾರಗಳಿಂದ ಅಲಂಕರಿಸಲಾಗಿದೆ. ನಗರದ ವಿವಿಧ ವೃತ್ತಗಳಲ್ಲಿ ತಮಿಳುನಾಡು ಕಲಾವಿದರಿಂದ ತಯಾರಿಸಲಾದ ವಿವಿಧ ದೇವತೆಗಳ ವಿದ್ಯುತ್ ದೀಪಾಲಂಕಾರ, ಬೃಹತ್ ಕಟೌಟು ಮೆರುಗು ನೀಡಿವೆ. ಕರಗದ ಅಂಗವಾಗಿ ದೇವಾಲಯದಲ್ಲಿ ವಿಶೇಷ ಗಣ ಹೋಮ, ನವಗ್ರಹ ಹೋಮ, ಚಂಡಿಕಾ ಹೋಮ ನಡೆಯಿತು. ಕರಗ ಉತ್ಸವದ ದಿನದವರೆಗೆ ನಿತ್ಯ ಅಭಿಷೇಕ, ಪೊಂಗಲ್ ಸೇವೆ ನಡೆದವು.

ಕಟ್ಟಡ ಕಾರ್ಮಿಕರಿಗೆ ವಿಶ್ರಾಂತಿ ನೀಡಲು ಸೂಚನೆ

• **ಕೋಲಾರ:** ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನವಿತೀ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕಟ್ಟಡ ಕಾರ್ಮಿಕರಿಗೆ ಮಧ್ಯಾಹ್ನ 1 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿಶ್ರಾಂತಿ ನೀಡುವುದು ಗುತ್ತಿದಾರರ, ಮಾಲೀಕರ ಜವಾಬ್ದಾರಿಯಾಗಿದೆ ಎಂದು ಕಾರ್ಮಿಕ ಅಧಿಕಾರಿ ತಿಳಿಸಿದ್ದಾರೆ. ಕಟ್ಟಡ ಕಾಮಗಾರಿ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಂಭವ ಇರುವುದರಿಂದ, ಕಾರ್ಮಿಕರ ಆರೋಗ್ಯದ ಹಿತದೃಷ್ಟಿ ಹಿನ್ನೆಯಲ್ಲಿ ಮಧ್ಯಾಹ್ನದ ವೇಳೆ ವಿಶ್ರಾಂತಿಗೆ ಅವಕಾಶ ನೀಡುವಂತೆ ಹಾಗೂ ಕಾರ್ಮಿಕರ ಆರೋಗ್ಯವನ್ನು ರಕ್ಷಿಸಿಕೊಳ್ಳಲು ಕೆಲವು ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಿದ್ದಾರೆ. ಕಾರ್ಮಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಮತ್ತು ಪ್ರತಿ ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆಯನ್ನು ನೀಡುವುದು ಗುತ್ತಿಗೆದಾರರ, ಮಾಲೀಕರ ಜವಾಬ್ದಾರಿಯಾಗಿದ್ದು, ಈ ಬಗ್ಗೆ ಸೂಕ್ತ ಕ್ರಮವಹಿಸಬೇಕೆಂದು ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

ಗಾನಸುಧೆಯಿಂದ ಬೇಸಿಗೆ ಶಿಬಿರ

• **ಕೋಲಾರ:** ಜಿಲ್ಲೆಯ ಮಾಲೂರು ತಾಲೂಕಿನ ಜಯಮಂಗಲ ಗ್ರಾಮದ ಪ್ರಸಿದ್ಧ 'ಗಾನ ಸುಧಾ ಸಾಂಸ್ಕೃತಿಕ ಸಂಸ್ಥೆ'ಯಿಂದ ಸಾರ್ವಜನಿಕರಿಗಾಗಿ ವಿವಿಧ ಪ್ರಕಾರದ ಸಂಗೀತ ತರಗತಿಗಳು ಹಾಗೂ ವಿಶೇಷ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಈ ತರಗತಿಗಳ ವಿಶೇಷವೆಂದರೆ ಇಲ್ಲಿ ಕಲಿಯಲು ಯಾವುದೇ ವಯಸ್ಸಿನ ಮಿತಿ ಇರುವುದಿಲ್ಲ; ಆಸಕ್ತಿಯಿರುವ ಎಲ್ಲಾ ವಯೋಮಾನದವರು ಭಾಗವಹಿಸಬಹುದಾಗಿದೆ. ಸಂಸ್ಥೆಯಲ್ಲಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಭಕ್ತಿ ಸಂಗೀತ, ವಚನ ಸಂಗೀತ ಹಾಗೂ ತತ್ವಪದ ಗಾಯನವನ್ನು ಅತ್ಯಂತ ಶಿಸ್ತುಬದ್ಧವಾಗಿ ಕಲಿಸಿಕೊಡಲಾಗುತ್ತದೆ. ಗಾಯನದ ಜತೆಗೆ ಹಾರ್ಮೋನಿಯಂ ವಾದನವನ್ನು ಕಲಿಯಲು ಸಹ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ತರಗತಿ ಸಮಯ ಹಾಗೂ ಹೆಚ್ಚಿನ ಮಾಹಿತಿಗಾಗಿ ಗಾನ ಸುಧಾ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷರನ್ನು ಈ ಕೆಳಗಿನ ಮೊ.99642 58180 ಅಥವಾ 91131 18180 ಸಂಪರ್ಕಿಸಲು ಕೋರಲಾಗಿದೆ:.

ಮೇ 5ರಂದು ನೀರಿನ ಅದಾಲತ್

• **ಕೋಲಾರ:** ಇಲ್ಲಿನ ನಗರಸಭೆಯ ಎಲ್ಲಾ 35 ವಾರ್ಡ್‌ಗಳಲ್ಲಿನ ನೀರಿನ ಅದಾಲತ್ ಕಾರ್ಯಕ್ರಮವನ್ನು ನಗರಸಭೆ ಕಚೇರಿಯಲ್ಲಿ 2026ರ ಮೇ 5, 15 ಮತ್ತು 25 ರಂದು ಬೆಳಗ್ಗೆ 10.00 ಗಂಟೆಯಿಂದ 1.00 ಗಂಟೆಯವರೆಗೆ ಆಯೋಜಿಸಲಾಗಿದೆ. ಕುಡಿಯುವ ನೀರಿನ ಕೊರತೆ, ಲಭ್ಯತೆ ಹಾಗೂ ನೀರು ಸರಬರಾಜು ಸಂಬಂಧಿತ ಸಾರ್ವಜನಿಕ ಅಹವಾಲನ್ನು ಪರಿಶೀಲಿಸಲಾಗುವುದು.

ನೋಂದಾಯಿಸಲಾದ ಅಹವಾಲನ್ನು ಗಂಭೀರವಾಗಿ ಪರಿಗಣಿಸಿ, ಸಾಧ್ಯವಾದಷ್ಟು 24 ಗಂಟೆಗಳೊಳಗಾಗಿ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳಲಾಗುತ್ತದೆ. ನಗರದ ಎಲ್ಲಾ ನಾಗರಿಕರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತನಿಖೆಯಲ್ಲಿ ಸುಳ್ಳು ದಾಖಲೆ ಪತ್ರ ಸಲ್ಲಿಕೆ ಪತ್ತೆ | ಬೆಂ.ದ.ಜಿಲ್ಲೆಯಲ್ಲಿ 54,430 ಜನರಿಗೆ ಮಾಸಿಕ 800ರಿಂದ 2000ರೂ. ಪಾವತಿ

ಅನರ್ಹರಿಗೆ ಸಾಮಾಜಿಕ ಭದ್ರತಾ ಪಿಂಚಣಿ

▸ **ಎಸ್. ರುದ್ರೇಶ್ವರ**

ದಿಗಂತ ವಿಶೇಷ

• **ರಾಮನಗರ:** ಅರ್ಹ ವ್ಯಕ್ತಿಗಳಿಗೆ ಸರ್ಕಾರದ ಸಾಮಾಜಿಕ ಭದ್ರತಾ ಪಿಂಚಣಿಯ ಪ್ರಯೋಜನ ದೊರೆಯಬೇಕು. ಆದರೆ, ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 54,430 ಮಂದಿ ಅನುಮಾನಾಸ್ಪದವಾಗಿ ಸುಳ್ಳು ದಾಖಲೆ ಸಲ್ಲಿಸಿ ಪಿಂಚಣಿ ಪಡೆಯುತ್ತಿರುವುದು ಪ್ರಾಥಮಿಕ ಮಾಹಿತಿಯಲ್ಲಿ ತಿಳಿದುಬಂದಿದೆ.

ಸಾಮಾಜಿಕ ಭದ್ರತೆ ಮಾಸಾಶನ ಯೋಜನೆಯಲ್ಲಿ ಜಿಲ್ಲೆಯಲ್ಲಿ ಮಾಸಾಶನ ಪಡೆಯುತ್ತಿರುವವರಲ್ಲಿ ಸುಮಾರು 54,430 ಅನುಮಾನಾಸ್ಪದ ಪಿಂಚಣಿದಾರರನ್ನು ರಾಜ್ಯ ಸರ್ಕಾರ ಗುರುತಿಸಿದೆ.

ಸಂಧ್ಯಾ ಸುರಕ್ಷಾ ವೃದ್ಧಾಪ್ಯ ವೇತನ, ವಿಧವಾ ವೇತನ, ಮೈತ್ರಿ, ಮನಸ್ವಿನಿ, ವಿಶೇಷ ಚೇತನ ಪೋಷಕ ಭತ್ಯೆ ಸೇರಿ ಜಿಲ್ಲೆಯಲ್ಲಿ ಲಕ್ಷಾಂತರ ಜನರು ಮಾಸಿಕ 800ರಿಂದ 2000 ರು.ಗಳವರೆಗೂ ಮಾಸಾಶನ ಪಡೆಯುತ್ತಿದ್ದಾರೆ. ಅವರಲ್ಲಿ ಗುರುತಿಸಿರುವ ಅನುಮಾನಾಸ್ಪದ ಪಿಂಚಣಿದಾರರು ಸರ್ಕಾರಿ ನೌಕರರು, ಆದಾಯ ತೆರಿಗೆ ಪಾವತಿದಾರರು, ಎಪಿಎಲ್ ಕಾರ್ಡ್‌ದಾರರು, ಜಿಎಸ್‌ಟಿ ನಂಬರ್ ಹೊಂದಿರುವವರು, ನಿಗದಿತ ಮಿತಿಗಿಂತ ಕಡಿಮೆ ವಯಸ್ಸಿನವರೂ ಇದ್ದಾರೆ ಎಂಬ ಅನುಮಾನ ಮೂಡಿದೆ.

ಈ ಫಲಾನುಭವಿಗಳ ವಿವರಗಳನ್ನು ಕುಟುಂಬದ ದತ್ತಾಂಶದ ಮಾಹಿತಿಯೊಂದಿಗೆ ವಯಸ್ಸು, ಆದಾಯ ಮಿತಿ, ಆದಾಯ ತೆರಿಗೆ ಪಾವತಿ, ಎಚ್‌ಆರ್‌ಎಂಎಸ್ ವಿವರಗಳನ್ನು ಸಂಯೋಜಿಸಿ ನೋಡಿದಾಗ ಸಂಧ್ಯಾ ಸುರಕ್ಷಾ ಯೋಜನೆ ಅಡಿಯಲ್ಲಿ ಅನರ್ಹ ಫಲಾನುಭವಿಗಳು ಇರುವುದನ್ನು ಗುರುತಿಸಲಾಗಿದೆ.

ಈಗಾಗಲೇ ಗ್ರಾಮವಾರು, ತಾಲೂಕುವಾರು ಮತ್ತು ಜಿಲ್ಲಾವಾರು ಫಲಾನುಭವಿಗಳ ವಿವರಗಳನ್ನು ಎಲ್ಲ ತಹಸೀಲ್ದಾರ್‌ಗಳಿಗೆ ಒದಗಿಸಲಾಗಿದೆ.



ತಾಲೂಕು	ಅನುಮಾನಾಸ್ಪದ ಪಿಂಚಣಿದಾರರ ಸಂಖ್ಯೆ
ಕನಕಪುರ	16,489
ರಾಮನಗರ	7,511
ಮಾಗಡಿ	12,056
ಚನ್ನಪಟ್ಟಣ	14,210
ಹಾರೋಹಳ್ಳಿ	4,164
ಒಟ್ಟು	54,430

ಫಲಾನುಭವಿಗಳ ವಯಸ್ಸು, ಆದಾಯ ಮಿತಿ, ಎಪಿಎಲ್, ಆದಾಯ ತೆರಿಗೆ ಪಾವತಿ ಮತ್ತು ಎಚ್‌ಆರ್‌ಎಂಎಸ್ ಮಾನದಂಡಗಳನ್ನು ಭೌತಿಕವಾಗಿ ಪರಿಶೀಲಿಸಬೇಕು. ಅನರ್ಹ ಫಲಾನುಭವಿಗಳ ಪಿಂಚಣಿಯನ್ನು ರದ್ದು ಪಡಿಸಲು ನಿಯಮಾನುಸಾರ ಕ್ರಮ ತೆಗೆದುಕೊಳ್ಳಬೇಕು ಎಂದು ಕಂದಾಯ ಇಲಾಖೆಯ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ವಿಭಾಗದ ಆಯುಕ್ತರು ಗ್ರಾಮ ಆಡಳಿತ ಅಧಿಕಾರಿಗಳಿಗೆ ಆದೇಶ ಹೊರಡಿಸಿದ್ದಾರೆ.

'ಸಂಯೋಜನೆ' ಎಂಬ ಮೊಬೈಲ್ ಆ?ಯಪ್ ಮೂಲಕ ಅನುಮಾನಾಸ್ಪದ ಪಿಂಚಣಿದಾರರ ಪರಿಶೀಲನೆಯನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಲಾಗಿದ್ದು, ಎಲ್ಲ ಗ್ರಾಮ ಆಡಳಿತ ಅಧಿಕಾರಿಗಳಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಅವರ ಲಾಗಿನ್‌ನಲ್ಲಿ ಆಯಾಯ ಗ್ರಾಮಗಳಲ್ಲಿ ಸಂದೇಹಾಸ್ಪದ ಎಂದು ಗುರುತಿಸಿರುವ ಪಿಂಚಣಿದಾರರ ಪಟ್ಟಿ ಕೂಡ ಇದೆ.

ಆಧಾರ್ ಪರಿಶೀಲನೆ ವೇಳೆಯಲ್ಲಿ ಪಿಂಚಣಿದಾರರ ವಯಸ್ಸು ಯೋಜನೆಗೆ ಅರ್ಹವಾದ ವಯಸ್ಸಿಗಿಂತ ಕಡಿಮೆ ಇರುವುದು ಕಂಡುಬಂದಿದೆ. ಅಲ್ಲದೇ ಆರೋಗ್ಯಕರವಾಗಿರುವವರು ಕೂಡಾ ವಿಕಲ ಚೇತನ ಪ್ರಮಾಣ ಪತ್ರ ಪಡೆದು ವಿಕಲ ಚೇತನರ ಪಿಂಚಣಿ ಪಡೆಯುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಇಂತಹ ಪ್ರಕರಣಗಳ ಬಗ್ಗೆ ಪುನರ್ ಪರಿಶೀಲನೆ ಮಾಡಲಾಗುವುದು. ಇದು ಸರ್ಕಾರಕ್ಕೆ ಮಾಡುವ ವಂಚನೆ ಮಾತ್ರವಲ್ಲದೇ ಸಾರ್ವಜನಿಕರಿಗೆ ಮಾಡುವ ವಂಚನೆಯಾಗಿದೆ ಎನ್ನುತ್ತಾರೆ ಸಾಮಾಜಿಕ ಭದ್ರತೆ ಹಾಗೂ ಪಿಂಚಣಿ ಇಲಾಖೆ ಅಧಿಕಾರಿಗಳು.

ಆಧಾರ್ ಕಾರ್ಡ್ ಪ್ರಕಾರ 60 ವರ್ಷ ಆಗಿರುವುದಿಲ್ಲ, ಸುಳ್ಳು ದಾಖಲೆ ಕೊಟ್ಟು 60 ವರ್ಷಕ್ಕಿಂತ ಕಡಿಮೆ ವಯಸ್ಸಿನವರೂ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳ ಫಲಾನುಭವಿಗಳಾಗಿದ್ದಾರೆ. ಇಲ್ಲಿ ಬಿಪಿಎಲ್ ಕಾರ್ಡ್, ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಿಗೆ ಅರ್ಜಿ ಹಾಕುವವರ ನಿಖರ ಆದಾಯ ಅಂದಾಜು ಮಾಡುವ ವ್ಯವಸ್ಥೆ ಇಲ್ಲ. ಆದಾಯ ತೆರಿಗೆ ಪಾವತಿಸುವವರು ಹಾಗೂ ಸರ್ಕಾರಿ ವೇತನ ಪಡೆಯುವವರು ಈ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳ ಫಲಾನುಭವಿಗಳಾಗಿದ್ದಾರೆ. ಇದು ಸರಿಯಾಗಬೇಕಾದರೆ, ನಿಖರ ಆದಾಯ ಅಂದಾಜು ಮಾಡುವ ಮೂಲಕ ಅರ್ಹರನ್ನು ಗುರುತಿಸುವ ವ್ಯವಸ್ಥೆ ಬರಬೇಕು.

ಕೆಡಿಪಿ ಸಭೆಯಲ್ಲಿ ಪ್ರತಿಧ್ವನಿ

ರಾಜ್ಯ ಸರ್ಕಾರ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಗುರುತಿಸಿರುವ 54,430 ಅನುಮಾನಾಸ್ಪದ ಪಿಂಚಣಿದಾರರ ಪರವಾಗಿ ಶಾಸಕ ಇಕ್ಬಾಲ್ ಹುಸೇನ್, ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಧ್ವನಿ ಎತ್ತಿದರು. ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಲ್ಲಿ ಅರ್ಹ ಫಲಾನುಭವಿಗಳಲ್ಲಿ ಯಾರೊಬ್ಬರು ವಂಚಿತರಾಗದಂತೆ ಕ್ರಮ ವಹಿಸಬೇಕು.



ಗ್ರಾಮವಾರು ಆಂದೋಲನಕ್ಕೆ ಉಸ್ತುವಾರಿ ಸಚಿವರ ಸೂಚನೆ

ಗ್ರಾಮವಾರು ಪಿಂಚಣಿದಾರರ ಪಟ್ಟಿ ಸಿದ್ಧಪಡಿಸಿ ದಾಖಲಾತಿ ಪರಿಶೀಲಿಸುವ ಆಂದೋಲನ ನಡೆಸಲಿ. ಒಬ್ಬ ಅರ್ಹ ಫಲಾನುಭವಿ ಪಿಂಚಣಿಯಿಂದ ವಂಚಿತರಾದರೂ ನಾನು ಸುಮ್ಮನಿರುವುದಿಲ್ಲ ಎಂದು ಇಕ್ಬಾಲ್ ಹುಸೇನ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಕೊನೆಗೆ ಸಚಿವ ರಾಮಲಿಂಗಾರೆಡ್ಡಿರವರು ಗ್ರಾಮವಾರು ಆಂದೋಲನ ನಡೆಸುವಂತೆ ಅಪರ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಕನಕಪುರದಲ್ಲೇ ಹೆಚ್ಚು ಅನರ್ಹರು

ಹಾಗಾಗಿ ರಾಜ್ಯ ಸರ್ಕಾರ ತನ್ನ ಬಳಿ ಇರುವ ದಾಖಲೆ ಆಧರಿಸಿ ಜಿಲ್ಲೆಯಲ್ಲಿ 54,430 ಪಿಂಚಣಿದಾರರನ್ನು ಸಂದೇಹಾಸ್ಪದ ಎಂದು ಗುರುತಿಸಿದೆ. ಅತಿ ಹೆಚ್ಚು ಕನಕಪುರ ತಾಲೂಕಿನಲ್ಲಿ 16,489 ಅನುಮಾನಾಸ್ಪದ ಪ್ರಕರಣಗಳಿದ್ದರೆ, ಅತಿ ಕಡಿಮೆ ಹಾರೋಹಳ್ಳಿ ತಾಲೂಕಿನಲ್ಲಿ 4164 ಸಂದೇಹಾಸ್ಪದ ಪ್ರಕರಣಗಳಿವೆ. ಉಳಿದಂತೆ ರಾಮನಗರ ತಾಲೂಕಿನಲ್ಲಿ 7511, ಮಾಗಡಿ ತಾಲೂಕಿನಲ್ಲಿ 12,056 ಹಾಗೂ ಚನ್ನಪಟ್ಟಣ ತಾಲೂಕಿನಲ್ಲಿ 14,210 ಪಿಂಚಣಿದಾರರನ್ನು ಅನುಮಾನಾಸ್ಪದ ಪಟ್ಟಿಗೆ ಸೇರಿಸಲಾಗಿದೆ.

ಪರಿಶೀಲನೆ ಬಳಿಕ ಪಿಂಚಣಿ ರದ್ದಾಗಬಹುದು

ವಾರ್ಷಿಕ 1.20 ಲಕ್ಷ ಆದಾಯ ಹೊಂದಿರುವ ಕುಟುಂಬಕ್ಕೆ ರಾಜ್ಯ ಸರ್ಕಾರ ಬಿಪಿಎಲ್ ಕಾರ್ಡ್ ನೀಡುತ್ತಿದೆ. ಆದರೆ, ಪಿಂಚಣಿ ಪಡೆಯುವವರ ಕುಟುಂಬದ ಆದಾಯ ಗರಿಷ್ಠ 32 ಸಾವಿರವಾಗಿರಬೇಕು ಎಂದು ಸರ್ಕಾರ ಮಿತಿ ವಿಧಿಸಿದೆ. ಇದು ಹಲವು ಗೊಂದಲಗಳಿಗೆ ಕಾರಣವಾಗಿದೆ. ಬಿಪಿಎಲ್ ಕಾರ್ಡ್ ಹೊಂದಿರುವ, ವಾಸ್ತವವಾಗಿ ಸೌಲಭ್ಯ ಪಡೆಯಲು ಅರ್ಹರಾಗಿರುವವರ ಹೆಸರೂ ಸಂದೇಹಾಸ್ಪದ ಪಟ್ಟಿಯಲ್ಲಿ ಸೇರಿಕೊಂಡಿದೆ. ಈಗ ಪರಿಶೀಲನೆಯ ನಂತರ ಅಂತಹ ಹಲವು ಕುಟುಂಬಗಳಿಗೂ ಪಿಂಚಣಿ ರದ್ದಾಗುವ ಅನುಮಾನವಿದೆ.

ದ್ರೌಪದಾಂಬಾ ದೇವಿ ಹೂವಿನ ಕರಗೋತ್ಸವ



• **ತಾವರೆಕೆರೆ:** ಇಲ್ಲಿನ ಕಾಳಪ್ಪನಹಳ್ಳಿಮತ್ತುಮಂಚಪ್ಪನಹಳ್ಳಿ ಗ್ರಾಮದ ವಹ್ನಿ ಕುಲಸ್ಥರಿಂದ 30ನೇ ವರ್ಷದಶ್ರೀ ದ್ರೌಪದಾಂಬಾ ದೇವಿ ಶ್ರೀ ಧರ್ಮರಾಯಸ್ವಾಮಿ ಕರಗ ಮಹೋತ್ಸವ ನಡೆಯಿತು. ಪೂಜಾರಿ ದಿಕಾಂತ್ ಅವರು ಕರಗ ಹೊತ್ತಿದ್ದರು. ಸುಮಾರು 25ಕ್ಕೂ ಹೆಚ್ಚು ಪಲ್ಲಕ್ಕಿ ಉತ್ಸವಗಳು ಹಾಗೂ ನೆರೆದಿದ್ದ ಭಕ್ತ ಸಮೂಹಕ್ಕೆ ಅನ್ನ ಸಂತರ್ಪಣೆ ನಡೆಯಿತು.

ಗ್ರಾಪಂ ಮಾಜಿ ಸದಸ್ಯ ಮುನಿರಾಜು ಮಾತನಾಡಿ, ಗ್ರಾಮದಲ್ಲಿ ಸುಮಾರು 30 ವರ್ಷದಿಂದ ನಿರಂತರವಾಗಿ ಕರಗ ಮಹೋತ್ಸವ ನಡೆಯುತ್ತಾ ಬಂದಿದೆ. ಪಕ್ಷಾತೀತವಾಗಿ ಜಾತಿಭೇದ ಮರೆತು ಗ್ರಾಮದಲ್ಲಿನ ಪ್ರತಿಯೊಬ್ಬರು ಹಬ್ಬದ ರೀತಿಯಲ್ಲಿ ಕರಗ ಮಹೋತ್ಸವವನ್ನು ಆಚರಿಸುತ್ತೇವೆಂದರು.

ಅದೇ ರೀತಿ ಈ ವರ್ಷವೂ ಸಹ ಗ್ರಾಮದ ಗ್ರಾಮ ದೇವತೆಯಾದಯಲ್ಲಮ್ಮದೇವಿ, ಶ್ರೀಧರ್ಮರಾಯಸ್ವಾಮಿ ದೇವಾಲಯದಲ್ಲಿ ರಾತ್ರಿ ಸುಮಾರು ಒಂದು ಮೂವತ್ತಕ್ಕೆ ಸರಿಯಾಗಿ ಕರಗ ಮಹೋತ್ಸವ ಪ್ರಾರಂಭಗೊಂಡು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಾ ವೀರಕುಮಾರರು ಹಾಗೂ ನೆರೆದಿದ್ದ ಭಕ್ತ ಸಮೂಹ ಗೋವಿಂದ 'ಗೋವಿಂದ ಎನ್ನುವ ನಾಮಜಪದೊಂದಿಗೆ 'ಕರಗ ಮಹೋತ್ಸವ ಪ್ರಾರಂಭಗೊಂಡಿತು.

ನಂತರ ಬೆಳಗಿನ ಜಾವ ಸುಮಾರು 7ಗಂಟೆಗೆ ಸರಿಯಾಗಿ ಅಗ್ನಿಕೊಂಡ ಪ್ರವೇಶಿಸುವುದರ ಮೂಲಕ ಕರಗ ಮಹೋತ್ಸವಕ್ಕೆ ತೆರೆ ಎಳೆಯಲಾಯಿತು. ಸುಮಾರು 25ಕ್ಕೂ ಹೆಚ್ಚು ಪಲ್ಲಕ್ಕಿ ಉತ್ಸವ ಹಾಗೂ ಗ್ರಾಮದ ಎಲ್ಲಾ ದೇವಾಲಯಗಳು ವಿಶೇಷ ಹೂವಿನ ಅಲಂಕಾರ ದೀಪಾಲಂಕಾರ ಮಾಡುವುದರ ಮೂಲಕ ನೋಡುಗರ ಗಮನ ಸೆಳೆಯಲಾಯಿತು.

ರಸಮಂಜರಿ, ಅನ್ನದಾಸೋಹ ವ್ಯವಸ್ಥೆ ಮಾಡಲಾಗಿತ್ತು. ಕರಗ ಮಹೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಪರಮ ಪೂಜ್ಯ ಜಗದ್ಗುರು ಪ್ರಣವಾನಂದಾಪುರಿ ಸ್ವಾಮಿ, ವಹ್ನಿಕುಲ ಕ್ಷತ್ರಿಯ ಯಜಮಾನ್ ಕೃಷ್ಣಪ್ಪಗೌಡ, ಕೋಲಕಾರ್ ರವಿ, ಮಂಚಪ್ಪನಹಳ್ಳಿ ಯಜಮಾನ್ ಮುನಿಯಪ್ಪಗೌಡ, ವೆಂಕಟೇಶಪ್ಪ, ಮಂಜುನಾಥ್, ವಹ್ನಿ ಕುಲಸ್ಥರು, ಸುತ್ತಮುತ್ತಲಿನ ಗ್ರಾಮಸ್ಥರು ಸಾವಿರಾರು ಸಂಖ್ಯೆಯಲ್ಲಿದ್ದರು.

ನೆಲಮಂಗಲ ತಾಪಂ ಕೆಡಿಪಿ ಸಭೆ| ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಸೂಚನೆ

ಗೃಹಲಕ್ಷ್ಮಿಗೆ 236 ಕೋಟಿ ರೂ. ಸಂದಾಯ

• **ನೆಲಮಂಗಲ:** ಗೃಹಲಕ್ಷ್ಮಿ ಯೋಜನೆಯ 29 ಕಂತಿನಲ್ಲಿ 236ಕೋಟಿ ಹಾಗೂ ಗೃಹಜ್ಯೋತಿ ಯೋಜನೆಯಲ್ಲಿ 32ಕಂತಿನಲ್ಲಿ 146.25ಕೋಟಿ ಹಣವನ್ನು ಸೋಲೂರು ಹೋರಬುಪಡಿಸಿ ಕ್ಷೇತ್ರದ ಮಹಿಳೆಯರಿಗೆ ನೀಡಲಾಗಿದೆ ಎಂದು ಶಾಸಕ ಎನ್. ಶ್ರೀನಿವಾಸ್ ತಿಳಿಸಿದರು.



ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದ್ದ ಕೆಡಿಪಿ ಸಭೆಯನ್ನು ಉದ್ದೇಶಿಸಿ ಮಾತನಾಡಿ, ಪಿಡಬ್ಲ್ಯುಡಿ ಇಲಾಖೆಯಲ್ಲಿ ಹಿಂದಿನ ಹತ್ತು ವರ್ಷದಲ್ಲಿ ಎಸ್‌ಎಸ್‌ಡಿಪಿ ಸೇರಿ ಕೇವಲ 65ಕೋಟಿ ರೂ. ಅನುದಾನ ಬಂದಿದ್ದರೆ. ನನ್ನ 3ವರ್ಷದ ಅವಧಿಯಲ್ಲಿ 157.91ಕೋಟಿ ರೂ. ಅನುದಾನ ಟೆಂಡರ್ ಮುಕ್ತಾಯವಾಗಿ ಕೆಲಸ ಪ್ರಗತಿಯಲ್ಲಿದೆಂದರು.

ಕ್ಷೇತ್ರದ ಅಭಿವೃದ್ಧಿಗೆ ಶಕ್ತಿ ಮೀರಿ ಕೆಲಸ ಮಾಡುತ್ತಿರುವುದಕ್ಕೆ ಪಿಡಬ್ಲ್ಯುಡಿ ಇಲಾಖೆಯಿಂದ ಮಾತ್ರ 126.91ಕೋಟಿ ರೂ. ಅನುದಾನ ನೆಲಮಂಗಲಕ್ಕೆ ಬಂದಿದೆ. ಎಸ್‌ಎಸ್‌ಡಿಪಿಯಲ್ಲಿ 31 ಕೋಟಿ ರೂ. ಅನುದಾನದ ಕೆಲಸವಾಗುತ್ತಿದೆ. ನೆಲಮಂಗಲ ಇತಿಹಾಸದಲ್ಲಿ ಮೂರು ವರ್ಷಕ್ಕೆ ದೊಡ್ಡ ಮಟ್ಟದ ಅನುದಾನ ಬಂದಿರುವುದು ಐತಿಹಾಸಿಕ ದಾಖಲೆಯಾಗಿದೆ ಎಂದು ಹೇಳಿದರು.

ಮುಂದಿನ ವರ್ಷದ ಒಳಗೆ 200ಕೋಟಿ ರೂ. ಗಡಿದಾಟಲಿದೆ. ಜೂನ್ ಹಾಗೂ ಆಗಸ್ಟ್ ತಿಂಗಳಲ್ಲಿ ಮಳೆ ಕೊರತೆ ಎದುರಾಗಲಿದೆ. ಈ ಬಾರಿ ಕಡಿಮೆ ಮಳೆಯ ಸೂಚನೆ ಇರುವ ಬಗ್ಗೆ ಕೃಷಿ ಇಲಾಖೆ ಎಡಿ ರಾಘವೇಂದ್ರ ಮಾಹಿತಿ ನೀಡಿದರು. ಮಳೆಗೆ ಅನುಗುಣವಾಗಿ ಬಿತ್ತನೆ ಬೀಜ, ರಸಗೊಬ್ಬರಗಳ ಸರಬರಾಜು ಪಾರದರ್ಶಕವಾಗಿ ಆಗಬೇಕು. ರೈತರಿಂದ ಸರಕಾರಿ ದರ ಬಿಟ್ಟರೆ ಹಣ ವಸೂಲಿ ಮಾಡದಂತೆ ಶಾಸಕ ಸೂಚನೆ ನೀಡಿದರು.

ಅನಿಲ ಗ್ರಾಹಕರಿಂದ ದೂರು

ದೊಡ್ಡಬಳ್ಳಾಪುರ ತಾಲೂಕಿನ ಕನ್ನಮಂಗಲದ ಗ್ರಾಮ ಇಂಡಿಯನ್ ಗ್ರಾಮೀಣ್ ವಿತರಕ್‌ನವರು ನೆಲಮಂಗಲ ತಾಲೂಕಿನಲ್ಲಿ ಗ್ಯಾಸ್ ಸರಬರಾಜು ಮಾಡಲಾಗುತ್ತಿದೆ. ಗ್ರಾಹಕರಿಗೆ ದೊಡ್ಡ ಮಟ್ಟದ ಮೋಸ ಮಾಡುತ್ತಿರುವ ಬಗ್ಗೆ ದೂರು ಬಂದ ಪರಿಣಾಮ ಕ್ರಮಕ್ಕೆ ಆಹಾರ ಇಲಾಖೆ ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದರು.

ಕುಡಿಯುವ ನೀರಿಗೆ ಬರ : ತಾಲೂಕಿನ ಶಿವಗಂಗೆ, ತ್ಯಾಮಗೊಂಡ್ಲು, ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದೆ. ಕೊಳವೆ ಬಾವಿಗಳ ಅನಿವಾರ್ಯತೆ ಇರುವ ಬಗ್ಗೆ ಕುಡಿಯುವ ನೀರು ಎಇಇ ಮಾಹಿತಿ ನೀಡಿದರು. ಗ್ರಾಮ ಪಂಚಾಯಿತಿ ವರ್ಗ- 1ರಲ್ಲಿ ಪಂಚಾಯಿತಿಗೆ 3 ಕೊಳವೆ ಬಾವಿ ತೆಗೆಸಲು ಸೂಚನೆ ನೀಡಿದ ಶಾಸಕರು, ಟ್ಯಾಂಕರ್ ನೀರು ಸರಬರಾಜು ಮಾಡಿ ನೀರಿನ ಸಮಸ್ಯೆ ಬಗೆಹರಿಸಬೇಕು, ಸಮಸ್ಯೆ ಹೆಚ್ಚಾದರೆ ಇಓ, ತಹಸೀಲ್ದಾರ್, ಪಿಡಿಓ ಹೊಣೆ ಎಂದರು.

235ಎಕರೆ ಆಶ್ರಯ ಯೋಜನೆ ಮೀಸಲು: ಶಾಸಕರ ನಿರ್ದೇಶನದಂತೆ ನೆಲಮಂಗಲ ತಾಲೂಕಿನ ಬಡ ಜನರಿಗೆ 30ಕ್ಕ30 ನಿವೇಶನ ಹಂಚಿಕೆ ಮಾಡಲು ಮೊದಲ ಹಂತದಲ್ಲಿ 139 ಎಕರೆ ಈಗಾಗಲೇ ಪಹಣಿ ಬಂದಿದ್ದೆ ಬಡಾವಣೆ ನಿರ್ಮಾಣಕ್ಕೆ ತಯಾರಿ ನಡೆಸಲಾಗುತ್ತಿದೆ. 2ನೇ ಹಂತದಲ್ಲಿ 96.29 ಎಕರೆ ಜಾಗ ಗುರುತಿಸಿ ಪಹಣಿ ಬದಲಾವಣೆಗೆ ಕಳುಹಿಸಲಾಗಿದೆ. ಒಟ್ಟಾರೆ 235.29ಎಕರೆಯಲ್ಲಿ ನಿವೇಶನ ಹಂಚಿಕೆ ಮಾಡಲಾ ಗುತ್ತದೆ ಎಂದು ತಹಸೀಲ್ದಾರ್ ಮಲ್ಲೇಶ್ ಬಿರಪ್ಪ ಪ್ರಜಾರ್ ಮಾಹಿತಿ ನೀಡಿದರು.

ತಾಲೂಕಿನಲ್ಲಿ 77 ಚಿರತೆ ಪ್ರಕರಣಗಳು ದಾಖಲಾಗಿದ್ದು 16ಲಕ್ಷ ಪರಿಹಾರ ನೀಡಲಾಗಿದೆ. ಚಿತಾ ಆಪರೇಶನ್ ಟೀಮ್ ಅಗತ್ಯವಿದೆ,ಈಗಾಗಲೇ 5 ಬೋನ್ ವ್ಯವಸ್ಥೆ ಮಾಡಲಾಗಿದೆ. ರೈತರಿಗೆ 15ಸಾವಿರ ಸಸಿಗಳನ್ನು ವಿತರಣೆಯಾಗಿದೆ ಎಂದು ಆರ್‌ಎಫ್‌ಓ. ಮಂಜುನಾಥ್ ಮಾಹಿತಿ ನೀಡಿದರು.

ಭೂಗಳ್ಳರ ವಿರುದ್ಧ ಶೀಘ್ರ ಕ್ರಮಕ್ಕೆ ಕೆಆರ್‌ಎಸ್ ಒತ್ತಾಯ

• **ಹಾರೋಹಳ್ಳಿ:** ಹಾರೋಹಳ್ಳಿ ಕೈಗಾರಿಕಾ ಪ್ರದೇಶ. ಸರ್ವೆ.ನಂ. 478ರಲ್ಲಿ ಅಕ್ರಮವಾಗಿ ನಕಲಿ ದಾಖಲೆ ಸೃಷ್ಟಿಸಿ ಸರಕಾರಿ ಖರಾಬು ಜಮೀನನ್ನು ಕಬಳಿಸಲು ಮುಂದಾಗಿರುವವರ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕೆಆರ್‌ಎಸ್ ಪಕ್ಷ ಆಗ್ರಹಿಸಿದೆ.

ಹಾರೋಹಳ್ಳಿ ತಾಲೂಕು ಕಚೇರಿಗೆ ರಾಜ್ಯಾಧ್ಯಕ್ಷ ರವಿಕೃಷ್ಣಾ ರೆಡ್ಡಿ ನೇತೃತ್ವದ ತಂಡ ಭೇಟಿ ನೀಡಿ, ತಾಲೂಕು ಕಚೇರಿಗೆ ಮನವಿ ಸಲ್ಲಿಸಿದ ನಿಯೋಗ ಭೂಗಳ್ಳರ ವಿರುದ್ಧ ಶೀಘ್ರ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದೆ.

ಇದೇ ವೇಳೆ ಕೆ.ಆರ್.ಎಸ್ ರಾಜ್ಯಾಧ್ಯಕ್ಷ ರವಿ ಕೃಷ್ಣಾರೆಡ್ಡಿ ಮಾತನಾಡಿ, ಹಾರೋಹಳ್ಳಿ ಗ್ರಾಮದ ಸರ್ವೆ.ನಂ.478ರಲ್ಲಿ ನಕಲಿ ದಾಖಲೆ ಸೃಷ್ಟಿಸಿ ಜಮೀನು ಪರಭಾರೆ ನಡೆಸಿರುವ ಸಂಬಂಧ ಉನ್ನತ ಮಟ್ಟದ ತನಿಖೆಗಳು ನಡೆದಿದೆ.

ಹಾರೋಹಳ್ಳಿ ಗ್ರಾಮದ ಸರ್ವೆ.ನಂ478ರಲ್ಲಿ ನಕಲಿ ದಾಖಲೆ ಸೃಷ್ಟಿಸಿ ಪರಭಾರೆ ಮಾಡಿರುವುದರ ಸಂಬಂಧ ಇಲ್ಲಿನ ರೈತ ಸಂಘದ ಮುಖಂಡರು ಹೋರಾಟ ನಡೆಸಿ ಸರಕಾರಿ ಜಮೀನನ್ನು ರಕ್ಷಿಸುವ ಕೆಲಸ ಮಾಡಿದ್ದಾರೆ. ಈಗಾಗಲೇ ಅಧಿಕಾರಿಗಳು ಜಮೀನನ್ನು ರಕ್ಷಿಸುವ ಕೆಲಸಕ್ಕೂ ಮುಂದಾಗಿದ್ದಾರೆ. ಆದರೆ ತಪ್ಪಿತಸ್ಥರ ವಿರುದ್ಧ ಯಾವುದೇ ರೀತಿಯ ಕ್ರಮ ಆಗುತ್ತಿಲ್ಲ. ಕಂದಾಯ ಆಯುಕ್ತರು ಪ್ರಕರಣ ಸಂಬಂಧ 18ಮಂದಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಕಂದಾಯ ಸಚಿವರಿಗೆ ವರದಿ ನೀಡಿದ್ದಾರೆ. ಆದರೆ ಕಂದಾಯ ಸಚಿವರ ಕೈಯನ್ನು ಇಲ್ಲಿನ ಪ್ರಭಾವಿಯೊಬ್ಬರು ಕಟ್ಟಿ ಹಾಕಿದ್ದಾರೆ. ಅಧಿಕಾರಿಗಳು ಯಾರು ಏನು ಮಾಡುವರೆಂದು ಬೀಗುತ್ತಿದ್ದಾರೆ. ಇಂತಹ ಪ್ರಕರಣ ದಲ್ಲಿಯೂ ಸಹ ಭ್ರಷ್ಟರನ್ನು ರಕ್ಷಿಸಲು ಮುಂದಾಗಿರುವುದು ನಾಚಿಕೆಗೇಡಿನ ಸಂಗತಿ ಇನ್ನಾದರೂ ಸಂಬಂಧಪಟ್ಟವರು ಗಮನಹರಿಸಿ ತಪ್ಪಿತಸ್ಥರ ಮೇಲೆ ಬಿಗಿ ಕ್ರಮವಾಗುವಂತೆ ನೋಡಿಕೊಳ್ಳಬೇಕು ಎಂದರು.

ನೀರು ಸರಾಗ ಹರಿಯಲು ಚರಂಡಿ ದುರಸ್ತಿಪಡಿಸಿ

• **ಬೆಂಗಳೂರು:** ಸಿಲ್ಕ್ ಬೋರ್ಡ್‌ನಲ್ಲಿ ಮಳೆಗಾಲದಲ್ಲಿ ಜೋರು ಮಳೆ ಬಂದಾಗ ಉಂಟಾಗುವ ನೀರು ನಿಲ್ಲುವ ಸ್ಥಳಗಳಿಗೆ ಭೇಟಿ ನೀಡಿದ ಆಯುಕ್ತರು, ಅದಕ್ಕೆ ಕಾರಣವಾದ ತಾಂತ್ರಿಕ ಲೋಪಗಳನ್ನು ಶೀಘ್ರ ಪತ್ತೆ ಹಚ್ಚಿ ಮಳೆನೀರು ಸರಾಗವಾಗಿ ಹರಿದು ಹೋಗಲು ರಾಜಕಾಲುವೆ ಹಾಗೂ ಚರಂಡಿಗಳ ದುರಸ್ತಿಗೆ ತಕ್ಷಣದ ಕ್ರಮ ಕೈಗೊಳ್ಳಲು ಬೆಂಗಳೂರು ದಕ್ಷಿಣ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಸೂಚಿಸಿದರು. ಸಂಚಾರ ದಟ್ಟಣೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿ ಪರಿಶೀಲನೆ ನಡೆಸಿದ ವೇಳೆ ಮಾತನಾಡಿ, ಬನಶಂಕರಿ ಜಂಕ್ಷನ್‌ನಲ್ಲಿ ಪಾದಚಾರಿಗಳ ಸುರಕ್ಷತೆಗಾಗಿ ನಿರ್ಮಿಸಲು ಉದ್ದೇಶಿಸಿರುವ ವೃತ್ತಾಕಾರದ ಸ್ಕೈ ವಾಕ್ ನಿರ್ಮಾಣದ ಕಾಮಗಾರಿ ಪ್ರಾರಂಭದ ಹಂತದಲ್ಲಿ ಇದ್ದು, ಈ ಸಂಬಂಧ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಿದರು.

ಮಾದರ ಚನ್ನಯ್ಯ ಮಹಾಸಭಾ ಮುಖಂಡರ ಸ್ವಾಗತ: ಸಿಎಂಗೆ ಅಭಿನಂದನೆ

ಬಸವಣ್ಣರ ಸಾಮಾಜಿಕ ತತ್ವಕ್ಕೆ ಸಂದ ಜಯ

• **ದೊಡ್ಡಬಳ್ಳಾಪುರ:** ಸರ್ಕಾರ ಗ್ರೂಪ್ ಎ ಗೆ 5.25, ಗ್ರೂಪ್ ಬಿ ಗೆ 5.25 ಮತ್ತು ಗ್ರೂಪ್ ಸಿಗೆ 4.5 ಪ್ರಮಾಣದಲ್ಲಿ ಒಳಮೀಸಲಾತಿ ಅನುಷ್ಠಾನ ಮಾಡಿರುವುದನ್ನು ಮಾದಿಗ ಸಮುದಾಯ ಸ್ವಾಗತಿಸುತ್ತದೆಂದು ಮಾದರ ಮಹಾಸಭಾದ ಬೆಂಗಳೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಸುಬ್ಬರಾಜು ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 40ವರ್ಷದ ಹೋರಾಟಕ್ಕೆ ಇಂದು ನ್ಯಾಯ ಸಿಕ್ಕಿದೆ. ಸಾಮಾಜಿಕ ನ್ಯಾಯದ ದಿಕ್ಕಿನಲ್ಲಿ ಈ ತೀರ್ಮಾನ ಮಹತ್ವದ್ದಾಗಿದೆ. ಬಸವಣ್ಣ ಅವರ ಸಮಾನತೆ ತತ್ವವನ್ನು ಸರ್ಕಾರ ಕಾರ್ಯರೂಪಕ್ಕೆ ತಂದಿದೆಂದರು.

ಈ ಹೋರಾಟಕ್ಕೆ ಸಹಕರಿಸಿದ ರಾಜ್ಯ ಪ್ರಮುಖರು ಸಚಿವರಾದ ಕೆ.ಎಚ್.ಮುನಿಯಪ್ಪ , ಒಳಮೀಸಲಾತಿ ಜಾರಿಗೊಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸುತ್ತೇವೆಂದರು.

ಎಲ್ಲರೂ ಸಮಾನವಾಗಿ ಬದುಕಬೇಕು ಎಂಬ ಮುಖ್ಯಮಂತ್ರಿಗಳ ಬದ್ಧತೆ ಇಂದು ಕಾರ್ಯರೂಪಕ್ಕೆ ಬಂದಿದೆ. ಒಳಮೀಸಲಾತಿ ಜಾರಿ ಪ್ರಕ್ರಿಯೆಯಲ್ಲಿ ಕಾನೂನು ಸಚಿವರು, ಗೃಹ ಸಚಿವರು, ಹಾಗೂ ಮಹಾ ದೇವಪ್ಪ ಸೇರಿದಂತೆ ಹಲವು ಸಚಿವರು ಪ್ರಮುಖ ಪಾತ್ರ ವಹಿಸಿದ್ದಾರೆ. ಅಲ್ಲದೆ, ಚಿತ್ರದುರ್ಗದಲ್ಲಿ ನಡೆದ ಐತಿಹಾಸಿಕ ಸಮಾವೇಶದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಪಕ್ಷದ ನಾಯಕರು ತೆಗೆದುಕೊಂಡ ನಿರ್ಧಾರದಿಂದ ಇದು ಸಾಧ್ಯವಾಗಿದೆಂದರು.

ರಾಜ್ಯದ ನೂರೊಂದು ಹಿಂದುಳಿದ ಜಾತಿಗಳಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ರಾಜ್ಯ ಸರ್ಕಾರದ ಈ ನಿರ್ಧಾರವನ್ನು ಮಾದಿಗ ಸಮುದಾಯ ಸ್ವಾಗತಿಸುತ್ತದೆ ಎಂದು ಹೇಳಿದರು.

ಮಾದರ ಮಹಾಸಭಾ ತಾಲೂಕು ಅಧ್ಯಕ್ಷ ತಳಗವಾರ ನಾಗರಾಜ್ ಮಾತನಾಡಿ, ಒಳಮೀಸಲಾತಿ ಗೊಂದಲಕ್ಕೆ ರಾಜ್ಯ ಸರ್ಕಾರ ತೆರೆ ಎಳೆದಿದೆ. ರಾಜ್ಯ ಸರ್ಕಾರದ ನಿರ್ಧಾರವನ್ನು ಮಾದರ ಮಹಾಸಭಾ ಸ್ವಾಗತಿಸುತ್ತದೆ ಎಂದರು.

ಮುಖಂಡರಾದ ಬಿ.ಕೆ.ಶಿವಪ್ಪ, ನಾಗರಾಜು ಬಚ್ಚಹಳ್ಳಿ, ರಾಮಕೃಷ್ಣಪ್ಪ, ವೆಂಕಟೇಶ್, ಹನುಮಣ್ಣ, ಟಿ.ಡಿ .ಮುನಿಯಪ್ಪ, ಗಂಗರಾಜು ನರಸಿಂಹನಹಳ್ಳಿ, ಕೆ. ವಿ. ಮುನಿಯಪ್ಪ, ರಾಮು, ನರಸಪ್ಪ, ಮೈಲಾರಪ್ಪ, ತಳವಾರ ನಾಗರಾಜು, ಕೆ ನಾರಾಯಣಪ್ಪ, ಹರ್ಷ, ಕಾಂತರಾಜು, ಮುನಿಯಪ್ಪ, ಗಂಗರಾಜು ಸೇರಿದಂತೆ ಮತ್ತಿತ್ತರರಿದ್ದರು

ಅರಣ್ಯಾಧಿಕಾರಿಗಳಿಂದ ಜಿಂಕೆಯ ಕಳೇಬರ, ಬಂದೂಕು ವಶ

ನಾಗರಹೊಳೆಯಲ್ಲಿ ಜಿಂಕೆ ಬೇಟೆ: ಇಬ್ಬರ ಸೆರೆ

• **ಹುಣಸೂರು:** ನಾಗರಹೊಳೆ ಉದ್ಯಾನದಲ್ಲಿ ಜಿಂಕೆ ಬೇಟೆಯಾಡಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಅರಣ್ಯಾಧಿಕಾರಿಗಳು ಕೃತ್ಯಕ್ಕೆ ಬಳಸಿದ್ದ ಪರಿಕರಗಳನ್ನು ವಶಪಡಿಸಿಕೊಂಡಿರುವ ಘಟನೆ ವೀರನಹೊಸಳ್ಳಿ ವಲಯದಲ್ಲಿ ನಡೆದಿದೆ.



ತಾಲೂಕಿನ ಹನಗೋಡು ಹೋಬಳಿಯ ಶಿಂಡೇನಹಳ್ಳಿ ರವಿಕುಮಾರ್ ಆಲಿಯಾಸ್ ಅಮಾಸೆರವಿ ಹಾಗೂ ಬಿ.ಆರ್.ಕಾವಲ್‌ನ ರಾಜು ಆಲಿಯಾಸ್ ಗುಂಡ ಬಂಧಿತ ಆರೋಪಿಗಳು, ಶಿಂಡೇನಹಳ್ಳಿಯ ಸೀನೇಗೌಡರ ಪುತ್ರ ಸುನಿಲ್, ಮುದಗನೂರಿನ ಬಸವೇಗೌಡರ ಪುತ್ರ ಎಂ.ಬಿ.ಗಣೇಶ ಕತ್ತಲಿನಲ್ಲಿ ಪರಾರಿಯಾಗಿರುವ ಆರೋಪಿಗಳು,ಹೆಣ್ಣು ಜಿಂಕೆ ಶವ, ಬೇಟೆಗೆ ಬಳಸಿದ್ದ ಸಿಂಗಲ್ ಬ್ಯಾರಲ್ ಬಂದೂಕು, ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನ, ಮಚ್ಚು, ಐದು ಜೀವಂತ ಕಾಡತೂಸುಗಳು, ಬಳಕೆ ಮಾಡಿದ್ದ ಒಂದು ಕಾಡುತೂಸುಗಳನ್ನು ವಶಪಡಿಸಿ ಕೊಳ್ಳಲಾಗಿದೆ.

ಆರೋಪಿಗಳು ನಾಗರಹೊಳೆ ಉದ್ಯಾನದ ವೀರನಹೊಸಹಳ್ಳಿ ವನ್ಯಜೀವಿ ವಲಯಕ್ಕೆ ವನ್ಯಜೀವಿ ಭೇಟಿಯಾಡಲು ಬರುತ್ತಿರುವ ಬಗ್ಗೆ ಮಂಗಳವಾರ ಬೆಳಗಿನ ಜಾವ ಬಂದ ಖಚಿತ ಮಾಹಿತಿ ಮೇರೆಗೆ ನಾಗರಹೊಳೆ ಹುಲಿಯೋಜನೆ ನಿರ್ದೇಶಕಿ ಪಿ.ಎ.ಸೀಮಾ ಅವರ ಮಾರ್ಗದರ್ಶನದಲ್ಲಿ ಆರ್‌ಎಫ್‌ಓ. ವಿನೋದ್‌ಗೌಡ ನೇತೃತ್ವದ ತಂಡವು ಕಣ್ಗಾವಲಿದ್ದ ವೇಳೆ ಬೆಳಗಿನ ಜಾವ 4ರ ವೇಳೆಗೆ ಚಾಮಳ್ಳಿ ಶಾಖೆಯ ಎರೆಕಟ್ಟೆ ಗ್ರಾನಹೊಸಕಟ್ಟೆ ಕೆರೆ-ಎರೆಕಟ್ಟೆ ಬಳಿಯ ಜೀಪ್ ರಸ್ತೆಯ ತಿರುವಿನ ಬಳಿ ಗುಂಡಿನ ಶಬ್ದ ಕೇಳಿ ಬಂದ ಕಡೆ ಸಿಬ್ಬಂದಿ ಗಳು ದೌಡಾಯಿಸಿ ಸುತ್ತುವರಿಯುತ್ತಿದ್ದಂತೆ ಇಬ್ಬರು ಆರೋಪಿಗಳು ಸಿಕ್ಕಿ ಬಿದ್ದಿದ್ದಾರೆ. ಕತ್ತಲಿನಲ್ಲಿ ಮತ್ತಿಬ್ಬರು ಪರಾರಿಯಾಗಿದ್ದಾರೆ. ಅರಣ್ಯದಂಚಿನ ಗ್ರಾಮಸ್ಥರು ಉದ್ಯಾನದೊಳಗೆ ಅಕ್ರಮ ಪ್ರವೇಶ, ಇಂತಹ ಅಪರಾಧ ಕೃತ್ಯ ಗಳು ಕಂಡು ಬಂದಲ್ಲಿ ಇಲಾಖೆಗೆ ಮಾಹಿತಿ ನೀಡುವಂತೆ ಎಸಿಎಫ್ ಲಕ್ಷ್?ಮಕಾಂತ್ ಮನವಿ ಮಾಡಿದ್ದಾರೆ. ಸೋಮವಾರ ಒರ್ವನನ್ನು ಬಂಧಿಸಿದ್ದರು. ವಾರದ ಹಿಂದಷ್ಟೆ ಮತ್ತೊಂದು ಪ್ರಕರಣದಲ್ಲಿ ಇಬ್ಬರನ್ನು ಬಂಧಿಸಲಾಗಿದೆ. ಆರ್‌ಎಫ್ ಓ ವಿನೋದ್ ಗೌಡ, ಡಿಆರ್‌ಎಫ್‌ಓ. ನವೀನ್‌ಕುಮಾರ್, ಸಪನಾ ವಿ.ಪಾಟೀಲ್, ಕೆ.ಶಿಲ್ಪಾ, ಗಸ್ತು ಅರಣ್ಯಪಾಲಕರಾದ ವೆಂಕಟೇಶ್, ಶಮಂತ, ನಾರಾಯಣ, ಅವಿನಾಶ್, ಅರಣ್ಯ ವೀಕ್ಷಕರಾದ ಶಾಂತಕುಮಾರ್, ಶಿವಕುಮಾರ್, ಗಾಯತ್ರಿ ಭಾಗವಹಿಸಿದ್ದರು.

ಕಿರುಸುದ್ದಿ

ತಿಪಟೂರಿನಲ್ಲಿ ರೈಲು ನಿಲುಗಡೆ ಮುಂದುವರಿಕೆ

• **ಬೆಂಗಳೂರು:** ರೈಲು ಸಂಖ್ಯೆ 12079/12080 ಕೆಎಸ್ಆರ್ ಬೆಂಗಳೂರು -ಎಸ್ಎಸ್ಎಸ್ ಹುಬ್ಬಳ್ಳಿ-ಕೆಎಸ್ಆರ್ ಬೆಂಗಳೂರು ಜನಶತಾಬ್ದಿ ಎಕ್ಸ್‌ಪ್ರೆಸ್ ಮತ್ತು ರೈಲು ಸಂಖ್ಯೆ 12089/12090 ಕೆಎಸ್ಆರ್ ಬೆಂಗಳೂರು-ಶಿವಮೊಗ್ಗ ಟೌನ್-ಕೆಎಸ್ಆರ್ ಬೆಂಗಳೂರು ಜನಶತಾಬ್ದಿ ಎಕ್ಸ್‌ಪ್ರೆಸ್ ರೈಲುಗಳು ತಿಪಟೂರು ನಿಲ್ದಾಣದಲ್ಲಿ ನಿಲುಗಡೆ ನೀಡುವುದನ್ನು ಮುಂದುವರಿಸಲಿವೆ. ಈ ನಿಲುಗಡೆಯು ಮೇ 16 ರಿಂದ ಜಾರಿಗೆ ಬರಲಿದ್ದು, ಮುಂದಿನ ಆದೇಶದವರೆಗೆ ಪ್ರಸ್ತುತ ಇರುವ ಸಮಯದ ವೇಳಾಪಟ್ಟಿಯಂತೆಯೇ ರೈಲುಗಳು ನಿಲ್ದಾಣದಲ್ಲಿ ನಿಲ್ಲಲಿವೆ.



ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡುವ ಸಲುವಾಗಿ, ದಕ್ಷಿಣ ಮಧ್ಯ ರೈಲ್ವೆಯು ರೈಲು ಸಂಖ್ಯೆ 07043/07044 ಹೈದರಾಬಾದ್ -ಬೆಳಗಾವಿ-ಹೈದರಾಬಾದ್ ಸಾಪ್ತಾಹಿಕ ವಿಶೇಷ ರೈಲುಗಳ ಸೇವೆಯನ್ನು ಪ್ರತಿ ದಿಕ್ಕಿನಲ್ಲಿ ಒಂದು ಹೆಚ್ಚುವರಿ ಟ್ರಿಪ್‌ಗೆ ವಿಸ್ತರಿಸಿದೆ. ಇದರನ್ವಯ, ಈ ಮೊದಲು ಏ.30 ರವರೆಗೆ ಮಾತ್ರ ಸಂಚರಿಸಬೇಕಿದ್ದ ರೈಲು ಸಂಖ್ಯೆ 07043 ಹೈದರಾಬಾದ್-ಬೆಳಗಾವಿ ವಿಶೇಷ ರೈಲು ಈಗ ಮೇ 7 ರಂದು ಒಂದು ಹೆಚ್ಚುವರಿ ಸಂಚಾರ ನಡೆಸಲಿದೆ. ಅದೇ ರೀತಿ, ಈ ಮೊದಲು ಮೇ 1ಕ್ಕೆ ಕೊನೆಗೊಳ್ಳಬೇಕಿದ್ದ ರೈಲು ಸಂಖ್ಯೆ 07044 ಬೆಳಗಾವಿ-ಹೈದರಾಬಾದ್ ವಿಶೇಷ ರೈಲು ಈಗ ಮೇ 8, 2026ರಂದು ಒಂದು ಹೆಚ್ಚುವರಿ ಸಂಚಾರ ನಡೆಸಲಿದೆ.

ತೆರಿಗೆ ಪಾವತಿ ಮೇ 31ರವರೆಗೆ ವಿಸ್ತರಣೆ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಬರುವ ಐದು ನಗರ ಪಾಲಿಕೆ ವ್ಯಾಪ್ತಿಯಲ್ಲಿ ತೆರಿಗೆದಾರರಿಗೆ ಶೇ.5 ರಷ್ಟು ರಿಯಾಯಿತಿ ಪಡೆಯುವ ಅವಧಿಯನ್ನು ಮೇ 31ರವರೆಗೆ ವಿಸ್ತರಿಸಿರುವ ಬಗ್ಗೆ ನಗರಾಭಿವೃದ್ಧಿ ಇಲಾಖೆ ಸರ್ಕಾರದ ಕಾರ್ಯದರ್ಶಿ ಎ.ಕೆ.ಸಾಗರ್ ಎನ್.ಕೆ ಆದೇಶ ಹೊರಡಿಸಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿ ಮತ್ತು ಬೆಂಗಳೂರಿನ ಐದು ನಗರ ಪಾಲಿಕೆಗಳ ತೆರಿಗೆದಾರರ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೈದಿಗಳಿಗೆ ಕೌಶಲ ತರಬೇತಿ

• **ಬೆಂಗಳೂರು:** ಜೈಲು ಶಿಕ್ಷೆ ಅನುಭವಿಸುತ್ತಿರುವ ಕೈದಿಯನ್ನು ಸಮಾಜದ ಮುಖ್ಯವಾಹಿನಿಗೆ ತರುವ ಮತ್ತು ಅವರಲ್ಲಿ ವೃತ್ತಿ ಕೌಶಲ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ರಾಜ್ಯ ಕಾರಾಗೃಹ ಇಲಾಖೆ ನಗರದ ಆರ್.ವಿ.ಇಂಜಿನಿಯರಿಂಗ್ ಕಾಲೇಜಿನೊಂದಿಗೆ ಮಹತ್ವದ ಒಪ್ಪಂದ ಮಾಡಿಕೊಂಡಿದೆ.

ಈ ನೂತನ ಯೋಜನೆಯ ಕುರಿತು ಕಾರಾಗೃಹ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ಮಾಹಿತಿ ನೀಡಿ, ಸಾಮಾನ್ಯವಾಗಿ ಜೈಲಿನಲ್ಲಿ ಕೈದಿಗಳಿಗೆ ಕೇವಲ ದೈಹಿಕ ಶ್ರಮದ ಕೆಲಸವನ್ನು ನೀಡಲಾಗುತ್ತದೆ. ಆದರೆ, ಈ ಒಪ್ಪಂದದ ಮೂಲಕ ಕೈದಿಗಳಿಗೆ ಆಧುನಿಕ ಜಗತ್ತಿಗೆ ಪೂರಕವಾದ ಡಿಜಿಟಲ್ ಸಾಕ್ಷರತೆ ಮತ್ತು ತಂತ್ರಜ್ಞಾನ ಆಧಾರಿತ ತರಬೇತಿಯನ್ನು ನೀಡಲು ನಿರ್ಧರಿಸಲಾಗಿದೆ. ಶಿಕ್ಷೆಯ ಅವಧಿ ಮುಗಿದ ನಂತರ ಕೈದಿಗಳು ಗೌರವಯುತವಾಗಿ ಜೀವನ ನಡೆಸಲು ಈ ತರಬೇತಿ ಸಹಕಾರಿಯಾಗಲಿದೆ.

ಆರ್.ವಿ. ಇಂಜಿನಿಯರಿಂಗ್ ಕಾಲೇಜಿನ ಜತೆ ಒಪ್ಪಂದ

ಒಪ್ಪಂದಕ್ಕೆ ಸಹಿ: ಕಾರಾಗೃಹ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ಮತ್ತು ಆರ್. ವಿ. ಕಾಲೇಜಿನ ಪ್ರಾಚಾರ್ಯರಾದ ಡಾ. ಕೆ.ಎನ್. ಸುಬ್ರಹ್ಮಣ್ಯ ಅವರು ಅಧಿಕೃತವಾಗಿ ಒಪ್ಪಂದದ ಪತ್ರಕ್ಕೆ ಸಹಿ ಹಾಕಿದರು. ಎಂಸಿಎ ವಿಭಾಗದ ಪ್ರೊ. ಬಿ. ರೇಣುಕಾ ಪ್ರಸಾದ್, ಬಯೋ-ಟೆಕ್ನಾಲಜಿ ವಿಭಾಗದ ಪ್ರೊ. ಅಶ್ವಿನಿ ಶರ್ಮಾ, ಐಎಸ್ಇ ವಿಭಾಗದ ಪ್ರೊ. ಟಿ. ಪದ್ಮಶ್ರೀ ಮತ್ತು ಕಾರಾಗೃಹ ಇಲಾಖೆಯ ಎಐಜಿ ಪಿ.ವಿ. ಆನಂದ್ ರೆಡ್ಡಿ ಉಪಸ್ಥಿತರಿದ್ದರು.

ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಕಸದ ರಾಶಿ । ಕೊಳೆತ ವಾಸನೆಯಿಂದ ಪ್ರಯಾಣಿಕರಿಗೆ ಸಂಕಷ್ಟ

ತಿಪ್ಪೆಗುಂಡಿಯಂತಾದ ಹೆದ್ದಾರಿ-75

▸ **ತಾವರೆಕೆರೆಟಿ.ನಾಗರಾಜ್**

• **ತಾವರೆಕೆರೆ:** ಸುಡು ಬಿಸಿಲಿನ ತಾಪಕ್ಕೆ ಜನ ತತ್ತರಿಸಿ ಹೋಗಿದ್ದಾರೆ. ಈ ಬಿಸಿಲಿನಲ್ಲಿ ರಾಷ್ಟ್ರೀಯ ಹೆದ್ದಾರಿ ಇಕ್ಕೆಲಗಳಲ್ಲಿ ಸುರಿದಿರುವ ಕಸದ ರಾಶಿಯಿಂದ ಹೊರಹೊಮ್ಮುತ್ತಿರುವ ಕೊಳೆತ ವಾಸನೆಯಿಂದ ವಾಹನ, ದ್ವಿಚಕ್ರ ವಾಹನ ಚಾಲಕರು ಮೂಗು ಮುಚ್ಚಿಕೊಂಡು ವಾಹನ ಚಲಿಸುವಂತಾಗಿದೆ.

ಅದರಲ್ಲೂ ಹೊಸಕೋಟೆ ತಾಲೂಕಿಗೆ ಟನ್‌ಗಟ್ಟಲೆ ತ್ಯಾಜ್ಯವನ್ನು ಹಲಸಹಳ್ಳಿ ಗೇಟ್‌ನಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗಡಿ ಭಾಗವಾದ ರಾಮಸಂದ್ರಗೇಟಿನ ಬಳಿ ನೂರಾರು ಲಾರಿ ಲೋಡ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ -75ರ ಇಕ್ಕೆಲಗಳಲ್ಲಿ ಮನೆಯ ನಿರುಪಯುಕ್ತ ಹಾಗೂ ಕಸದ ರಾಶಿಯ ಜತೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಂಕೋ ಕಂಪನಿಯವರಿಗೆ ಸಂಬಂಧಿಸಿದ ರಾಷ್ಟ್ರೀಯ ಹೆದ್ದಾರಿ ಮಧ್ಯೆ ಇರುವ ಗಿಡ ಗೆಂಟೆಗಳು ಹುಲ್ಲು ಸ್ವಚ್ಛಗೊಳಿಸಿದ ನಂತರ ಇವರ ವಾಹನಗಳಲ್ಲೇ ಹೆದ್ದಾರಿಯಲ್ಲಿ ಸುರಿಯುವರು. ಇದನ್ನೆಲ್ಲಾ ಕಂಡ ಲಾರಿ ಮಾಲೀಕರು ರಾಜರೋಷವಾಗಿ ಅವರೂ ತಂದು ಸುರಿಯುತ್ತಿದ್ದಾರೆ.

ಆದರೆ, ಹಗಲಿನಲ್ಲೇ ರಾಷ್ಟ್ರೀಯ ಹೆದ್ದಾರಿ-75ರ ಎರಡರ ಬದಿಯಲ್ಲಿ ಅಲ್ಲಲ್ಲಿ ಟನ್‌ಗಟ್ಟಲೆ ಸುರಿದು ಹೋಗುತ್ತಿದ್ದಾರೆ. ಆದರೆ, ಪ್ರಾಂಕೋ ಅಧಿಕಾರಿಗಳು, ಸಿಬ್ಬಂದಿ ತಮಗೆ ಏನು ತಿಳಿಯದೆಂದು ಕಣ್ಮುಚ್ಚಿ ಕುಳಿತಿದ್ದಾರೆ. ಆದರೆ, ಪ್ರಾಂಕೋ ಅಧಿಕಾರಿಗಳ ಗಮನಕ್ಕೆ ಕಸ ಸುರಿಯುತ್ತಿರುವ ವಾಹನಗಳ ಸಮೇತ ಛಾಯಾಚಿತ್ರವನ್ನು ಅವರ ಗಮನಕ್ಕೆ ತಂದರೂ ಸಹ ತಮಗೇನು ಗೊತ್ತಿಲ್ಲದಂತಿದ್ದಾರೆ. ತ್ಯಾಜ್ಯವನ್ನು ವಿಲೇವಾರಿ ಮಾಡುವುದೇ ದೊಡ್ಡ ಸಮಸ್ಯೆಯಾಗಿದೆ. ನಗರ ಮಾತ್ರವಲ್ಲದೆ ಗ್ರಾಮೀಣ ಪ್ರದೇಶವನ್ನು ಸಹ ತ್ಯಾಜ್ಯ ಸಮಸ್ಯೆ ಕಾಡುತ್ತಿದೆ. ಬಿಬಿಎಂಪಿಯು ಸಹ ಇತ್ತೀಚೆಗೆ ನಗರದ ಹೊರ ವಲಯದಲ್ಲಿ ತ್ಯಾಜ್ಯವನ್ನು ಸುರಿಯುವ ಪರಿಪಾಠ ರೂಢಿಸಿಕೊಂಡಿದೆ. ಹಾಗಾಗಿ ಇಲ್ಲಿನ ರಸ್ತೆಯ ಬಳಿ ತ್ಯಾಜ್ಯದೊಡ್ಡ ಗೋದಾಮಿನಂತಾಗಿದೆ. ಇಲ್ಲಿನ ಜನ ನಿತ್ಯ ಸಂಕಷ್ಟ ಎದುರಿಸುವಂತಾಗಿದೆ.ಎರಡು ಕಡೆಯಲ್ಲಿನ ಕಾಲುವೆಗಳು ಈ ತ್ಯಾಜ್ಯದಿಂದ ಮುಚ್ಚಿ ಹೋಗಿವೆ. ಮಳೆ ಏನಾದರೂ ಬಂದರೆ ಮಳೆಯ ನೀರು ರಸ್ತೆಯಲ್ಲಿ ಹರಿದು ವಾಹನ ಸವಾರರಿಗೆ ಕಷ್ಟವಾಗಿದೆ. ಕಿಡಿಗೇಡಿಗಳು ತ್ಯಾಜ್ಯವನ್ನು ತಂದು ಸುರಿಯುತ್ತಿದ್ದಾರೆ. ಇದರಿಂದ ಸುತ್ತಮುತ್ತಲಿನ ಪರಿಸರ ದುರ್ನಾತ ಬೀರುತ್ತಿದೆ. ವಾಹನ ಸವಾರರು ಹಾಗೂ ಜನ ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ, ರೋಗ ರುಜಿನಗಳ ಭಯದಲ್ಲಿ ಬದುಕು ದೂಡುವಂತಾಗಿದೆ.



ದಿಗಂತ ವಿಶೇಷ

ಅನುಪಯುಕ್ತ ಟನ್‌ಗಟ್ಟಲೆ ತ್ಯಾಜ್ಯವನ್ನು ಅಲ್ಲಲ್ಲಿ ಸುರಿದು ಹೋಗುತ್ತಿದ್ದಾರೆ. ಇದು ಎನ್‌ಎಚ್- 75 ರಾಷ್ಟ್ರೀಯ ಹೆದ್ದಾರಿಯಾಗಿದೆ. ಸಾವಿರಾರು ವಾಹನಗಳು ಸಂಚರಿಸುವವು. ಇದರ ಜತೆಗೆ ನಾಲ್ಕೈದು ಇಲ್ಲಿ ಸಂಚರಿಸುವ ಪ್ರಯಾಣಿಕರು ರಸ್ತೆ ಯುದ್ದಕ್ಕೂ ಗಬ್ಬು ನಾರುತ್ತ ಬಿದ್ದಿರುವ ಕಸದ ವಾಸನೆಯಿಂದ ಬೇಸತ್ತು ಹೋಗಿದ್ದಾರೆ. ಅಧಿಕಾರಿಗಳು ರಸ್ತೆಯಲ್ಲಿ ಕಸ ಸುರಿಯುತ್ತಿದ್ದರು. ತಮಗೇನುಗೊತ್ತಿಲ್ಲವೆಂಬಂತೆ ಚಾಲಕರನ್ನು ತಡೆಯುವ ಗೋಜಿಗೆ ಹೋಗಿಲ್ಲ. ಇದರಿಂದ ರಾತ್ರೋರಾತ್ರಿ ಕಸದ ರಾಶಿಗಳು ಎಲ್ಲೆಂದರಲ್ಲಿ ಬಿದ್ದಿರುತ್ತದೆ. ಈ ರಸ್ತೆಯಲ್ಲಿ ಅನೇಕ ಜನಪ್ರತಿನಿಧಿಗಳು ಸಂಬಂಧಪಟ್ಟ ಅಧಿಕಾರಿಗಳು ಓಡಾಡುವರು.. ಇವರು ಸಹ ನೋಡಿ ನೋಡದಂತೆ ಸಂಚರಿಸುತ್ತಾರೆ. ಕಸ ಸುರಿಯುವುದರಿಂದ ಅನೇಕ ರೋಗ ರುಜಿನಗಳು ಬರುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಸಂಬಂಧಪಟ್ಟ ಪ್ರಾಂಕೋ ಇತ್ತಗಮನಕೊಟ್ಟು ಸ್ವಚ್ಛತೆ ಮಾಡಬೇಕೆಂದು ಪ್ರಯಾಣಿಕರು ಒತ್ತಾಯಿಸಿದ್ದಾರೆ.

ರಸ್ತೆ ತಡೆದು ಪ್ರತಿಭಟನೆ ಎಚ್ಚರಿಕೆ

ಈ ರಸ್ತೆ ಬದಿಯಲ್ಲಿ ಸುರಿಯುತ್ತಿರುವ ತ್ಯಾಜ್ಯದಿಂದ ಹೊರ ಬರುತ್ತಿರುವ ದುರ್ವಾಸನೆಯಿಂದ ಪಕ್ಕದ ತೋಟದ ರೈತರು ತೋಟದಲ್ಲಿ ಕೆಲಸ ಮಾಡಲು ಆಗುತ್ತಿಲ್ಲ. ಆದ್ದರಿಂದ ಸಂಬಂಧ ಪಟ್ಟ ಪ್ರಾಂಕೋ ಅಧಿಕಾರಿಗಳು ಸುಮ್ಮನೆ ಇರುವುದೆಂದರೆ ತ್ಯಾಜ್ಯದ ಮಾಲೀಕರಿಂದ ಕಮೀಷನ್ ತೆಗೆದುಕೊಳ್ಳುತ್ತಿದ್ದಾರೆ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡಿದೆ. ಆದ್ದರಿಂದ ತ್ಯಾಜ್ಯ ಹಾಕುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ರಸ್ತೆ ತಡೆ ಮಾಡಲಾಗುವುದು.

ಶೀಘ್ರದಲ್ಲೇ ಕ್ರಮ ಕೈಗೊಳ್ಳಲಾಗುವುದು

ರಾಮೇಗೌಡಗೊಟ್ಟಿಪುರ ಕಸ ವಿಲೇವಾರಿದಾರರು ರಾತ್ರಿ ವೇಳೆ ತ್ಯಾಜ್ಯ ಸುರಿಯುತ್ತಿರುವ ಬಗ್ಗೆ ದೂರುಗಳು ಬಂದಿವೆ. ಆದರೆ. ಇತ್ತೀಚಿನ ದಿನದಲ್ಲಿ ಹಗಲಿನ ವೇಳೆ ಲಾರಿಗಳಲ್ಲಿ ತಂದು ತ್ಯಾಜ್ಯ ಸುರಿದು ಹೋಗುತ್ತಿರುವುದು ನನ್ನ ಗಮನಕ್ಕೆ ಬಂದಿಲ್ಲ. ಇದರ ಬಗ್ಗೆ ಪರಿಶೀಲಿಸಿ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಇದರ ಸಿಬ್ಬಂದಿಗೆ ತಿಳುವಳಿಕೆ ನೀಡಲಾಗುವುದು ಪ್ರಾಂಕೋ ಅಧಿಕಾರಿ ಮುದ್ದು ಶ್ರೀ ಮುದ್ದು ಹೇಳುವರು.

ಪೌರಕಾರ್ಮಿಕರಿಗೆ ಎಚ್‌ಎಪಿ ದಂಪತಿಗೆ ಸನ್ಮಾನ

ವೃತ್ತಿ ಅಸ್ಪೃಶ್ಯತೆಯನ್ನು ಕೊನೆಗಾಣಿಸಿ



• **ಕೋಲಾರ:** ಸಮಾಜದಲ್ಲಿ ವೃತ್ತಿ ಕಾರಣಕ್ಕಾಗಿ ಇರುವ ಅಸ್ಪೃಶ್ಯತೆಯನ್ನು ಕರುಣೆಯಿಂದ ಕೊನೆಗಾಣಿಸಬೇಕೆಂದು ಸಾಹಿತಿ. ಸ.ರಘುನಾಥ್ ಹೇಳಿದರು.

ನಗರದ ನಿವೃತ್ತ ಅರಣ್ಯಾಧಿಕಾರಿ ಎಚ್.ಎ.ಪುರುಷೋತ್ತಮ್ ರಾವ್ ಹಾಗೂ ಶಾಲಾ ಶಿಕ್ಷಣ ಇಲಾಖೆಯ ನಿವೃತ್ತ ಅಧಿಕಾರಿ ಧನಲಕ್ಷ್ಮಿ ಅವರ ನಿವಾಸದಲ್ಲಿ ಗುರುವಾರ ಕಾರ್ಮಿಕ ದಿನಾಚರಣೆ ಮುನ್ನಾದಿನ ಪೌರ ಕಾರ್ಮಿಕರಿಗೆ ಸನ್ಮಾನಿಸಿ ಆಹಾರ ಕಿಟ್‌ಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಪೌರ ಕಾರ್ಮಿಕರಿಗೆ ಸರಿಯಾದ ಹಕ್ಕುಗಳನ್ನು ವೇತನ ಸೌಲಭ್ಯಗಳನ್ನು ಕಲ್ಪಿಸದಂತ ವ್ಯವಸ್ಥೆಯಲ್ಲಿರುವಾಗ ಎಚ್‌ಎಪಿ ದಂಪತಿ ಹಾ ಕರುಣೆ ನೀಡಿ ಐವರು ಪೌರ ಕಾರ್ಮಿಕರನ್ನು ಮನೆಗೆ ಆಹ್ವಾನಿಸಿ ಗೌರವಿಸಿ ಸತ್ಕರಿಸುವುದು ಶ್ಲಾಘನೀಯ ಕಾರ್ಯಕ್ರಮವಾಗಿದೆ ಎಂದರು.

ಜನವಾದಿ ಮಹಿಳಾ ಸಂಘಟನೆ ಮುಖಂಡರಾದ ವಿ.ಗೀತಾ ಮಾತನಾಡಿ, ಪೌರಕಾರ್ಮಿಕರು ಸೇರಿದಂತೆ ಯಾವುದೇ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಧ್ವನಿ ಎತ್ತದಂತ ವಾತಾವರಣ ದೇಶದಲ್ಲಿ ನಿರ್ಮಾಣವಾಗಿದೆ. ಸ್ವಚ್ಛತಾ ಕಾರ್ಮಿಕರು ಸೇರಿದಂತೆ ತಳವರ್ಗದ ಜನರನ್ನು ಸಮಾನವಾಗಿ ಗೌರವಯುತವಾಗಿ ನಡೆಸಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಬೇಕಿದೆ ಎಂದರು. ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ಕೆ.ಎಸ್.ಗಣೇಶ್ ಮಾತನಾಡಿ, ಪೌರ ಕಾರ್ಮಿಕರು ಸೇರಿದಂತೆ ಎಲ್ಲಾ ವರ್ಗದ ಕಾರ್ಮಿಕರ ಹಕ್ಕುಗಳು ಮೊಟಕುಗೊಳ್ಳುತ್ತಿರುವ ದಿನಗಳಲ್ಲಿ, ಎಚ್.ಎ.ಪಿ ದಂಪತಿ ಸಮಾಜದ ಸ್ವಚ್ಛತೆ ಕಾಪಾಡುವ ಕಾರ್ಮಿಕರನ್ನು ನಡು ಮನೆಗೆ ಆಹ್ವಾನಿಸಿ ಗೌರವಿಸಿ, ಆಹಾರ ಕಿಟ್ ವಸ್ತ್ರ ನೀಡುತ್ತಿರುವುದು ಮನಸ್ಸಿನಲ್ಲಿರುವ ಮಾಲಿನ್ಯವನ್ನು ತಡೆಯುವ ಸಂದೇಶ ಸಾರುವಂತದ್ದಾಗಿದೆ ಎಂದರು. ಎಚ್.ಎ.ಪುರುಷೋತ್ತಮರಾವ್ ಮಾತನಾಡಿ, ಕಾರ್ಮಿಕ ದಿನಾಚರಣೆಯ ಸಂದರ್ಭದಲ್ಲಿ ತಮ್ಮ ವಾರ್ಡಿನ ಪೌರ ಕಾರ್ಮಿಕರನ್ನು ಆಹ್ವಾನಿಸಿ ಗೌರವಿಸುವ ಸಂಪ್ರದಾಯವನ್ನು ಮೂರು ವರ್ಷಗಳಿಂದಲೂ ಆಚರಿಸಿಕೊಂಡು ಬರುತ್ತಿದ್ದೇವೆ. ಪೌರ ಕಾರ್ಮಿಕರನ್ನು ಕೇವಲ ಸ್ವಚ್ಛತಾ ಕಾರ್ಮಿಕರನ್ನಾಗಿ ಮಾತ್ರವೇ ನೋಡದೆ ಅವರು ಪರಿಸರ ವಾದಿಗಳೆಂಬ ದೃಷ್ಟಿಯಿಂದಲೂ ಕಾಣಬೇಕಿದೆ ಎಂದರು.

ಪೌರ ಕಾರ್ಮಿಕರಾದ ಶಿವಮ್ಮ, ರತ್ನಮ್ಮ, ರಂಜಿತ್ ಕುಮಾರ್, ಶ್ರೀನಿವಾಸ್ ಹಾಗೂ ವಿಕಾಸ್ ಅವರಿಗೆ ಎಚ್‌ಎಪಿ ದಂಪತಿ ಆಹಾರ ಕಿಟ್‌ಗಳನ್ನು ನೀಡುವ ಮೂಲಕ ಸನ್ಮಾನಿಸಿದರು. ಚಿನ್ಮಯ ಸಂಸ್ಥೆಯ ಚಂದ್ರಪ್ರಕಾಶ್ ಇತರರು ಹಾಜರಿದ್ದರು.

ಇಂದು ಹೂವಿನಕರಗ, ಅಗ್ನಿಕುಂಡ ಪ್ರವೇಶ

• **ಕೋಲಾರ:** ಹೂವಿನ ಕರಗ ಮಹೋತ್ಸವ ಮೇ1 ರ ಶುಕ್ರವಾರ ರಾತ್ರಿ 8 ಗಂಟೆಗೆ ನಡೆಯಲಿದೆ. ಮೇ 2ರ ಮಧ್ಯಾಹ್ನ ಅಗ್ನಿಕುಂಡ ಪ್ರವೇಶ ನಡೆಯಲಿದೆ. ಹಸಿ ಕರಗ ಮಹೋತ್ಸವದಲ್ಲಿ ಅರ್ಚಕ ಸುರೇಶಾಚಾರ್ಯ ಪೂಜೆ ನಡೆಸಿಕೊಟ್ಟಿದ್ದಾರೆ. ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ಕೆ.ಜಯದೇವ್, ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ಕೆ.ಎಸ್.ಗಣೇಶ್, ಮಾರ್ಕಂಡಪ್ಪ, ಗೋಪಿ,ಮೂರ್ತಿ, ಸಂತೋಷ್, ದೇವಾಲಯ ಸಮಿತಿ ಉಪಾಧ್ಯಕ್ಷ ಚಂದ್ರಪ್ರಕಾಶ್, ದೇವಾಲಯ ಸಮಿತಿ ಖಜಾಂಚಿ ಕೆ.ಎಸ್.ಮಂಜುನಾಥ್, ಕರಗದ ಪೂಜಾರಿ ಬಿ.ವಿ.ಮಂಜುನಾಥ್, ಸಂತೋಷ್, ಆರ್ಮುಗಂ, ಉಪಕಾರ್ಯದರ್ಶಿ ವಿ.ಸುರೇಶ್, ಟಿ.ಸಂಪತ್ ಕುಮಾರ್,ಎ.ಮಹೇಶ್, ಮೇಸ್ತ್ರಿ ಕೃಷ್ಣಪ್ಪ, ಗೋವಿಂದರಾಜು, ಸಿ.ಶ್ರೀನಿವಾಸ್, ವೆಂಕಟೇಶಪ್ಪ, ಮುತ್ತಪ್ಪ, ಗಣೇಶ್ ಹಾಗೂ ರೇಣುಕಾ ಯಲ್ಲಮ್ಮ ಮಿತ್ರಬಳಗದ ಪದಾಧಿಕಾರಿಗಳು ಭಾಗವಹಿಸಿದ್ದರು.



ಇಂದು ರೇಣುಕಾ ಎಲ್ಲಮ್ಮ ಹೂವಿನ ಕರಗ

• **ಕೋಲಾರ:** ನಗರದ ಪಿ.ಸಿ. ಬಡಾವಣೆಯ ರೇಣುಕಾ ಎಲ್ಲಮ್ಮ ದೇವಿಯ ಹಸಿ ಕರಗ ಮಹೋತ್ಸವ ಶನಿವಾರ ರಾತ್ರಿ ವೈಭವದಿಂದ ನಡೆದಿದೆ. ಮೂವರು ಕರಗವನ್ನು ತಟ್ಟೆಯೊಂದರಲ್ಲಿ ಇಟ್ಟು ಕೈಯಲ್ಲೇ ಕುಣಿಸುವುದರ ವಿಶಿಷ್ಟತೆ ಎಲ್ಲರ ಮನಸೂರೆ ಗೊಂಡಿತು. ರೇಣುಕಾ ಎಲ್ಲಮ್ಮದೇವಾಲಯ ಸೇವಾ ಸಮಿತಿ ಅಧ್ಯಕ್ಷ ಕೆ.ಗಣೇಶ್ ನೇತೃತ್ವದಲ್ಲಿ ರಾತ್ರಿ 9ಗಂಟೆ ವೇಳೆಗೆ ನಗರದ ಟೇಕಲ್ ರಸ್ತೆಯ ಗೋಪಾಲಗೌಡರ ನಿವಾಸದ ಆವರಣದಲ್ಲಿ ಗಂಗಾಪೂಜೆ ಮುಗಿಸಿದ ನಂತರ ಹಸಿ ಕರಗವನ್ನು ಕರಗದ ಪೂಜಾರಿ ಬಿ.ವಿ.ಮಂಜುನಾಥ್, ಸಂತೋಷ್,ಕಿರಣ್ ಜತೆಗೂಡಿ, ಕೈಯಲ್ಲೇ ಹೊತ್ತು ತರುತ್ತಿದ್ದಂತೆ ವೀರಕುಮಾರರು ಗೋವಿಂದ ನಾಮ ಸ್ಮರಣೆ ಮಾಡಿದರು. ಹಸಿ ಕರಗವನ್ನು ಕರಗದ ಪೂಜಾರಿ ಮಂಜುನಾಥ್ , ಮೊದಲು ಗೋಪಾಲಗೌಡರ ಕುಟುಂಬದಿಂದ ಪೂಜೆ ಸಲ್ಲಿಸಿದ ನಂತರ ನೇರವಾಗಿ ನಗರದ ಚೌಡೇಶ್ವರಿ ಬಡಾವಣೆಯ ಚೌಡೇಶ್ವರಿ ದೇವಾಲಯಕ್ಕೆ ಕರಗ ಆಗಮಿಸಿತು. ಮೂವರ ನೃತ್ಯ ಗಮನ ಸೆಳೆಯಿತು. ಕೋದಂಡರಾಮಸ್ವಾಮಿ ದೇವಾಲಯಕ್ಕೆ ಹಾಗೂ ಹಾರೋಹಳ್ಳಿ ಆಂಜನೇಯಸ್ವಾಮಿ ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸಲಾಯಿತು.

ವಿದ್ಯಾರ್ಥಿಗಳ ಕ್ರಿಯಾಶೀಲತೆಗೆ ಪ್ರೋತ್ಸಾಹ

• **ಬೆಂಗಳೂರು:** ವಿದ್ಯಾರ್ಥಿಗಳ ಕ್ರಿಯಾಶೀಲತೆಗೆ ಈ ವೇದಿಕೆ ಸಾಕ್ಷಿಯಾಗಿದೆ. ತುಂಬಾ ಅದ್ಭುತ ಎನ್ನುವಂತಹ ರೀತಿ ವಸ್ತ್ರ ವಿನ್ಯಾಸವನ್ನು ರೂಪಿಸಿದ್ದಾರೆ ಎಂದು ಕಿರುತೆರೆ ನಟಿ ರಮೋಲ ತಿಳಿಸಿದರು.

ಅಂತಾರಾಷ್ಟ್ರೀಯ ಡಿಸೈನ್ ದಿನ 2026ರ ಅಂಗವಾಗಿ ಲೀಸಾ ಸ್ಕೂಲ್ ಆಫ್ ಡಿಸೈನ್ ಆಯೋಜಿಸಿದ್ದ ಓಪನ್ ಡೇ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಲಿಕೆಯ ಹಂತದಲ್ಲಿಯೇ ವಿದ್ಯಾರ್ಥಿಗಳಲ್ಲಿರುವ ವೃತ್ತಿಪರ ಕೌಶಲವನ್ನು ಕಾಣಬಹುದಾಗಿದೆ. ಪ್ರತಿ ಯೊಂದರಲ್ಲೂ ತುಂಬಾ ಡಿಟೇಲಿಂಗ್ ಇರುವುದು ವಿಶೇಷ ಎಂದರು. ನಟ ರಿತ್ವಿಕ್ ಕೃಪಾಕರ್ ಮಾತನಾಡಿ, ಈ ವಸ್ತ್ರವಿನ್ಯಾಸಗಳನ್ನು ನೋಡುತ್ತಿದ್ದರೆ ವಿದ್ಯಾರ್ಥಿಗಳು ಈಗಲೇ ಇಂಡಸ್ಟ್ರಿ ಸ್ಟ್ಯಾಂಡರ್ಡ್ ಅರ್ಥ ಮಾಡಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಈ ಡಿಸೈನ್ ಸ್ಕೂಲ್ ಕೌಶಲವುಳ್ಳ ವಿದ್ಯಾರ್ಥಿಗಳನ್ನ ಇಲ್ಲಿ ತಯಾರು ಮಾಡುತ್ತಾರೆ ಎಂಬುದು ಈ ವಿನ್ಯಾಸಗಳನ್ನು ನೋಡಿದರೆ ಮನವರಿಕೆ ಆಗುತ್ತದೆ ಎಂದು ತಿಳಿಸಿದರು. ಇದೇ ವೇಳೆ ವಿದ್ಯಾರ್ಥಿಗಳಿಂದ ತಯಾರಿಸಲಾದ ವಿಭಿನ್ನ ಹಾಗೂ ಆಕರ್ಷಕ ಸೃಷ್ಟಿಗಳು ಪ್ರದರ್ಶನದ ಪ್ರಮುಖ ಆಕರ್ಷಣೆಯಾಗಿದ್ದವು. ವರ್ಚುವಲ್ ರಿಯಾಲಿಟಿ ಅನುಭವಗಳು, 2ಡಿ ಮತ್ತು 3ಡಿ ತಂತ್ರಗಳ ಸಂಯೋಜನೆಯ ಹೈಬ್ರಿಡ್ ಅನಿಮೇಷನ್, ಫ್ಯಾಷನ್ ಉಡುಪು, ಕಲಾತ್ಮಕ ಜಿವೆಲ್ಲರಿ ರೂಪ, ನವೀನ ಟೈಲ್ ವಿನ್ಯಾಸಗಳು, ಕಾರ್ಪೊರೇಟ್ ವಸ್ತು ಪ್ರಯೋಗ ಹಾಗೂ ಗ್ರಾಫಿಕ್ ಸ್ಟೋರಿಟೆಲಿಂಗ್ ಪ್ರಾಜೆಕ್ಟ್‌ಗಳು, ಆತ್ಮಾಕರ್ಷಕ ಫೋಟೋಗ್ರಫಿ ವಿಶೇಷ ಗಮನ ಸೆಳೆದವು.



ಕಾರ್ಯಕ್ರಮದಲ್ಲಿ ಲೀಸಾ ಸ್ಕೂಲ್ ಆಫ್ ಡಿಸೈನ್‌ನ ನಿರ್ದೇಶಕ ಗಿರೀಶ್ ಕೇಸ್ವಾನಿ, ಗ್ರಾಫಿಕ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಸುಧೀಂದ್ರ ಸೇರಿದಂತೆ ಇತರರಿದ್ದರು.

ಎಪಿಎಂಸಿ ಸ್ಥಾಪನೆಗೆ ಕಾನೂನು ತೊಡಕಿಗೆ ತೆರೆ

• **ಬೆಂಗಳೂರು:** ರೈತರು, ವ್ಯಾಪಾರಿಗಳು ಹಾಗೂ ಸಾರ್ವಜನಿಕರಿಗೆ ಅತ್ಯಾಧುನಿಕ ಸೌಲಭ್ಯ ಒದಗಿಸುವ ಉದ್ದೇಶದ ಮಹತ್ವಾಕಾಂಕ್ಷಿ ಮೆಗಾ ಕೃಷಿ ಮಾರುಕಟ್ಟೆ ಸ್ಥಾಪನೆಗೆ ಎದುರಾಗಿದ್ದ ಕಾನೂನು ಸಂಘರ್ಷಕ್ಕೆ ತೆರೆ ಬಿದ್ದಿದೆ. ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪರವಾಗಿ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡುವ ಮೂಲಕ ಯೋಜನೆಯ ಹಾದಿ ಸುಗಮಗೊಂಡಿದೆ. ಬೆಂಗಳೂರು ಉತ್ತರ ತಾಲೂಕಿನ ಮಾಗಡಿ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಶ್ರೀಗಂಧದ ಕಾವಲ್ ಮತ್ತು ಹೇರೋಹಳ್ಳಿ ಗ್ರಾಮಗಳ ಸುಮಾರು 272.33 ಎಕರೆ ಪ್ರದೇಶವನ್ನು ಮೆಗಾ ಮಾರುಕಟ್ಟೆಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಈ ಜಮೀನು ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್‌ಗೆ ಸೇರಿದ್ದಾಗಿದ್ದು, ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿ ಟ್ರಸ್ಟ್ ಹೈಕೋರ್ಟ್ ಮೆಟ್ಟಿಲೇರಿತ್ತು. ವಿವಿಧ ಹಂತದಲ್ಲಿ ವಿಚಾರಣೆ ನಡೆದು, ಹಲವು ತೀರ್ಪುಗಳು ಬಂದಿದ್ದವು. ಹೈಕೋರ್ಟ್‌ನ ಏಕಸದಸ್ಯ ಪೀಠ ಮತ್ತು ಬಳಿಕ ದ್ವಿಸದಸ್ಯ ಪೀಠವು ಭೂಸ್ವಾಧೀನವು ನಿಯಮಬದ್ಧವಾಗಿದೆ ಎಂದು ಎಪಿಎಂಸಿ ಪರವಾಗಿ ತೀರ್ಪು ನೀಡಿತ್ತು.ಈ ತೀರ್ಪನ್ನು ಪ್ರಶ್ನಿಸಿ ಟ್ರಸ್ಟ್ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿಯನ್ನು ಸಲ್ಲಿಸಿತ್ತು. ಈಗ ಅಂತಿಮವಾಗಿ ಸುಪ್ರೀಂ ಕೋರ್ಟ್ ಟ್ರಸ್ಟ್‌ನ ಮೇಲ್ಮನವಿಯನ್ನು ವಜಾಗೊಳಿಸಿ, ಹೈಕೋರ್ಟ್ ಆದೇಶ ವನ್ನು ಎತ್ತಿಹಿಡಿದಿದೆ.ಆದ್ದರಿಂದ ಮೆಗಾ ಕೃಷಿ ಮಾರುಕಟ್ಟೆ ಸ್ಥಾಪನೆಗೆ ಸುಗಮವಾಗಿದೆ. ಈ ಐತಿಹಾಸಿಕ ಜಯಕ್ಕೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಅವರ ನಿರಂತರ ಪ್ರೋತ್ಸಾಹ ಮತ್ತು ಮಾರ್ಗದರ್ಶನ ಕಾರಣ ಎಂದು ಎಪಿಎಂಸಿ ಕಾರ್ಯದರ್ಶಿ ಕೆ.ಸಿ. ದೊರೆಸ್ವಾಮಿ ಕೃತಜ್ಞತೆ ಸಲ್ಲಿಸಿದ್ದಾರೆ. ಈ ತೀರ್ಪಿನಿಂದಾಗಿ ಬೆಂಗಳೂರಿನಲ್ಲಿ ಅತಿ ದೊಡ್ಡ ಕೃಷಿ ಮಾರುಕಟ್ಟೆ ಸಂಕೀರ್ಣ ತಲೆ ಎತ್ತಲು ಇದ್ದ ಎಲ್ಲ ಅಡೆತಡೆಗಳು ನಿವಾರಣೆಯಾದಂತಾಗಿದೆ ಎಂದು ತಿಳಿಸಿದ್ದಾರೆ.

ನಿವೃತ್ತರಾದ ಸಾರಿಗೆ ಸಂಸ್ಥೆ ಅಧಿಕಾರಿಗಳಿಗೆ ಬೀಳ್ಕೊಡುಗೆ

ಪ್ರಾಮಾಣಿಕ ಸೇವೆ ಸ್ಮರಿಸಲಿದೆ ಸಮಾಜ

• **ಕೋಲಾರ:** ಅಂಬೇಡ್ಕರ್ ನೀಡಿದ ಸಂವಿಧಾನದ ಆಶಯದಂತೆ ಹಕ್ಕು ಕೇಳುವ ಜತೆಗೆ ತಮ್ಮ ಕರ್ತವ್ಯವನ್ನು ಪ್ರಾಮಾಣಿಕತೆಯಿಂದ ನಿರ್ವಹಿಸಿದರೆ ಯಾವುದೇ ಸಂಸ್ಥೆ ಉನ್ನತ ಸ್ಥಾನಕ್ಕೇರಲು ಸಹಕಾರಿಯಾಗುತ್ತದೆ ಎಂದು ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಾಥ್ ಹೇಳಿದರು.

ನಗರದ ಸಾರಿಗೆ ಸಂಸ್ಥೆ ಡಿಪೋ ಆವರಣದಲ್ಲಿ ಗುರುವಾರ ಆಯೋಜಿಸಲಾಗಿದ್ದ ಸಾರಿಗೆ ಸಂಸ್ಥೆಯಲ್ಲಿ ನಿವೃತ್ತರಾಗುತ್ತಿರುವ ನಿಲ್ದಾಣ ಅಧಿಕಾರಿ ಕೆ.ವಿ.ಶಿವಕುಮಾರ್, ಸಹಾಯಕ ಸಂಚಾರ ನಿರೀಕ್ಷಕ ಕೆ.ಜಿ.ಗೋವಿಂದಪ್ಪ, ಚಾಲಕರಾದ ಕೆ.ನಾಗರಾಜ್ ಹಾಗೂ ಎಲ್.ಶ್ರೀನಿವಾಸಮೂರ್ತಿ ಅವರನ್ನು ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿ, ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಸಮಾನವಾದ ಗೌರವವಿದೆ. ಪ್ರತಿಯೊಬ್ಬರ ಸೇವೆಯೂ ಸಂಸ್ಥೆಯ ಅಭಿವೃದ್ಧಿಗೆ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಸಂಸ್ಥೆಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ನೌಕರರು ತಮ್ಮ ಹಕ್ಕು ಜವಾಬ್ದಾರಿ ಅರಿತು ಸೇವೆ ಸಲ್ಲಿಸಬೇಕೆಂದರು.

ಕೆ.ವಿ.ಶಿವಕುಮಾರ್ ಸೇರಿದಂತೆ ನಾಲ್ವರು ಅಧಿಕಾರಿಗಳು 37 ವರ್ಷಕ್ಕೂ ಮೇಲ್ಪಟ್ಟು ಸಾರಿಗೆ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗುತ್ತಿದ್ದಾರೆ.



ಇವರ ನಿವೃತ್ತಿ ಜೀವನ ಕುಟುಂಬದ ಸದಸ್ಯರೊಂದಿಗೆ ಸುಖಮಯವಾಗಿರಲಿ ಎಂದು ಆಶಿಸಿದರು. ಸಾರಿಗೆ ಸಂಸ್ಥೆ ರಾಜ್ಯ ನೌಕರರ ಸಂಘದ ಗೌರವಾಧ್ಯಕ್ಷ ಬಗುಮಯ್ಯ ಮಾತನಾಡಿ, ಸಾರಿಗೆ ಸಂಸ್ಥೆಯ ನೌಕರರು ಸುದೀರ್ಘವಾದ ಸೇವೆ ಸಲ್ಲಿಸಿದರೂ ಸಂತೋಷದಿಂದ ನಿವೃತ್ತರಾಗುವಂತ ಪರಿಸ್ಥಿತಿ ಇಲ್ಲವಾಗಿದೆ. ಆದರೂ, ಕುಂದುಕೊರತೆಗಳ ನಡುವೆಯೂ ನೌಕರರು ಸಂತಸದಿಂದ ನಿವೃತ್ತರಾಗುವಂತ ವಾತಾವರಣ ನಿರ್ಮಾಣ ಮಾಡಿರುವ ಅಧಿಕಾರಿಗಳಿಗೆ ಧನ್ಯವಾದ ಎಂದು ಶ್ಲಾಘಿಸಿ, ಅಂಬೇಡ್ಕರ್ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಅವಕಾಶ ಕಲ್ಪಿಸಿದ್ದ ಅಧಿಕಾರಿಗಳನ್ನು ಸನ್ಮಾನಿಸಿದರು.

ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ಕೆ.ಎಸ್.ಗಣೇಶ್ ಮಾತನಾಡಿ, ಸುದೀರ್ಘ ಅವಧಿಗೆ ಸೇವೆ ಸಲ್ಲಿಸಿ ನಿವೃತ್ತರಾಗುತ್ತಿರುವ ಕೆ.ವಿ.ಶಿವಕುಮಾರ್ ಸಾರಿಗೆ ಸಂಸ್ಥೆಯ ನೌಕರ, ಅಧಿಕಾರಿಯಾಗಿ, ನೌಕರರ ಮುಖಂಡರಾಗಿ ಮಾತ್ರವಲ್ಲದೆ ಪತ್ರಕರ್ತರು ಹಾಗೂ ಸಾರಿಗೆ ಸಂಸ್ಥೆಯ ಸೇತುವೆಯಾಗಿಯೂ ಕಾರ್ಯನಿರ್ವಹಿಸುತ್ತಿದ್ದರು ಎಂದು ಶುಭ ಕೋರಿದರು.

ಆರೋಹಣ-2026ರ ವಾರ್ಷಿಕ ಸಂಭ್ರಮ

ಗುಣಮಟ್ಟದ ಶಿಕ್ಷಣ ಸಾಧನೆಗೆ ಪೂರಕ

• **ಕೆಂಗೇರಿ:** ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯುವುದರ ಜತೆಗೆ ಭೌತಿಕ ಮತ್ತು ಸೃಜನಶೀಲತೆಯೊಂದಿಗೆ ತಮ್ಮ ಗುರಿಯನ್ನು ತಲುಪಬೇಕು ಎಂದು ಚಿತ್ರ ನಟಿ ರಾಗಿಣಿ ಕರೆ ನೀಡಿದರು.

ಮೈಸೂರು -ಬೆಂಗಳೂರು ಮುಖ್ಯ ರಸ್ತೆಯಲ್ಲಿರುವ ಡಾ. ಎಐಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್ ವತಿಯಿಂದ ಆರ್ ಆರ್ ಎಂಸಿಎಚ್ ನ ಎಐಎಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಿದ್ದ ಆರೋಹಣ-2026 ವಾರ್ಷಿಕ ಸಂಭ್ರಮ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಗಳನ್ನು ಹೊರತರುವ ಮೂಲಕ ಮಕ್ಕಳಲ್ಲಿನ ಸೃಜನಶೀಲತೆ ಮತ್ತು ಅವರ ಭೌತಿಕ ಮಟ್ಟವನ್ನು ಹೆಚ್ಚಿಸಲು ಕಾಲೇಜಿನಲ್ಲಿ ಇಂತಹ ವೇದಿಕೆಯನ್ನು ಕಲ್ಪಿಸಿಕೊಟ್ಟರೆ ವಿದ್ಯಾರ್ಥಿಗಳು ಅವರ ಕಲ್ಪನಾಶಕ್ತಿಗೆ ಮೀರಿ ತಮ್ಮದೆಯಾದ ಛಾಪನ್ನು ಮೂಡಿಸಿ, ಯಶಸ್ಸು ಗಳಿಸಲು ಯಾವುದೇ ಅನುಮಾನವಿಲ್ಲ ಎಂದು ತಿಳಿಸಿದರು.

ತಂತ್ರಜ್ಞಾನ ಯುಗದಲ್ಲಿ ಹೆಚ್ಚು ಮೊಬೈಲ್ ಬಳಕೆಗೆ ಬಲಿಯಾಗಿ ಯಾವುದೇ ರಂಗದಲ್ಲಿ ಗುರ್ತಿಸಿಕೊಳ್ಳಲು ಹಿಂಜರಿಯುವ ಕಾಲದಲ್ಲಿ ವಿದ್ಯಾರ್ಥಿಗಳು ಸಾಂಸ್ಕೃತಿಕ, ಕಲೆ, ನಾಟಕ, ಗಾಯನ, ನೃತ್ಯ, ಸಂಗೀತ ಕ್ರೀಡೆ ಮುಂತಾದ ರಂಗಗಳಲ್ಲಿ ಆಸಕ್ತಿ ತೋರುತ್ತಿರುವುದು ಅವರ ಕಲ್ಪನಾಶಕ್ತಿಗೆ ಮೀರಿದ ಈ ಕಾರ್ಯಕ್ರಮ ಸಾಕ್ಷಿಯಾಗಿದೆ ಎಂದರು.



ಐಎಎಸ್ ನಿವೃತ್ತ ಅಧಿಕಾರಿ ಸಿ. ಎನ್. ಸೀತಾರಾಮ್ ಮಾತನಾಡಿ, ಈಗಿನ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಮಾಯವಾಗುತ್ತಿದೆ. ಇಂದಿನ ಯುವ ಪೀಳಿಗೆ ತಮ್ಮ ಆಸಕ್ತಿಯನ್ನು ತಮ್ಮ ಜ್ಞಾನದ ಜತೆಗೆ ಭೌತಿಕ ಸಾಮರ್ಥ್ಯ ಬೆಳೆಸಿಕೊಂಡು ಸೃಜನಶೀಲರಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದು ಕಾಲೇಜಿಗೆ ಮತ್ತು ಪೋಷಕರಿಗೆ ಕೀರ್ತಿ ತರುವಂತಹ ನಿಟ್ಟಿನಲ್ಲಿ ಸಾಗಬೇಕು. ಅನಾವಶ್ಯಕವಾಗಿ ಕಾಲಹರಣ ಮಾಡದೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಎಐಎಸ್ ಇಂಜಿನೀಯರಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ.ಸಿ.ಎಸ್.ಶೈಲಜಾ, ಸಿಇಒ ಸಿ. ಎನ್. ಸೀತಾರಾಮ್, ಉಷಾ, ವೇದ ನಾಯಕ್, ಸುನಿಲ್ ರಾಜ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕಿರುಸುದ್ದಿ

ಪ್ರಜ್ವಲ್ ವಿರುದ್ಧದ ಆರೋಪ ರದ್ದು ಕೋರಿದ ಅರ್ಜಿ ವಾಪಸ್

• ಬೆಂಗಳೂರು: ಪುತ್ರ ಪ್ರಜ್ವಲ್ ರೇವಣ್ಣರಿಂದ ಅತ್ಯಾಚಾರಕ್ಕೆ ಒಳಗಾಗಿದ್ದ ಸಂತ್ರಸ್ತೆಯನ್ನು ಅಪಹರಿಸಿದ ಸಂಬಂಧ ದಾಖಲಾಗಿದ್ದ ಪ್ರಕರಣ ಮತ್ತು ಅನಂತರ ವಿಶೇಷ ತನಿಖಾ ದಳ ಆರೋಪ ಪಟ್ಟಿ ಸಲ್ಲಿಸಿರುವುದನ್ನು ವಜಾಗೊಳಿಸುವಂತೆ ಕೋರಿದ್ದ ಅರ್ಜಿಯನ್ನು ಶಾಸಕ ಎಚ್.ಡಿ ರೇವಣ್ಣ ಗುರುವಾರ ಹಿಂಪಡೆದಿದ್ದಾರೆ.

ರೇವಣ್ಣ ಪರ ವಕೀಲ ಬಿ.ಎಂ. ಗಿರೀಶ್ ಕುಮಾರ್ ಸಲ್ಲಿಸಿದ್ದ ಮೆಮೊ ದಾಖಲಿಸಿಕೊಂಡ ನ್ಯಾ. ಎಸ್. ಸುನೀಲ್ ದತ್ ಯಾದವ್ ಅವರ ಏಕಸದಸ್ಯ ಪೀಠವು ಅರ್ಜಿ ವಿಲೇವಾರಿ ಮಾಡಿತು. ಅರ್ಜಿ ಹಿಂಪಡೆಯುವ ಸಂಬಂಧ ಸಲ್ಲಿಸಲಾದ ಮೆಮೊ ಪರಿಗಣಿಸಿ, ಅರ್ಜಿಯನ್ನು ಹಿಂಪಡೆಯಲು ಅನುಮತಿಸಲಾಗಿದೆ. ಕಾನೂನಿನ ಅನ್ವಯ ಆಕ್ಷೇಪಾರ್ಹವಾದ ಆದೇಶದ ಕುರಿತು ಕ್ರಮಕೈಗೊಳ್ಳುವ ಸ್ವಾತಂತ್ರ್ಯ ಅರ್ಜಿದಾರರಿಗಿದ್ದು, ಎಲ್ಲಾ ವಾದಗಳನ್ನು ಮುಕ್ತವಾಗಿರಿಸಲಾಗಿದೆ ಎಂದು ಆದೇಶಿಸಿತು. 2025ರ ಜ.17ರಂದು ನ್ಯಾಯಾಲಯವು ರೇವಣ್ಣ ವಿರುದ್ಧ ಆರೋಪ ನಿಗದಿ ಮಾಡದಂತೆ ವಿಚಾರಣಾಧೀನ ನ್ಯಾಯಾಲಯವನ್ನು ನಿರ್ಬಂಧಿಸಿತ್ತು. ಅನಂತರ ರೇವಣ್ಣ ಅವರ ಪರ ವಕೀಲರು ಹಲವು ಬಾರಿ ವಿನಾ ಕಾರಣ ವಿಚಾರಣೆ ಮುಂದೂಡಿಕೆ ಕೋರಿದ್ದರು. ಈ ಹಿನ್ನೆಲೆಯಲ್ಲಿ 2026ರ ಫೆ.5ರಂದು ಹೈಕೋರ್ಟ್ ಮಧ್ಯಂತರ ಆದೇಶ ತೆರವುಗೊಳಿಸಿತ್ತು. ಈ ಹಿನ್ನೆಲೆಯಲ್ಲಿ ಗುರುವಾರ ರೇವಣ್ಣ ಅರ್ಜಿ ಹಿಂಪಡೆದಿದ್ದಾರೆ.

ಇವಿ ವಾಹನಗಳಿಗೆ ಅಜೀವ ತೆರಿಗೆ

• ಬೆಂಗಳೂರು: 1957 ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆಯನ್ನು ತಿದ್ದುಪಡಿ ತಂದು, ನೂತನವಾಗಿ ಮೋಟಾರು ವಾಹನಗಳ ತೆರಿಗೆ ನಿರ್ಧಾರಣೆ ಅಧಿನಿಯಮ 2026 ಮಾಡಿರುವ ಬಗ್ಗೆ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಸಚಿವಾಲಯದ ಸರ್ಕಾರದ ಕಾರ್ಯದರ್ಶಿ ಜಿ.ಶ್ರೀಧರ್ ಅಧಿಸೂಚನೆ ಹೊರಡಿಸಿದ್ದಾರೆ. ಮೋಟಾರು ಕಾರು, ಜೀಪು, ಓಮ್ನಿ, ಬಸ್, ಖಾಸಗಿ ಸೇವಾ ವಾಹನಗಳಿಗೆ ಅಜೀವ ತೆರಿಗೆ, ವಿದ್ಯುತ್ ಚಾಲಿತ ಮೋಟಾರು ಕಾರು, ಜೀಪು, ಓಮ್ನಿ, ಬಸ್, ಖಾಸಗಿ ಸೇವಾ ವಾಹನಗಳಿಗೆ ಅಜೀವ ತೆರಿಗೆ ಮುಂತಾದವುಗಳಿಗೆ ತಿದ್ದುಪಡಿ ಮಾಡಲಾಗಿದೆ.

ಕೋಟ್ಯಂತರ ರೂ. ವಂಚನೆ: ಆರೋಪಿಗಳ ಪತ್ತೆಗೆ ಕ್ರಮ

• ಬೆಂಗಳೂರು: ಸಾರ್ವಜನಿಕರಿಗೆ ಕೋಟ್ಯಂತರ ರೂಪಾಯಿ ಹಣ ವಂಚಿಸಿ ತಲೆಮರೆಸಿಕೊಂಡಿರುವ ಒಂದೇ ಕುಟುಂಬದ ನಾಲ್ವರು ಆರೋಪಿಗಳ ಪತ್ತೆಗಾಗಿ ಜಯನಗರ ಪೊಲೀಸರು ಪ್ರಕಟಣೆ ಹೊರಡಿಸಿದ್ದಾರೆ.

ತಲೆಮರೆಸಿಕೊಂಡಿರುವ ಆರೋಪಿಗಳನ್ನು ಸುಧಾ (48), ಅವರ ಪತಿ ಸಿದ್ದಾಚಾರಿ (56), ಇವರ ಪುತ್ರ ಯಶವಂತ್ (28) ಮತ್ತು ಕುಮಾರಿ ವರ್ಷಿತಾ (26) ಎಂದು ಗುರುತಿಸಲಾಗಿದೆ. ನಂಬಿಕೆ ದ್ರೋಹ ಎಸಗಿರುವ ಈ ಆರೋಪಿಗಳ ವಿರುದ್ಧ ನ್ಯಾಯಾಲಯವು ಈಗಾಗಲೇ ಜಾಮೀನು ರಹಿತ ವಾರಂಟ್ ಜಾರಿಗೊಳಿಸಿದೆ.

ಆರೋಪಿಗಳ ಮೇಲೆ ಬಿಎನ್‌ಎಸ್ ಕಲಂ ಅಡಿ ಹಾಗೂ ಬಡ್ಸ್ ಕಾಯ್ದೆಯ ಅಡಿಯಲ್ಲಿ ಗಂಭೀರ ಪ್ರಕರಣಗಳು ದಾಖಲಾಗಿವೆ. ಸಾರ್ವಜನಿಕರಿಂದ ದೊಡ್ಡ ಮೊತ್ತದ ಹಣವನ್ನು ಸಂಗ್ರಹಿಸಿ, ಅವರಿಗೆ ವಂಚಿಸಿರುವ ಆರೋಪ ಇವರ ಮೇಲಿದೆ. ಸಾರ್ವಜನಿಕರಲ್ಲಿ ಪೊಲೀಸರ ಮನವಿ: ಈ ಆರೋಪಿಗಳ ಬಗ್ಗೆ ಯಾವುದೇ ಸುಳಿವು ದೊರೆತಲ್ಲಿ ಕೂಡಲೇ ಜಯನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಅವರನ್ನು ಸಂಪರ್ಕಿಸಲು ಕೋರಲಾಗಿದೆ. ಸಾರ್ವಜನಿಕರು ದೂರವಾಣಿ ಸಂಖ್ಯೆ 9480800155 ಅಥವಾ 080-22094445 ಕ್ಕೆ ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ. ಮಾಹಿತಿ ನೀಡಿದವರ ವಿವರಗಳನ್ನು ಅತ್ಯಂತ ಗೌಪ್ಯವಾಗಿ ಇಡಲಾಗುವುದು ಎಂದು ಜಯನಗರ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಜನಿವಾರ ಪ್ರಕರಣ: ತನಿಖೆಗೆ ಆದೇಶ

ಬೆಂಗಳೂರು: ಏಪ್ರಿಲ್ 23 ಮತ್ತು 24ರಂದು ನಡೆದ ಸಿಇಟಿ ಪರೀಕ್ಷೆಯ ವೇಳೆ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಂದ ಜನಿವಾರ ತೆಗೆಸಿದ ಸಂಬಂಧ ವರದಿಯಾಗಿರುವ ಪ್ರಕರಣದ ಕುರಿತು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ತನಿಖೆಗೆ ಆದೇಶಿಸಿದ್ದು, ಜಿಲ್ಲಾಧಿಕಾರಿಗಳಿಂದ ವರದಿ ನಿರೀಕ್ಷಿಸಲಾಗಿದೆ ಎಂದು ಹೈಕೋರ್ಟ್‌ಗೆ ಸರ್ಕಾರ ತಿಳಿಸಿತು. ಮೇ 3ರಂದು ನೀಟ್ ಪರೀಕ್ಷೆ ನಿಗದಿಯಾಗಿರುವ ಹಿನ್ನೆಲೆಯಲ್ಲಿ ಕೆಲವು ನಿರ್ದೇಶನಗಳನ್ನು ನೀಡಬೇಕು ಎಂದು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ.ಪೂಣಚ್ಚ ಅವರ ವಿಭಾಗೀಯ ಪೀಠಕ್ಕೆ ಅಖಿಲ ಕರ್ನಾಟಕ ಮಹಾಸಭಾದ ಪರ ಹಿರಿಯ ವಕೀಲ ಎಸ್. ಶ್ರೀರಂಗ ಕೋರಿದರು. ಕಳೆದ ವರ್ಷವೂ ಇದೇ ರೀತಿ ಸಿಇಟಿ ಪರೀಕ್ಷೆ ಸೇರಿದಂತೆ ಬೇರೆ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳಿಂದ ಜನಿವಾರ ತೆಗೆಸಲಾಗಿತ್ತು.

---

191 ತಾಲೂಕುಗಳಲ್ಲಿ 50 ಸಾವಿರಕ್ಕೂ ಹೆಚ್ಚು ದಾಖಲೆ ಸಂಗ್ರಹ | 21 ಮಾನದಂಡದಲ್ಲಿ ನಡೆಯಲಿದೆ ಸರ್ವೇ

ಮಹತ್ವದ ಪುರಾತನ ವಸ್ತು ಸಂಗ್ರಹ ಕಾರ್ಯ

▸ ವೀರಣ್ಣ ಬಳಿಗಾರ

• ಬೆಂಗಳೂರು: ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ರಾಜ್ಯದಲ್ಲಿ ಪುರಾತನ ವಸ್ತು ಮತ್ತು ಕಟ್ಟಡಗಳ ಸರ್ವೇ ಕಾರ್ಯ ಕೈಗೊಂಡಿದ್ದು, ಈ ಸಮೀಕ್ಷೆ ರಾಜ್ಯದ 191 ತಾಲೂಕುಗಳನ್ನು ಒಳಗೊಂಡಿದೆ. ಈಗಾಗಲೇ 50 ಸಾವಿರಕ್ಕೂ ಹೆಚ್ಚು ಪುರಾತತ್ವ ವಸ್ತುಗಳನ್ನು ದಾಖಲಿಸಲಾಗಿದೆ.

ಪುರಾತನ ವಸ್ತುಗಳ ರಕ್ಷಣೆಯು ನಮ್ಮ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸುವ ಅಗತ್ಯ ಪ್ರಕ್ರಿಯೆಯಾಗಿದೆ. ಈ ನಿಟ್ಟಿನಲ್ಲಿ ಪುರಾತತ್ವ ಇಲಾಖೆಯು ಸ್ಮಾರಕಗಳು, ಶಿಲಾಶಾಸನಗಳು ಮತ್ತು ಕಲಾಕೃತಿಗಳನ್ನು ಸಂರಕ್ಷಿಸುವುದರ ಜತೆ ಸ್ಥಳ, ವಸ್ತುವಿನ ಮಹತ್ವವನ್ನು ನಾಗರಿಕರಿಗೆ ತಿಳಿಸಲು ಸರ್ವೇ ಕೈಗೊಂಡಿದೆ.

ಶಾಸನಗಳು, ಪುರಾತತ್ವ ವಸ್ತುಗಳು, ಸ್ಮಾರಕಗಳು, ಪೂಜಾ ಸ್ಥಳಗಳು, ಕೋಟೆಗಳು ಹಾಗೂ ಐತಿಹಾಸಿಕ ಮಹತ್ವ ಹೊಂದಿರುವ ಇತರ ಕಟ್ಟಡಗಳ ಸರ್ವೇ ನಡೆಯಲಿದ್ದು, ಮೇ ತಿಂಗಳೊಳಗೆ ಸರ್ವೇ ಪೂರ್ಣಗೊಳ್ಳುವ ನಿರೀಕ್ಷೆಯಿದೆ. 21 ಮಾನದಂಡಗಳ ಆಧಾರದ ಮೇಲೆ ಸರ್ವೇ ಮಾಡಲಾಗುತ್ತಿದೆ. ಭೌಗೋಳಿಕ ಹಿನ್ನೆಲೆ, ಪ್ರಸ್ತುತ ಸ್ಥಿತಿ ಮತ್ತು ಐತಿಹಾಸಿಕ ಮಹತ್ವ ಸೇರಿದಂತೆ ಮುಂತಾದ ಅಂಶಗಳು ಇರಲಿವೆ.

ಸಮೀಕ್ಷಕರು ಸರ್ವೇ ಸಂದರ್ಭದಲ್ಲಿ ಪುರಾತನ ಸ್ಥಳದ ಸಂರಕ್ಷಣೆ ಅಗತ್ಯಗಳನ್ನು ದಾಖಲಿಸುವುದರ ಜತೆಗೆ ಪ್ರತಿ ಸ್ಥಳದ ಫೋಟೋಗಳನ್ನು ಕೂಡ ತೆಗೆದುಕೊಳ್ಳುತ್ತಾರೆ. ಸಾರ್ವಜನಿಕ ಸಾರಿಗೆ ಮೂಲಕ ಸ್ಥಳಕ್ಕೆ ಹೇಗೆ ತಲುಪಬೇಕು ಎಂಬ ವಿವರಗಳು, ಉದಾಹರಣೆಗೆ ಹತ್ತಿರದ ಬಸ್ ನಿಲ್ದಾಣ ಮತ್ತು ರೈಲು ನಿಲ್ದಾಣ ವಿವರಗಳನ್ನೂ ವರದಿಯಲ್ಲಿ ಸೇರಿಸಲಾಗುತ್ತದೆ.





ಸಂಗ್ರಹ ಚಿತ್ರ

ಸರ್ವೇ ದತ್ತಾಂಶ ವೆಬ್‌ಸೈಟ್‌ಗೆ ಅಪ್ಲೋಡ್



ಸರ್ವೇಯನ್ನು ಸಂಶೋಧನಾ ಸಹಾಯಕರು ಮತ್ತು ಸಂರಕ್ಷಣಾ ತಜ್ಞರ ಸಹಾಯದಿಂದ ನಡೆಸಲಾಗುತ್ತಿದೆ. ಸರ್ವೇಯಲ್ಲಿ ಕರ್ನಾಟಕದ ರಿಮೋಟ್ ಸೆನ್ಸಿಂಗ್ ಅಪ್ಲಿಕೇಶನ್ ಸೆಂಟರ್ ಅಭಿವೃದ್ಧಿಪಡಿಸಿದ ಅಪ್ಲಿಕೇಶನ್ ಬಳಸಲಾಗುತ್ತಿದೆ. ದತ್ತಾಂಶ ಪೂರ್ಣಗೊಂಡ ಬಳಿಕ ಅದನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ನಗರೀಕರಣ ಪರಿಣಾಮದಿಂದ ಕನಿಷ್ಠ ಶೇ.30 ಪುರಾತತ್ವ ವಸ್ತುಗಳು ಕಳೆದುಹೋಗಿವೆ, ಸ್ಥಳಾಂತರಗೊಂಡಿವೆ ಅಥವಾ ಆಕ್ರಮಣಕ್ಕೆ ಒಳಗಾಗಿವೆ. ಕೆಲವು ಸ್ಥಳಗಳಿಗೆ ಭೇಟಿ ನೀಡಿದಾಗ, ಜನರು ಶಾಸನಗಳನ್ನು ಧ್ವಂಸಮಾಡಿದ ಅಥವಾ ಕಲ್ಲುಗಳನ್ನು ಬೇರೆ ಕಟ್ಟಡಗಳಿಗೆ ಬಳಸಿದ ಉದಾಹರಣೆಗಳು ಇವೆ. ಇವುಗಳನ್ನು ಪತ್ತೆ ಮಾಡಿ ಸರ್ವೇ ಮಾಡುವುದು ಇಲಾಖೆಗೆ ಸವಾಲಾಗಿದೆ. ಈ ಸರ್ವೇ ಪೂರ್ಣಗೊಂಡ ಬಳಿಕ ರಾಜ್ಯಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ಪುರಾತತ್ವ ವಸ್ತುಗಳನ್ನು ಪಟ್ಟಿ ಮಾಡುವ ನಿರೀಕ್ಷೆಯಿದೆ. ಈ ಮಾಹಿತಿಗಳು ಸಂರಕ್ಷಣೆ, ಸ್ಮಾರಕ ರಕ್ಷಣೆ ಅಕ್ರಮ ಮತ್ತು ಆಕ್ರಮಣಗಳ ವಿರುದ್ಧ ಕ್ರಮ ಕೈಗೊಳ್ಳಲು ಸಹಕಾರಿಯಾಗಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪುರಾತನ ಸರ್ವೇ ಕಾರ್ಯದ ಪ್ರಮುಖಾಂಶ

- ರಾಜ್ಯದ 191 ತಾಲೂಕುಗಳಲ್ಲಿ ಸರ್ವೇ
- 21 ಮಾನದಂಡಗಳ ಆಧಾರದ ಮೇಲೆ ಸ್ಥಳ ಪರಿಶೀಲನೆ
- ಸಂರಕ್ಷಣೆ ಅಗತ್ಯತೆಗಳ ಬಗ್ಗೆ ಫೋಟೋ ದಾಖಲೆ
- 1 ಲಕ್ಷಕ್ಕೂ ಹೆಚ್ಚು ಪುರಾತತ್ವ ವಸ್ತುಗಳ ಪಟ್ಟಿ ತಯಾರಿ
- ಮೇ ಅಂತ್ಯಕ್ಕೆ ಸರ್ವೇ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆ

> ತಾಲೂಕು ಮಟ್ಟದಲ್ಲಿ ಸರ್ವೇ ಕೈಗೊಂಡಿದ್ದೇವೆ. ಸಮೀಕ್ಷೆ ನಿಖರವಾದ ದತ್ತಾಂಶವನ್ನು ಒದಗಿಸುತ್ತದೆ. ಇದರ ಆಧಾರದ ಮೇಲೆ ಸಂರಕ್ಷಣೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಬಹುದು.
>
> ■ ಎ. ದೇವರಾಜ್, ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಆಯುಕ್ತ

ಹೈಕೋರ್ಟ್ ಆದೇಶವಿದ್ದರೂ ಕ್ರಮ ಕೈಗೊಳ್ಳದ ಅಧಿಕಾರಿಗಳು

ಹಂದಿ ಸಾಕಣೆ ಕೇಂದ್ರ ತೆರವಿಗೆ ಆಗ್ರಹ

• ದೊಡ್ಡಬಳ್ಳಾಪುರ: ತಾಲೂಕಿನ ಬೈರಸಂದ್ರ ಗ್ರಾಮದಲ್ಲಿರುವ ಹಂದಿ ಸಾಕಣೆ ಕೇಂದ್ರವನ್ನು ತೆರವುಗೊಳಿಸುವಂತೆ ಹೈ ಕೋರ್ಟ್ ಆದೇಶ ನೀಡಿದ್ದರೂ ಇದುವರೆಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸ್ಥಳೀಯ ಪಂಚಾಯತಿ ಅಧಿಕಾರಿಗಳು ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ಗ್ರಾಮದ ಜನರ ಜೀವ ಮತ್ತು ಆರೋಗ್ಯದ ಜೊತೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಗ್ರಾಮದ ನಿವಾಸಿ ಲಕ್ಷ್ಮೀ ಸಾಗರ್ ಆರೋಪಿಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿ, ನಿರಂತರವಾಗಿ ನಮ್ಮ ಗ್ರಾಮದಲ್ಲಿನ ಸಮಸ್ಯೆ ಕುರಿತು ಅಧಿಕಾರಿಗಳಿಗೆ ಮನವಿ ಮಾಡುತ್ತಿದ್ದೇವೆ. ಆದರೂ ಇದುವರೆಗೂ ಯಾವುದೇ ಕ್ರಮಕೈಗೊಂಡಿಲ್ಲ, ಪ್ರತಿನಿತ್ಯ ಹಂದಿ ಸಾಕಾಣಿಕೆ ಕೇಂದ್ರ ಹೊರಸೂಸುವ ದುರ್ವಾಸನೆಯಲ್ಲಿ ಜೀವನ ಸಾಗಿಸುವಂತಾಗಿದೆ. ಅಲ್ಲದೆ ದಿನೇ ದಿನೇ ಗ್ರಾಮಸ್ಥರು ಹಲವು ಬಗೆಯ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿದ್ದು ನಮ್ಮ ಗೋಳು ಕೇಳುವವರೇ ಇಲ್ಲದಂತಾಗಿದೆಂದರು.

ಈ ಕುರಿತು ನ್ಯಾಯಾಲಯದ ಮೊರೆ ಹೋಗಿದ್ದ ಹಂದಿ ಸಾಕಾಣಿಕೆ ಕೇಂದ್ರದ ಮಾಲೀಕರ ಅರ್ಜಿ ತಿರಸ್ಕರಿಸುವ ಮೂಲಕ ನ್ಯಾಯಾಲಯ ಮಾಲಿನ್ಯ ನಿಯಂತ್ರಣ ಮಂಡಳಿ ವರದಿ ಆಧಾರದ ಮೇರೆಗೆ ಹಂದಿ ಸಾಕಾಣಿಕೆ ಕೇಂದ್ರವನ್ನು ತೆರವುಗೊಳಿಸುವಂತೆ ಆದೇಶ ನೀಡಿದೆಂದು ತಿಳಿಸಿದ್ದಾರೆ.



ಆದೇಶ ನೀಡಿ ಒಂದೂವರೆ ತಿಂಗಳು ಕಳೆದರೂ ಈವರೆಗೂ ಯಾವುದೇ ಕ್ರಮವಾಗಿಲ್ಲ, ಈ ಕೂಡಲೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಹಂದಿ ಸಾಕಾಣಿಕೆ ಕೇಂದ್ರವನ್ನು ತೆರವುಗೊಳಿಸಬೇಕು. ಇಲ್ಲವಾದಲ್ಲಿ ಈ ಪ್ರಕರಣವನ್ನು ಲೋಕಾಯುಕ್ತಕ್ಕೆ ನೀಡಲು ಗ್ರಾಮಸ್ಥರು ಮುಂದಾಗ ಬೇಕಾಗುತ್ತದೆ ಎಂದರು.

ಗ್ರಾಮಸ್ಥ ಮುನಿಸಿಬಿಳಯ್ಯಾ ಮಾತನಾಡಿ, ಗ್ರಾಮದಲ್ಲಿ ಮಿತಿಮೀರಿದ ವಾಸನೆ ಬರುತ್ತಿದೆ ಊಟ ಮಾಡಲು ಸಾಧ್ಯವಾಗುತ್ತಿಲ್ಲ, ಅಲ್ಲದೆ ದಿನೇ ದಿನೇ ಗ್ರಾಮಸ್ಥರ ಆರೋಗ್ಯದ ಮೇಲೆ ದುಷ್ಪರಿಣಾಮ ಹೆಚ್ಚಾಗುತ್ತಿದೆ. ಹಂದಿ ಸಾಕಾಣಿಕೆ ಕೇಂದ್ರ ಸ್ಥಳಾಂತರ ಗೊಳಿಸುವ ಮೂಲಕ ಸ್ವಚ್ಛ ಗ್ರಾಮಕ್ಕೆ ಅಧಿಕಾರಿಗಳು ಮುನ್ನುಡಿಯಾಗಬೇಕು ಎಂದರು.

ಗ್ರಾಮದ ಯುವ ಮುಖಂಡ ಸಿದ್ದರಾಜು ಮಾತನಾಡಿ, ಬೈರಸಂದ್ರ ಗ್ರಾಮದಲ್ಲಿ ದಲಿತರ ಜಮೀನು ಒತ್ತುವರಿ ಮಾಡಲಾಗಿದೆ ದಲಿತರ ಸ್ಮಶಾನದ ಜಾಗದಲ್ಲಿ ಕೋಳಿ ತ್ಯಾಜ್ಯ ಸೇರಿದಂತೆ ಇತರೆ ತ್ಯಾಜ್ಯ ವಸ್ತುವನ್ನು ಹಾಕಿ ಪರಿಸರ ಹಾಳು ಮಾಡುತ್ತಿದ್ದಾರೆ . ಇಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲೆ ನಂಬಿಕೆ ಇಟ್ಟು ನ್ಯಾಯ ಪಡೆಯಲು ಬಂದಿದ್ದೇವೆ. ಅಧಿಕಾರಿಗಳು ಗಮನ ಹರಿಸದ ಪಕ್ಷದಲ್ಲಿ ಮುಂದೆ ಉಗ್ರ ಹೋರಾಟ ರೂಪಿಸಲಾಗುವುದು ಎಂದರು.

ಘಟನೆಯ ತೀವ್ರತೆಯನ್ನು ಅರಿತ ಸ್ಥಳೀಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವೀಂದ್ರ ಬೈರಸಂದ್ರ ಗ್ರಾಮದ ಹಂದಿ ಗೂಡಿನ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ನೈಜತೆ ಯನ್ನರಿತು ವಾರಗಳ ಒಳಗಾಗಿ ಗ್ರಾಮದ ಸಮಸ್ಯೆಗೆ ಪರಿಹಾರ ನೀಡುವುದಾಗಿ ಭರವಸೆ ನೀಡಿದ್ದಾರೆ. ಈ ಬೆಳವಣಿಗೆಯನ್ನು ನಾವು ಸ್ವಾಗತಿಸುತ್ತೇವೆ. ಪಂಚಾಯಿತಿ ಕ್ರಮ ಕೈಗೊಳ್ಳದ ಪಕ್ಷದಲ್ಲಿ ಗ್ರಾಮ ಸ್ವತಃ ಹಂದಿ ಸಾಕಾಣಿಕೆ ಕೇಂದ್ರದ ತೆರವಿಗೆ ಮುಂದಾಗಬೇಕಾಗುತ್ತದೆಂದು ಗ್ರಾಮಸ್ಥರು ತಿಳಿಸಿದ್ದಾರೆ.

ತಾವರೆಕೆರೆ ಗ್ರಾಪಂನಲ್ಲಿ ಮಹಿಳಾ ದಿನಾಚರಣೆ: ಕ್ರೀಡಾಕೂಟ

ಮಹಿಳೆಯರಿಗೆ ಸಮಾನ ಅವಕಾಶ ದೊರಕಲಿ

• ತಾವರೆಕೆರೆ: ಮಹಿಳೆಯರು ಪುರುಷರಿಗಿಂತ ಸಾಕಷ್ಟು ಹೆಜ್ಜೆ ಮುಂದೆಯೇ ಇದ್ದಾರೆ. ಅವರಿಗೆ ಸಮಾನ ಅವಕಾಶ ನೀಡಬೇಕು ಎಂದು ತಾವರೆಕೆರೆ ಗ್ರಾಪಂ ಆಡಳಿತಾಧಿಕಾರಿ ರೇಣುಕಾ ಪ್ರಸಾದ್ ತಿಳಿಸಿದರು

ಗ್ರಾಮದ ಅಂಬೇಡ್ಕರ್ ಭವನದಲ್ಲಿ ಗ್ರಾಮ ಪಂಚಾಯಿತಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಡೆದ ಮಹಿಳಾ ಕ್ರೀಡಾಕೂಟ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಿಳೆಯರು ಒಂದೆಡೆ ಸಂಸಾರವನ್ನು ಸಂಭಾಳಿಸಿಕೊಂಡು ಇನ್ನೊಂದೆಡೆ ಉದ್ಯೋಗದ ಸ್ಥಳದಲ್ಲಿಯೂ ದಕ್ಷವಾಗಿ ಕಾರ್ಯ ನಿರ್ವಹಿಸುವ ಶಕ್ತಿ ಹೊಂದಿದ್ದಾಳೆಂದರು.

ಗ್ರಾಮೀಣ ಮಹಿಳೆಯರು ಇಡೀ ಕುಟುಂಬದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಮುಂತಾದ ಜವಾಬ್ದಾರಿ ಹೊತ್ತುಕೊಂಡು ದಣಿವಿಲ್ಲದೇ ದುಡಿಯುತ್ತಿರುವರು. ನಮ್ಮಲ್ಲಿ ಅನೇಕ ಮಹಿಳಾ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಒತ್ತಡದಿಂದ ಹೊರಬರಲು ಆಟಪಾಠದಲ್ಲೂ ಮಹಿಳೆಯರು ತೊಡಗಿಸಿಕೊಳ್ಳುವುದು ಉತ್ತಮ ಮಾರ್ಗವಾಗಿದೆ ಎಂದು ಹೇಳಿದರು. ಪಿಡಿಒ ಮುನಿಗಂಗಯ್ಯ ಮಾತನಾಡಿ, ಗ್ರಾಪಂ ವ್ಯಾಪ್ತಿಯಲ್ಲಿ 25ಕ್ಕೂ ಹೆಚ್ಚು ಮಹಿಳಾ ಸ್ವ-ಸಹಾಯ ಗುಂಪುಗಳು ಕಾರ್ಯನಿರ್ವಹಿಸುತ್ತಿವೆ. ತನ್ನದೇ ಆದ ಅಮೂಲ್ಯ ಸೇವೆಯನ್ನು ಸಮಾಜಕ್ಕೆ ನೀಡುತ್ತಿವೆ. ಈ ಸಂಘಗಳಲ್ಲಿ ನೂರಾರು ಮಹಿಳೆಯರು ಭಾಗವಹಿಸುತ್ತಿರುವುದು ಹೆಮ್ಮೆಯ ವಿಚಾರ ಎಂದು ತಿಳಿಸಿದರು. ಸ್ತ್ರೀಶಕ್ತಿ ಒಕ್ಕೂಟ ಮಹಿಳೆಯರಿಗೆ ವಿವಿಧ ಆಟೋಟ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಗ್ರಾಪಂ ಮಾಜಿ ಅಧ್ಯಕ್ಷ ಪವಿತ್ರಾ ಮಂಜುನಾಥ್, ಆರ್.ರವಿಕುಮಾರ್, ಎಸ್‌ಎಸ್‌ಟಿ ಮಂಜುನಾಥ್, ಎನ್. ರಮೇಶ್, ಲೆಕ್ಕ ಸಹಾಯಕಿ ಡಿ.ಎಸ್. ಮೀನಾಕ್ಷಿ, ಕರವಸೂಲಿಗಾರರಾದ ಎಂ.ರಾಜಣ್ಣ, ಜೆ.ಎಂ.ಬಚ್ಚೇಗೌಡ, ಗಣಕಯಂತ್ರ ನಿರ್ವಾಹಕಿ ಎಂ. ಮಂಜುಳಾ, ಸ್ತ್ರೀಶಕ್ತಿ ಒಕ್ಕೂಟದ ಪದಾಧಿಕಾರಿಗಳು, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಹಾಗೂ ಗ್ರಾಪಂ ಸಿಬ್ಬಂದಿ



ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ಪೂರ್ವ ಪಾಲಿಕೆ ಆಯುಕ್ತರ ಸೂಚನೆ

ತಗ್ಗು ಪ್ರದೇಶದಲ್ಲಿ ನೀರು ನಿಲ್ಲದಂತೆ ಕ್ರಮವಹಿಸಿ

• ಬೆಂಗಳೂರು: ನೀರು ನಿಲ್ಲುವ ತಗ್ಗು ಪ್ರದೇಶಗಳು, ರಸ್ತೆಗಳು ಹಾಗೂ ಕೆಳಸೇತುವೆಗಳಲ್ಲಿ ಉಂಟಾಗಿರುವ ಸಮಸ್ಯೆಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿ ತಕ್ಷಣ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ಪೂರ್ವ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ನಿರ್ದೇಶನ ನೀಡಿದರು.



ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ ಅವರು, ದೊಡ್ಡನೆಕ್ಕುಂದಿ ರೈಲ್ವೆ ಕೆಳಸೇತುವೆ, ಮಾರತಹಳ್ಳಿ ಕೆಳಸೇತುವೆ, ಆಶ್ರಯ ಲೇಔಟ್ ಹಂತ-2, ಸೇಲಂ ಸೇತುವೆ, ದೇವರಬೀಸನಹಳ್ಳಿ (ನ್ಯೂ ಹಾರಿಜನ್ ಕಾಲೇಜ್ ಸಮೀಪದ ಮಳೆ ನೀರು ಕಾಲುವೆ) ಬೋಗನಹಳ್ಳಿ ಗ್ರಾಮದ ಸರ್ವೆ ನಂ.18, ಸಕ್ರಾ ಆಸ್ಪತ್ರೆ ರಸ್ತೆ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಮಳೆ ಸಂದರ್ಭದಲ್ಲಿ ನೀರು ನಿಲ್ಲುವ ಮೂಲಕ ಸಮಸ್ಯೆ ಉಂಟಾಗುತ್ತಿದ್ದು, ಈ ಪ್ರದೇಶಗಳಲ್ಲಿ ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ರಸ್ತೆಬದಿ ಚರಂಡಿಗಳು ಮತ್ತು ಮಳೆ ನೀರು ಕಾಲುವೆಗಳಲ್ಲಿ ಹೂಳು, ಕಸ ಹಾಗೂ ಇನ್ನಿತರೆ ಅಡೆತಡೆಗಳನ್ನು ತಕ್ಷಣ ತೆರವುಗೊಳಿಸುವುದು. ಚರಂಡಿಗಳು ಮತ್ತು ಕಾಲುವೆಗಳಿಂದ ಹೊರ ತೆಗೆದ ಹೂಳು, ಮಣ್ಣು ಮತ್ತು ತ್ಯಾಜ್ಯವನ್ನು ಕೂಡಲೇ ವಿಲೇವಾರಿ ಮಾಡುವುದು. ರಸ್ತೆ ಮೇಲಿನ ಮಳೆ ನೀರು ಸರಾಗವಾಗಿ ಚರಂಡಿಗೆ ಹರಿಯಲು ಕರ್ಬ್ ಪ್ರವೇಶಗಳಲ್ಲಿನ ಗ್ರೇಟಿಂಗ್ ಮತ್ತು ಅಂಡರ್ ಪಾಸ್ ಗ್ರೇಟಿಂಗ್ ಸ್ವಚ್ಛಗೊಳಿಸುವುದು ಎಂದರು.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	M/s. Nambiar Encemble Residential Projects LLP	ಆನೇಕಲ್	ಸರ್ಜಾಪುರ	ದೊಮ್ಮಸಂದ್ರ	57/3	0-33	ವ್ಯವಸಾಯ	ವಸತಿ
					129/1	1-30		
					130/2	0-08		
					131/2	0-08		
					133/5	1-28		
					134/1	1-35		
					134/5	0-07		
					136/3	0-10		
					137/4	0-25		
					142/1	2-17		
					142/2	1-28		
					143/1	2-33		
					143/2	0-24		
					147/8	0-09		
					149/2	3-09		
					156/3(P)	0-20		
					237/1	1-01		
					237/2	0-29		
					238	0-37		
					254/4(P)	0-04		
					ಒಟ್ಟು	21-35		

ಷರಾ: ಅರ್ಜಿದಾರರು ಪ್ರಸ್ತಾಪಿತ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ಹಾಗೂ ಈ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ. ಸಹಾಯವಾಣಿ/ವಾಟ್ಸ್‌ಪ್: 9483166622 (24X7). @BDAOfficialGok

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಚಿಕ್ಕಪೇಟೆ ವಿಭಾಗ,
8ನೇ ಮುಖ್ಯರಸ್ತೆ, 2ನೇ ಬ್ಲಾಕ್ ಜಯನಗರ, ಕಲಾಸಿಪಾಳ್ಯ,
ಬೆಂಗಳೂರು-560011

ಸಂ: ಕಾಪಾಅ/ಚಿಪೇ/ಇ-ಪ್ರೊಕ್/01/2026-27 ದಿನಾಂಕ: 30.04.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ಏಕ ಲಕೋಟೆ) (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಚಿಕ್ಕಪೇಟೆ ವಿಭಾಗ), ಬಿಸಿಸಿಸಿ, ಬೆಂಗಳೂರು ಇವರು ಬೆಂಗಳೂರು ಕೇಂದ್ರ ನಗರ ಪಾಲಿಕೆಯಲ್ಲಿ ನೋಂದಾಯಿತ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್- ಕೆಡಬ್ಲ್ಯು1)

ಕ್ರ ಸಂ.	ಕಾಮಗಾರಿಯ ಹೆಸರು
1	ಕೆಂಪೇಗೌಡನಗರ ಮತ್ತು ವಿವಿ ಪುರಂ ಉಪ ವಿಭಾಗಗಳಲ್ಲಿ 2026-27ನೇ ಸಾಲಿನ ಮಳೆಗಾಲದ ಅವಧಿಗೆ ತಾತ್ಕಾಲಿಕ ನಿಯಂತ್ರಣ ಕೊಠಡಿ ನಿರ್ಮಾಣ. ಅಂದಾಜು ಮೊತ್ತ (ಲಕ್ಷಗಳಲ್ಲಿ): 8.00, ಇಎಂಡಿ (ರೂ. ಗಳಲ್ಲಿ): 20,000/-.
2	ಹೊಂಬೇಗೌಡನಗರ ಮತ್ತು ಅಶೋಕ ಪಿಲ್ಲರ್ ಉಪ ವಿಭಾಗಗಳಲ್ಲಿ 2026-27ನೇ ಸಾಲಿನ ಮಳೆಗಾಲದ ಅವಧಿಗೆ ತಾತ್ಕಾಲಿಕ ನಿಯಂತ್ರಣ ಕೊಠಡಿ ನಿರ್ಮಾಣ. ಅಂದಾಜು ಮೊತ್ತ (ಲಕ್ಷಗಳಲ್ಲಿ): 8.00, ಇಎಂಡಿ (ರೂ. ಗಳಲ್ಲಿ): 20,000/-.

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಜಿಕೆ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ (https://kppp.karnataka.gov.in) ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಆನ್‌ಲೈನ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ 07.05.2026ರ ಸಂಜೆ 4:00 ಗಂಟೆಯೊಳಗೆ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (3) ಟೆಂಡರ್‌ಗಳನ್ನು ತೆರೆಯುವ ದಿನಾಂಕ 08.05.2026ರ ಸಂಜೆ 4:30 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ https://kppp.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ, ಬಿಸಿಸಿಸಿ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ಸಂ.ಲೋ.ಇ./ಚಿ.ವಿ./ಸ.ಅ.-1/ಟೆಂಡರ/2026-27/514 ದಿನಾಂಕ:28/04/2026

ಇ-ಟೆಂಡರ್/ಮರುಟೆಂಡರ್/ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (Call-1, Call-2, Call-3 & Call-4)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 4059-ಎಸ್.ಸಿ.ಪಿ - ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP) ಅಡಿ 5 ಕಾಮಗಾರಿಗಳು ಮತ್ತು ಲೆಕ್ಕ ಶೀರ್ಷಿಕೆ 4059-ಟಿ.ಎಸ್.ಪಿ-ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP) ಅಡಿ 6 ಕಾಮಗಾರಿ, 3054-ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿ 2 ಕಾಮಗಾರಿಗಳು, 2059-ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ ನಿರ್ವಹಣೆ ಅಡಿ 1 ಕಾಮಗಾರಿ, 2216-ವಸತಿ ಗೃಹ ಕಟ್ಟಡಗಳ ದುರಸ್ತಿ/ನಿರ್ವಹಣೆ ಅಡಿ 1 ಕಾಮಗಾರಿ, 8443-ಠೇವಣಿ ವಂತಿಕೆ ಅಡಿ 1 ಕಾಮಗಾರಿ, 5054-ಜಿಮುರ ನವೀಕರಣ ಅಡಿ 1 ಕಾಮಗಾರಿ, 5054-ರಾಹೆ ಸುಧಾರಣೆ ಅಡಿ 1 ಕಾಮಗಾರಿ ಹಾಗೂ 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚ ಅಡಿ 1 ಕಾಮಗಾರಿ, ಹೀಗೆ ಒಟ್ಟು 19 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 6.40 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 232.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ಮರುಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:12-05-2026 ರಂದು (11.00 ಗಂಟೆಗೆ), 2)ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:14-05-2026 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:16-05-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):18-05-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-177/KSMCA/2026-27

ಯುದ್ಧ ಬೇಡ: ಶಾಂತಿ ಜಾಥಾಕ್ಕೆ ಸಾಹಿತಿ ಹಂಪನಾ ಚಾಲನೆ

ಗಾಂಧಿ ಶಾಂತಿ-ಅಹಿಂಸೆ ಮಹತ್ವ ಅರಿವಾಗಲಿ



• **ಬೆಂಗಳೂರು:** ಸಮಕಾಲೀನ ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧಗಳು, ಹಿಂಸೆ ಮತ್ತು ರಾಜಕೀಯ ಅಶಾಂತಿಗಳ ನಡುವೆ ಗಾಂಧೀಜಿ ಅವರ ತತ್ವವಾದ ಶಾಂತಿ ಮತ್ತು ಅಹಿಂಸೆಯ ಮಹತ್ವವನ್ನು ಯುವಕರು ಅರಿತುಕೊಳ್ಳಬೇಕು ಎಂದು ಸಾಹಿತಿ ಡಾ.ಹಂಪ ನಾಗರಾಜಯ್ಯ ಕರೆ ನೀಡಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿ, ಗಾಂಧಿ ಅಧ್ಯಯನ ಕೇಂದ್ರ ಶೇಷಾದ್ರಿಪುರಂ ಕಾಲೇಜು ಶೇಷಾದ್ರಿಪುರಂ ಹಾಗೂ ಡಾ. ಮನಮೋಹನ್ ಸಿಂಗ್ ನಗರ ವಿಶ್ವವಿದ್ಯಾಲಯವು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸಹಯೋಗದೊಂದಿಗೆ ನಗರದ ಗಾಂಧಿ ಭವನದಲ್ಲಿ ಆಯೋಜಿಸಲಾಗಿದ್ದ ಯುದ್ಧ ಬೇಡ: ಶಾಂತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಯುದ್ಧ ಎಂದರೆ ಕೇವಲ ಭೂಭಾಗಗಳಿಗಾಗಿ ನಡೆಯುವ ಹೋರಾಟವಲ್ಲ, ಅದು ಮಾನವೀಯ ಮೌಲ್ಯಗಳ ನಾಶಕ್ಕೆ ಕಾರಣವಾಗುತ್ತದೆ ಎಂದು ಹೇಳಿದರು.

ಯುದ್ಧ ಮನರಂಜನೆ ವಿಷಯವಲ್ಲ

ಯುದ್ಧ ಎನ್ನುವುದು ಮನರಂಜನೆಯ ವಿಷಯವಲ್ಲ, ಅದು ಜಗತ್ತಿನ ವಿನಾಶಕ್ಕೆ ಕಾರಣವಾಗುತ್ತದೆ. ಜಗತ್ತಿನ ಎಲ್ಲಾ ಜೀವ ಜಾಲವನ್ನು ರಕ್ಷಿಸಲು ಶಾಂತಿ ಮತ್ತು ಸೌಹಾರ್ದತೆ ಅಗತ್ಯವಾಗಿದೆ. ಮಹಾತ್ಮ ಗಾಂಧಿ ಅವರ ಅಹಿಂಸೆ, ಸತ್ಯಾಗ್ರಹ ಮತ್ತು ಸಹಬಾಳ್ವೆಯ ತತ್ವಗಳು ಇಂದಿಗೂ ಪ್ರಸ್ತುತವಾಗಿದ್ದು, ಯುವಕರು ತಮ್ಮ ಭವಿಷ್ಯದ ಬಗ್ಗೆ ಜವಾಬ್ದಾರಿಯುತವಾಗಿ ಯೋಚಿಸಿ, ಶಾಂತಿಯ ಪರವಾಗಿ ಧ್ವನಿ ಎತ್ತಿದಾಗ ಮಾತ್ರ ಜಗತ್ತಿನಲ್ಲಿ ಸ್ಥಿರತೆ ಸಾಧ್ಯವಾಗುತ್ತದೆ ಎಂದು ಹಿರಿಯ ಗಾಂಧಿ ಚಿಂತಕ ಪ್ರೊ.ಜಿ.ಬಿ.ಶಿವರಾಜು ಹೇಳಿದರು.

> ಇಂದಿನ ಯುವಕರು ತಂತ್ರಜ್ಞಾನ ಮತ್ತು ಜಾಗತೀಕರಣದ ಯುಗದಲ್ಲಿ ಬೆಳೆದವರು. ಅವರಿಗೆ ವಿಶ್ವದ ಎಲ್ಲೆಡೆ ನಡೆಯುವ ಘಟನೆಗಳು ತಕ್ಷಣ ಗೊತ್ತಾಗುತ್ತವೆ. ಆದ್ದರಿಂದ, ಅವರು ಶಾಂತಿಯ ಪರವಾಗಿ ಒಗ್ಗೂಡಿ ಧ್ವನಿ ಎತ್ತಿದರೆ, ಜಗತ್ತಿನಲ್ಲಿ ದೊಡ್ಡ ಮಟ್ಟದ ಬದಲಾವಣೆ ಸಾಧ್ಯ.
> ■ **ನಾಡೋಜ ಡಾ.ವೂಡೇ ಪಿ.ಕೃಷ್ಣ,**
> **ಅಧ್ಯಕ್ಷ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ**

ಪುಸ್ತಕ ಪ್ರಾಧಿಕಾರದಿಂದ ನಾಲ್ಕು ಪ್ರಶಸ್ತಿ ಸ್ಥಾಪನೆ

• **ಬೆಂಗಳೂರು:** ಕನ್ನಡ ಪುಸ್ತಕ ಪ್ರಾಧಿಕಾರದಿಂದ ನಾಲ್ಕು ಹೊಸ ಪ್ರಶಸ್ತಿಗಳನ್ನು ನೀಡಲು ಉದ್ದೇಶಿಸಿದೆ ಎಂದು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ತಿಳಿಸಿದ್ದಾರೆ.

ಕನ್ನಡ ಪುಸ್ತಕ ಪ್ರಾಧಿಕಾರ ಅತ್ಯಂತ ಮಹತ್ವಾಕಾಂಕ್ಷೆಯಿಂದ ಆರಂಭಿಸಿರುವ ಮನೆಗೊಂದು ಗ್ರಂಥಾಲಯ ಯೋಜನೆಯಡಿ ಗ್ರಂಥಾಲಯ ಅನುಷ್ಠಾನದ ಕಾರ್ಯಕ್ರಮದ ಮೂಲಕ ಗುರುತಿಸಿಕೊಂಡವರನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆಂದರು.

ನಂಜನಗೂಡು ತಿರುಮಲಾಂಬ ಪ್ರಶಸ್ತಿ, ಡಾ. ಹಾ.ಮಾ. ನಾಯಕ ಪ್ರಶಸ್ತಿ, ಪಿ.ಆರ್. ತಿಪ್ಪೇಸ್ವಾಮಿ ಪ್ರಶಸ್ತಿ ಹಾಗೂ ಗಳಗನಾಥ ಪ್ರಶಸ್ತಿ ಎಂದು ಈ ಪ್ರಶಸ್ತಿಗಳಿಗೆ ಹೆಸರಿಸಲಾಗಿದೆ. ನಾಲ್ಕು ಕಂದಾಯ ವಿಭಾಗದಲ್ಲಿ ಒಂದೊಂದು ವಿಭಾಗದಲ್ಲಿಯೂ ಒಬ್ಬರಂತೆ ಅತ್ಯುತ್ತಮ ಗ್ರಂಥಾಲಯ ಹೊಂದಿರುವವರನ್ನು ಗುರುತಿಸಿ ಈ ನಾಲ್ಕು ಜನ ವಿದ್ವಾಂಸರುಗಳ ಹೆಸರಿನಲ್ಲಿ ಸ್ಥಾಪಿತವಾದ ಪ್ರಶಸ್ತಿಗಳನ್ನು ನೀಡಲಾಗುವುದು.

ಈ ಪ್ರಶಸ್ತಿಯು ತಲಾ 25 ಸಾವಿರ ರೂ. ಗಳ ನಗದು ಬಹುಮಾನ, ಸ್ಮರಣಿಕೆ ಹಾಗೂ ಅಭಿನಂದನಾ ಪತ್ರ ಒಳಗೊಂಡಿದೆ. ಪ್ರತೀ ವರ್ಷ ಪ್ರಾಧಿಕಾರದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಅವಾಂತರ



ನಗರದಲ್ಲಿ ಬುಧವಾರ ಸುರಿದ ಭಾರೀ ಗಾಳಿ ಮಳೆಯಿಂದಾಗಿ ಮರ ಬಿದ್ದು ಕಾರು ಜಖಂಗೊಂಡಿದೆ. ಇದರಿಂದಾಗಿ ಕೆಲವು ಕಾಲ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು.

ಕಿರುಸುದ್ದಿ

ಲೋಕಾಯುಕ್ತ, ಪೊಲೀಸ್ ಅಧಿಕಾರಿಗಳ ಭೇಟಿ



• **ಬೆಂಗಳೂರು :** ನಗರದಲ್ಲಿ ಸುರಿದ ಭಾರೀ ಮಳೆಯಿಂದಾಗಿ ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯ ಬಳಿ ಕಾಂಪೌಂಡ್ ಗೋಡೆ ಕುಸಿದ ಪ್ರದೇಶ ಸೇರಿದಂತೆ ನಗರದ ವಿವಿಧೆಡೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್, ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ, ಸೇರಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬೌರಿಂಗ್ ಆಸ್ಪತ್ರೆಯ ಗೋಡೆ ಕುಸಿದ ಪ್ರದೇಶಕ್ಕೆ ಭೇಟಿ ನೀಡಿ ಬಳಿಕ ಮಾತನಾಡಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಅವರು, ಕೇವಲ ಸಿಮೆಂಟ್ ಬ್ಲಾಕ್‌ಗಳನ್ನು ಬಳಸಿ ನಿರ್ಮಿಸಲಾಗಿದ್ದ ಈ ಗೋಡೆಯ ಅಡಿಪಾಯ ಅತ್ಯಂತ ದುರ್ಬಲವಾಗಿರುವುದು ಪ್ರಾಥಮಿಕ ಹಂತದಿಂದ ತಿಳಿದುಬಂದಿದೆ. ಅಲ್ಲದೇ, ಗೋಡೆಯ ಪಕ್ಕದಲ್ಲಿ ಅತಿಯಾಗಿ ಮರಳನ್ನು ಸುರಿದಿದ್ದು, ಕುಸಿತಕ್ಕೆ ಪ್ರಮುಖ ಕಾರಣವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ಘಟನೆಯ ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಸಮಗ್ರ ವರದಿ ನೀಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಲಾಗಿದೆ. ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆಗೊಳ್ಳಲಾಗುವುದು ಎಂದರು.

ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿತ : ಸ್ಥಳ ಪರಿಶೀಲನೆ

ಸ್ವಯಂ ಪ್ರೇರಿತ ದೂರು ದಾಖಲು : ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿತ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆಂದು ತಿಳಿಸಿದರು.

ಕೆ.ಆರ್.ವೃತ್ತಕ್ಕೆ ಭೇಟಿ : ಇನ್ನು ಕೆ.ಆರ್. ವೃತ್ತದಲ್ಲಿ ಮಳೆಯಿಂದಾಗಿ ಜಲಾವೃತಗೊಂಡಿದ್ದ ಕೆಳಸೇತುವೆಗೆ ಭೇಟಿ ನೀಡಿದ ಲೋಕಾಯುಕ್ತ ನ್ಯಾಯಮೂರ್ತಿಗಳು, ಈ ಅವ್ಯವಸ್ಥೆಗೆ ಕಾರಣರಾದ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಲಾಗುವುದು ಮತ್ತು ಕೂಡಲೇ ಇಲ್ಲಿನ ನೀರು ಹಾಗೂ ಕಸವನ್ನು ತೆರವುಗೊಳಿಸಿ, ಶಾಶ್ವತ ಪರಿಹಾರ ಕಂಡುಕೊಳ್ಳಲಾಗುವುದು ಎಂದು ತಿಳಿಸಿದರು.

ಪೌತಿ ಖಾತೆಗೆ ಲಂಚ: ಲೋಕಾ ಬಲೆಗೆ ಪಿಡಿಒ

• **ಬೆಂಗಳೂರು:** ಪೌತಿ ಖಾತೆ ವರ್ಗಾವಣೆ ಮಾಡುವ ಸಲುವಾಗಿ ಹತ್ತು ಲಕ್ಷ ಹಣಕ್ಕೆ ಲಂಚಕ್ಕೆ ಬೇಡಿಕೆಯಿಟ್ಟಿದ್ದ ಬೇಗೂರು ನಾಡಕಚೇರಿಯ ಗ್ರಾಮ ಆಡಳಿತಾಧಿಕಾರಿ ಮಂಜುನಾಥ್ ಎಂಬವರು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಮಂಗಳಮ್ಮನ ಪಾಳ್ಯದ ನಿವಾಸಿ ಚೇತನ್ ಎಂಬವರು ತಮ್ಮ ಕೆಲಸದ ನಿಮಿತ್ತ ಪೌತಿ ಖಾತೆ ವರ್ಗಾವಣೆಗಾಗಿ ಅರ್ಜಿ ಸಲ್ಲಿಸಿದ್ದರು. ಈ ಕೆಲಸ ಮಾಡಿಕೊಡಲು ಆರೋಪಿ ಮಂಜುನಾಥ್ ಅವರು ಬರೋಬ್ಬರಿ 10 ಲಕ್ಷ ರೂ. ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಎನ್ನಲಾಗಿದೆ. ಲಂಚದ ಹಣ ನೀಡಲು ಇಚ್ಛಿಸದ ಚೇತನ್ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ದೂರಿನ ಅನ್ವಯ ಬೆಂಗಳೂರು ನಗರ ಲೋಕಾಯುಕ್ತ ಎಸ್ಪಿ ಶಿವಪ್ರಕಾಶ್ ದೇವರಾಜ್, ಮಾರ್ಗದರ್ಶನದಲ್ಲಿ ದಾಳಿ ನಡೆಸಲಾಗಿತ್ತು.

ಬೆಸ್ಕಾಂ, ಜಿಬಿಎಯಿಂದ ಮರಗಳ ತೆರವಿಗೆ ಕಸರತ್ತು | ಆಲಿಕಲ್ಲು ಸಹಿತ ಮಳೆಗೆ ತತ್ತರಿಸಿದ ಜನ

ಗಾಳಿಮಳೆಗೆ ಧರೆಗುರುಳಿದ 226 ಮರಗಳು

• **ಬೆಂಗಳೂರು:** ಬುಧವಾರ ಸಂಜೆ ವೇಳೆ ಸುರಿದ ಆಲಿಕಲ್ಲು ಸಹಿತ ಭಾರೀ ಮಳೆಯಿಂದ ನಗರದಾದ್ಯಂತ ಅಸ್ತವ್ಯಸ್ತ ಉಂಟಾಗಿತ್ತು, ಗುರುವಾರ ಜಿಬಿಎ, ಬೆಸ್ಕಾಂ ಮುಂತಾದ ಇಲಾಖೆ ಸಿಬ್ಬಂದಿ ಧರೆಗುರುಳಿದ ಮರ, ರೆಂಬೆ ಕೊಂಬೆ, ಕೆಳಸೇತುವೆ, ಮನೆ, ಕಚೇರಿಗಳಲ್ಲಿ ತುಂಬಿದ ನೀರು ತೆರವುಗೊಳಿಸುತ್ತಿದ್ದಾರೆ.

ಕಾಟನ್‌ಪೇಟೆ, ಬಿನ್ನಿಪೇಟೆ, ಸಂಪಂಗಿರಾಮನಗರ, ಶಿವಾಜಿನಗರ ಹಾಗೂ ಸುಭಾಷ್ ನಗರ ವಾರ್ಡ್‌ಗಳಲ್ಲಿ 92.00 ಮಿ.ಮೀ ಅತೀ ಹೆಚ್ಚು ಮಳೆ ದಾಖಲಾಗಿದೆ. ಬೆಂಗಳೂರು ಉತ್ತರ ನಗರ ಪಾಲಿಕೆಯ ಕೆಲವು ಪ್ರದೇಶಗಳಲ್ಲಿ ಕನಿಷ್ಠ 15 ಮಿ.ಮೀ ಮಳೆಯಾಗಿದೆ. ಸರಾಸರಿ 55.00 ಮಿ.ಮೀ ಮಳೆಯಾಗಿದೆ. ಆಗಿರುವ ತೊಂದರೆಗಳನ್ನು ಸರಿಪಡಿಸುವ ಸಲುವಾಗಿ ಜಿಬಿಎ ವತಿಯಿಂದ 30 ತಂಡ ಹಾಗೂ ನಾಲ್ಕು ಕ್ರೇನ್‌ಗಳನ್ನು ತೆರವು ಕಾರ್ಯಕ್ಕಾಗಿ ನಿಯೋಜಿಸಲಾಗಿದೆ. ಅಗ್ನಿಶಾಮಕ ಇಲಾಖೆಯಿಂದ 15 ತಂಡ, ಎಸ್‌ಡಿಆರ್‌ಎಫ್ ನಿಂದ 4 ತಂಡ, ಹೆಚ್ಚುವರಿಯಾಗಿ 10 ಖಾಸಗಿ ತಂಡಗಳನ್ನು ಬಾಡಿಗೆ ಆಧಾರದಲ್ಲಿ ನಿಯೋಜಿಸಿ ಸುವ್ಯವಸ್ಥೆ ಕಾರ್ಯ ಮಾಡಲಾಗುತ್ತಿದೆ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದರು.

ನಗರದಾದ್ಯಂತ ಅಂದಾಜು 226 ಮರ ಧರೆಗುರುಳಿವೆ ಹಾಗೂ 623 ಕೊಂಬೆಗಳು ಮುರಿದು ಬಿದ್ದಿವೆ. ಇವುಗಳ ಪೈಕಿ 150 ಮರ, 384 ರೆಂಬೆ ತೆರವುಗೊಳಿಸಲಾಗಿದೆ. ಉಳಿದ ತೆರವು ಕಾರ್ಯ ಸಕ್ರಿಯವಾಗಿ ಮುಂದುವರಿಯುತ್ತಿದೆ. ಕುಮಾರಕೃಪಾ ಅತಿಥಿ ಗೃಹದಲ್ಲಿನ ಶೆಡ್ ಮುರಿದು ಬಿದ್ದ ಪರಿಣಾಮ ಕಾರುಗಳು ಜಖಂ ಆಗಿದೆ.







ಗೋಡೆ ಕುಸಿತದಿಂದ ಮೃತಪಟ್ಟವರಿಗೆ 5 ಲಕ್ಷ ರೂ.

ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಗೋಡೆ ಕುಸಿತದಿಂದ 7 ಮಂದಿ ಮೃತಪಟ್ಟಿದ್ದು, 7 ಮಂದಿ ಗಾಯಗೊಂಡಿದ್ದಾರೆ. ಮೃತರ ಕುಟುಂಬಗಳಿಗೆ ತಲಾ 5 ಲಕ್ಷ ರೂ. ಶಾಸಕ ರಿಜ್ವಾನ್ ಅರ್ಷದ್ ಚೆಕ್ ವಿತರಣೆ ಮಾಡಿದರು. ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನು ಪಾಲಿಕೆಯಿಂದಲೇ ಭರಿಸಲಿದೆ. ಇನ್ನು ವಿದ್ಯುತ್ ತಂತಿ ತಗುಲಿ ಮೃತಪಟ್ಟ ರಘು ಅವರ ಕುಟುಂಬಕ್ಕೂ 5 ಲಕ್ಷ ರೂ. ಪರಿಹಾರ ನೀಡಲಾಗುತ್ತದೆ.

ಪಂಪ್ ಮೂಲಕ ನೀರು ತೆರವು

ನಗರದಾದ್ಯಂತ 62ಕ್ಕೂ ಹೆಚ್ಚು ಪ್ರದೇಶಗಳ ರಸ್ತೆಗಳಲ್ಲಿ ನೀರು ನಿಂತಿದ್ದು, 3 ಕಡೆ ಗೋಡೆ ಕುಸಿತ, 105 ಕಡೆ ಮನೆಗಳಿಗೆ ನೀರು ನುಗ್ಗಿರುವುದು, 1 ಕಡೆ ಮೂಲಸೌಕರ್ಯ ಹಾನಿ ವರದಿಯಾಗಿದೆ.

ಕೆ.ಆರ್. ವೃತ್ತ, ಮಡಿವಾಳ, ಸ್ಯಾಂಕಿ ರಸ್ತೆ, ಜಯದೇವ, ಯಮಲೂರು, ಶಂಕರನಾಗ್, ಟ್ಯಾನರಿ ರಸ್ತೆ ಹಾಗೂ ನಾಯಂಡಹಳ್ಳಿ ಕೆಳಸೇತುವೆ ಪ್ರದೇಶಗಳಲ್ಲಿ ತುಂಬಿದ ನೀರನ್ನು ಪಂಪ್ ಅಳವಡಿಸಿ ತೆರವುಗೊಳಿಸಿದ್ದಾರೆ.

> ಬೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಪೂರ್ವ ಮುಂಗಾರು ಮಳೆ ಮುಂದುವರಿಯುವ ಸೂಚನೆ ಇರುವುದರಿಂದ ಗ್ರಾಹಕರಿಗೆ ಅಗತ್ಯ ಸುರಕ್ಷತಾ ಕ್ರಮ ಕುರಿತು ಅರಿವು ಮೂಡಿಸಬೇಕು.
> ■ **ಕೆ.ಜೆ.ಜಾರ್ಜ್, ಇಂಧನ ಸಚಿವ**

461 ವಿದ್ಯುತ್ ಕಂಬಕ್ಕೆ ಹಾನಿ : ಬೆಸ್ಕಾಂ

ಮಳೆಗೆ 461 ವಿದ್ಯುತ್ ಕಂಬ, 77 ಟ್ರಾನ್ಸ್‌ಫಾರ್ಮರ್, 1.8 ನಷ್ಟು ಕಿ.ಮೀ ಉದ್ದದ ವಿದ್ಯುತ್ ತಂತಿಗಳು ಹಾನಿಗೊಳಗಾಗಿದ್ದು, ಆ ಮೂಲಕ ಬೆಂಗಳೂರು ನಗರ ಸೇರಿದಂತೆ ಬೆಸ್ಕಾಂ ವ್ಯಾಪ್ತಿಯಲ್ಲಿ 87.32 ಲಕ್ಷ ರೂ. ಹಾನಿಯಾಗಿದೆ ಎಂದು ಅಂದಾಜಿಲಾಗಿದೆ.

ತಂತ್ರಜ್ಞಾನದ ಅಡಿಯಾಳಾದ ಮಾನವ

• **ಬೆಂಗಳೂರು:** ತಂತ್ರಜ್ಞಾನವನ್ನು ಮಾನವ ರೂಪಿಸಿ ಕೊನೆಗೆ ಅದರ ಅಡಿಯಾಳಾಗಿದ್ದರೂ ಈ ಯಾಂತ್ರಿಕ ಸಹಾಯ ಮಾನವನ ಬದುಕಿಗೆ ಬೇಕಾಗಿದ್ದು, ತಂತ್ರಜ್ಞಾನ ಮಾನವನ ಬದುಕಿಗೆ ಅನಿವಾರ್ಯ ಎಂದು ನಿವೃತ್ತ ವಾಯು ಸೇನಾಧಿಕಾರಿ ಮತ್ತು ಲೇಖಕಿ ಪೂರ್ಣಿಮಾ ಮಾಳಗಿಮನಿ ಅಭಿಪ್ರಾಯಪಟ್ಟರು.

ನಗರದ ಆರ್‌ಎನ್‌ಎಸ್ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗವು ಆಯೋಜಿಸಿದ್ದ ಬದುಕಿನ ಪಥ ಬದಲಿಸುವ ಹತ್ತು ತಂತ್ರಜ್ಞಾನ ಶೋಧನೆಗಳು ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ಆಧುನಿಕ ತಂತ್ರಜ್ಞಾನದ ಶೋಧಗಳು ನಮ್ಮ ಬದುಕನ್ನು ಅತ್ಯಂತ ಸಮರ್ಥವಾಗಿ ಪ್ರಭಾವಿಸುಲ್ಲವು. ಸಮಯ ಮತ್ತು ಶ್ರಮ ವ್ಯರ್ಥವಾಗದಂತೆ ಮಾನವನ ಬೌದ್ಧಿಕತೆಗೆ ಇವು ವರವಾಗಿವೆ. ಇದರಿಂದ ಮನುಷ್ಯನಿಗೆ ಆಗುತ್ತಿದ್ದ ತೊಂದರೆಯನ್ನು ಪರಿಹರಿಸಿ ಅವರ ಕೆಲಸವನ್ನು ಸುಗಮವಾಗಿ ಮಾಡಿಕೊಳ್ಳಬಹುದು. ಇದರಿಂದ ಪರಿಸರವನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ



ಬಳಸಿಕೊಳ್ಳಬಹುದು. ಆದರೆ ಇದರ ಅತಿಯಾದ ಅವಲಂಬನೆ ಇರದಂತೆ ಜಾಗೃತಿ ವಹಿಸುವುದು ಒಳ್ಳೆಯದು ಎಂದರು.

ಪ್ರಾಂಶುಪಾಲ ಡಾ. ಶೇಖರ್ ಎಚ್.ಎಸ್. ಮಾತನಾಡಿ, ವಿದ್ಯಾರ್ಥಿಗಳು ಅವಕಾಶವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಸಾಧನೆಯನ್ನು ಮಾಡಬೇಕು. ಶಿಕ್ಷಣ ಜತೆಗೆ ಕೌಶಲ್ಯಗಳ ವೃದ್ಧಿಗೆ ಹೆಚ್ಚು ಆದ್ಯತೆ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಉಪ ಪ್ರಾಂಶುಪಾಲೆ ಪ್ರೊ. ಶಿಲ್ಪಾ ಸರ್ನಾಡ್, ಪರೀಕ್ಷಾಂಗ ವಿಭಾಗದ ಮುಖ್ಯಸ್ಥ ಪ್ರೊ. ನಾಗರಾಜ ಎನ್., ಕನ್ನಡ ವಿಭಾಗದ ಮುಖ್ಯಸ್ಥ ಡಾ.ಡಿ.ಸಿ. ಚಿತ್ರಲಿಂಗಯ್ಯ ಉಪಸ್ಥಿತರಿದ್ದರು.

ನೆಹರು ತಾರಾಲಯದಲ್ಲಿ ನೆವರ್ ಎಂಡಿಂಗ್ ಜರ್ನಿ ಷೋ ಉದ್ಘಾಟನೆ

ಆಕಾಶ ಮಂಡಲದಲ್ಲಿ ಮನುಕುಲದ ಹುಡುಕಾಟ

• **ಬೆಂಗಳೂರು:** ಆಕಾಶಮಂಡಲ ಪ್ರದರ್ಶನವಾದ ವಾಯೇಜರ್ ಅಭಿಯಾನವು ನಮ್ಮ ಜಗತ್ತನ್ನು ಮೀರಿ ಜ್ಞಾನವನ್ನು ಅನ್ವೇಷಿಸುವ ಮಾನವಕುಲದ ಅಂತಿಮ ಹುಡುಕಾಟವನ್ನು ಪ್ರತಿನಿಧಿಸುತ್ತದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ತಿಳಿಸಿದರು.

ನಗರದ ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ಬಹು ನಿರೀಕ್ಷಿತ ನೂತನ ಆಕಾಶಮಂಡಲ ಪ್ರದರ್ಶನವಾದ ವಾಯೇಜರ್ - ದ ನೆವರ್ ಎಂಡಿಂಗ್ ಜರ್ನಿ ಷೋ ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಬಾಹ್ಯಾಕಾಶ ನೌಕೆಗಳು ಬ್ರಹ್ಮಾಂಡದ ಬಹು ದೂರದವರೆಗೆ ಕನ್ನಡದ ಶುಭಾಶಯಗಳ ಮೂಲಕ ಕರ್ನಾಟಕದ ಸಾಂಸ್ಕೃತಿಕ ಸಾರವನ್ನು ಹೊತ್ತೊಯ್ಯುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು.

ಇಸ್ರೋ ಮಾಜಿ ಅಧ್ಯಕ್ಷ ಎ. ಎಸ್. ಕಿರಣ್‌ಕುಮಾರ್ ಮಾತನಾಡಿ, ವಾಯೇಜರ್ ಅಭಿಯಾನಗಳು



ಮಾನವನ ಎಂಜಿನಿಯರಿಂಗ್ ಸಾಮರ್ಥ್ಯ ಮತ್ತು ಬ್ರಹ್ಮಾಂಡದ ಬಗೆಗಿನ ಕುತೂಹಲದ ಪರಾಕಾಷ್ಠೆಯಾಗಿವೆ. ಖಗೋಳಶಾಸ್ತ್ರದಲ್ಲಿ ಮುಂದಿನ ಪೀಳಿಗೆಯ ಸಾಧಕರನ್ನು ಪ್ರೋತ್ಸಾಹಿಸುವ ಆಶಯ ಹೊಂದಿದ್ದೇವೆ ಎಂದರು.

ಬ್ರಹ್ಮಾಂಡದ ಮೂಲಕ ಒಂದು ಪಯಣ

ಹೊಸದಾಗಿ ಆರಂಭಿಸಲಾದ ಈ ಆಕಾಶ ಮಂಡಲ ಪ್ರದರ್ಶನವು, 1977 ರಲ್ಲಿ ನಾಸಾ (NASA) ಉಡಾವಣೆ ಮಾಡಿದ ಎರಡು ವಾಯೇಜರ್ ನೌಕೆಗಳ ಕಥನವನ್ನು ಅತ್ಯಂತ ಪರಿಣಾಮಕಾರಿಯಾಗಿ ವಿವರಿಸುತ್ತದೆ. ಕ್ಷುದ್ರಗ್ರಹಗಳ ಪಟ್ಟಿಯನ್ನು ದಾಟಿ ಸೌರವ್ಯೂಹದ ಆಚೆಗಿನ ಪ್ರದೇಶಕ್ಕೆ ಪ್ರಯಾಣ ಬೆಳೆಸಿದ ಈ ನೌಕೆಗಳ ಅದ್ಭುತ ಪಯಣವನ್ನು ಈ ಪ್ರದರ್ಶನವು ವಿವರಿಸುತ್ತದೆ. ವೀಕ್ಷಕರು ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್ ಗ್ರಹಗಳು ಹಾಗೂ ಅವುಗಳ ಉಪಗ್ರಹಗಳ ಉಸಿರು ಬಿಗಿ ಹಿಡಿಯುವಂತಹ ದೃಶ್ಯಗಳು ಮತ್ತು ಅನಿಮೇಷನ್‌ಗಳನ್ನು ಕಣ್ತುಂಬಿಕೊಳ್ಳಲಿದ್ದು, ಇದೊಂದು ವಿಶಿಷ್ಟ ಅನುಭವವನ್ನು ನೀಡಲಿದೆ.

ತಿಂಗಳಾಂತ್ಯಕ್ಕೆ ಕೆರೆ ಹೂಳು ತೆರವು

• **ಬೆಂಗಳೂರು:** ಕಾಚರಕನಹಳ್ಳಿ ಕೆರೆಯ ಹೂಳು ತೆಗೆಯುವ ಕಾಮಗಾರಿಯನ್ನು ಮೇ ತಿಂಗಳ ಅಂತ್ಯದೊಳಗೆ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕಾಚರಕನಹಳ್ಳಿ ಸ್ಥಳ ಪರಿಶೀಲನೆ ನಡೆಸಿದ ವೇಳೆ ಮಾತನಾಡಿದ ಅವರು, ಕೆರೆಯ ಸಮೀಪದ ಮಾರ್ಗದಲ್ಲಿ ಬಿ-ಸ್ಮೈಲ್ ವತಿಯಿಂದ ಕೈಗೊಳ್ಳಲಾಗುತ್ತಿರುವ ವೈಟ್ ಟಾಪಿಂಗ್ ಕಾಮಗಾರಿ ಯನ್ನು ಪರಿಶೀಲಿಸಿ, ಪಾದಚಾರಿ ಮಾರ್ಗದ ನಿರ್ಮಾಣವನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು. ಕೆರೆಯ ಒಳಹರಿವಿನ ಭಾಗದ ರಾಜಕಾಲುವೆಯಲ್ಲಿ ನೀರು ನಿಂತಿರುವುದನ್ನು ಗಮನಿಸಿದ ಆಯುಕ್ತರು, ನೀರು ಸರಾಗವಾಗಿ ಹರಿಯುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಹಾಗೂ ಅದನ್ನು ಶೀಘ್ರದಲ್ಲಿ ನಿವಾರಣೆ ಮಾಡಲು ನಿರ್ದೇಶನ ನೀಡಿದರು.

ನಗರದ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವುದು ಅತ್ಯಂತ ಮುಖ್ಯವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.



ಪಾದಚಾರಿಗೆ ಕಾರು ಡಿಕ್ಕಿ: ವ್ಯಕ್ತಿ ಸಾವು

• **ಬೆಂಗಳೂರು:** ರಸ್ತೆ ದಾಟುತ್ತಿದ್ದ ಪಾದಚಾರಿಗೆ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ, ವ್ಯಕ್ತಿಯೊಬ್ಬರು ದಾರುಣವಾಗಿ ಮೃತಪಟ್ಟಿರುವ ಘಟನೆ ಕೆ.ಆರ್.ಪುರಂ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಮೃತರನ್ನು ಅಸ್ಸಾಂ ಮೂಲದ ಹೇಮಂತ್ ಎಂದು ಗುರುತಿಸಲಾಗಿದೆ. ಬುಧವಾರ ಸಂಜೆ ನಗರದಲ್ಲಿ ಗಾಳಿ ಸಹಿತ ಮಳೆ ಸುರಿಯುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ರಾತ್ರಿ 7.30ರ ವೇಳೆಗೆ ಹೇಮಂತ್ ಅವರು ಅವಲಹಳ್ಳಿ ಸಮೀಪದ ಕಾಟಮನಲ್ಲೂರು ಬಳಿ ರಸ್ತೆ ದಾಟುತ್ತಿದ್ದರು. ಈ ವೇಳೆ ಅತಿ ವೇಗವಾಗಿ ಬಂದ ಕಾರು ಇವರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಹೇಮಂತ್ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಕೆ.ಆರ್.ಪುರಂ ಸಂಚಾರ ಠಾಣೆ ಯಲ್ಲಿ ಪ್ರಕರಣ ದಾಖಲಾಗಿದೆ.

ಸರಣಿ ಸರಗಳ್ಳತನ: ಕಳ್ಳರಿಬ್ಬರ ಸೆರೆ

• **ಬೆಂಗಳೂರು:** ಸರಣಿ ಸರಗಳ್ಳತನ ಎಸಗುತ್ತಿದ್ದ ಇಬ್ಬರು ಕುಖ್ಯಾತ ಸರಗಳ್ಳರು ಸೇರಿದಂತೆ ಒಟ್ಟು ಮೂವರು ಆರೋಪಿಗಳನ್ನು ಕೆಂಗೇರಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತರಿಂದ ಸುಮಾರು 42 ಗ್ರಾಂ ತೂಕದ ಚಿನ್ನದ ಸರಗಳನ್ನು ವಶಪಡಿಸಿಕೊಂಡಿದ್ದಾರೆ.

ಕೆ.ಜಿ.ಹಳ್ಳಿ ನಿವಾಸಿ ವಿನಯ್ (23) ಎಂಬಾತನನ್ನು ಬಂಧಿಸಲಾಗಿದೆ. ಕಳ್ಳತನದ ಮಾಲನ್ನು ಸ್ವೀಕರಿಸುತ್ತಿದ್ದ ಉಮೇದ್ ಸಲ್ಮಾ ಎಂಬ ಮಹಿಳೆಯನ್ನೂ ವಶಕ್ಕೆ ಪಡೆದಿದ್ದಾರೆ. ಕೆಂಗೇರಿ ಉಪನಗರದ 5ನೇ ಮುಖ್ಯ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವೃದ್ಧೆಯೊಬ್ಬರನ್ನು ಹಿಂಬಾಲಿಸಿದ ಇಬ್ಬರು ದುಷ್ಕರ್ಮಿಗಳು, 17 ಗ್ರಾಂ ತೂಕದ ಚಿನ್ನದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ದಾಖಲಾಗಿತ್ತು. ಕಾರ್ಯಾಚರಣೆ ನಡೆಸಿದ ಪೊಲೀಸರು, ಕೆಂಗೇರಿ ರೈಲ್ವೆ ನಿಲ್ದಾಣದ ಬಳಿ ಆರೋಪಿಗಳನ್ನು ಪತ್ತೆಹಚ್ಚಿದ್ದಾರೆ.

ಆರೋಪಿಗಳಿಂದ 1.50 ಲಕ್ಷ ರೂ. ಮೌಲ್ಯದ 17 ಗ್ರಾಂ ಚಿನ್ನವನ್ನು ವಶಪಡಿಸಿಕೊಂಡು, ಹೊಸಕೋಟೆ ಶಾಖೆಯ ಮುತ್ತೂಟ್ ಫಿನಾನ್ಸ್‌ನಲ್ಲಿ ಅಡಮಾನ ಇಟ್ಟಿದ್ದ ಚಿನ್ನವನ್ನು ಇನ್ಸ್‌ಪೆಕ್ಟರ್ ಜಗದೀಶ್ ಅವರ ತಂಡ ಪತ್ತೆಹಚ್ಚಿದೆ.

ಬಾಣಸವಾಡಿ ಪೊಲೀಸ್ ಠಾಣಾ ವ್ಯಾಪ್ತಿ ಯಲ್ಲಿ ನಡೆದ ಮತ್ತೊಂದು ಪ್ರಕರಣದಲ್ಲಿ, ವಾಯುವಿಹಾರಕ್ಕೆ ತೆರಳಿದ್ದ ರೂಪಾ ಎಂಬುವರ 27 ಗ್ರಾಂ ತೂಕದ ಸರವನ್ನು ಎಗರಿಸಿದ್ದ ಆರೋಪಿ ಯನ್ನು ಬಂಧಿಸಲಾಗಿದೆ. ಎಚ್‌ಬಿಆರ್ ಲೇಔಟ್‌ನಲ್ಲಿ ಅನುಮಾನಾಸ್ಪದವಾಗಿ ತಿರುಗಾಡುತ್ತಿದ್ದ ಅವಿನಾಶ್ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಸರಗಳ್ಳತನದ ಸತ್ಯಾಂಶ ಹೊರಬಿದ್ದಿದೆ. ಈತ ಕದ್ದ ಮಾಲನ್ನು ಬೇರೊಬ್ಬರಿಗೆ ಮಾರಾಟ ಮಾಡಿದ್ದು, ಪೊಲೀಸರು ಆತನ ಮಾಹಿತಿಯ ಮೇರೆಗೆ 3.50 ಲಕ್ಷ ರೂ. ಮೌಲ್ಯದ 25 ಗ್ರಾಂ ಚಿನ್ನದ ಸರವನ್ನು ವಶಪಡಿಸಿಕೊಂಡಿದ್ದಾರೆ. ಪ್ರಕರಣದಲ್ಲಿ ಭಾಗಿ ಯಾಗಿರುವ ಮತ್ತೊಬ್ಬ ಆರೋಪಿಗಾಗಿ ಪೊಲೀಸರು ಹುಡುಕಾಟ ಮುಂದುವರೆಸಿದ್ದಾರೆ.

ಫೆಡರಲ್ ಬ್ಯಾಂಕ್ ಲಾಭಾಂಶದಲ್ಲಿ ಶೇ.2 ಹೆಚ್ಚಳ

• **ಬೆಂಗಳೂರು/ಮುಂಬೈ:** ಫೆಡರಲ್ ಬ್ಯಾಂಕ್ 2025-26ರ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಭರ್ಜರಿ ಆರ್ಥಿಕ ಸಾಧನೆ ದಾಖಲಿಸಿದೆ. ಮಾ.31 ಕೊನೆಗೊಂಡ ಅವಧಿಯಲ್ಲಿ ಬ್ಯಾಂಕಿನ ನಿವ್ವಳ ಲಾಭ 1,259 ಕೋಟಿ ರೂ.ತಲುಪಿದೆ. ಕಳೆದ ವರ್ಷದ ಹೋಲಿಕೆಯಲ್ಲಿ ಸುಮಾರು ಶೇ.2 ಏರಿಕೆ ಕಂಡಿದೆ.

ಬ್ಯಾಂಕ್ ತನ್ನ ಕಾರ್ಯತಂತ್ರದ ದಿಕ್ಕಿಗೆ ಅನುಗುಣವಾಗಿ ಲಾಭಾಂಶದ ವಿಸ್ತರಣೆ, ಶುಲ್ಕದ ಆದಾಯದ ಹೆಚ್ಚಳ ಹಾಗೂ ಆಸ್ತಿ ಗುಣಮಟ್ಟದಲ್ಲಿ ಗಮನಾರ್ಹ ಸುಧಾರಣೆ ಸಾಧಿಸಿದೆ. ಸಂಪೂರ್ಣ ಆರ್ಥಿಕ ವರ್ಷದ ಒಟ್ಟು ನಿವ್ವಳ ಲಾಭ 4,117 ಕೋಟಿ ರೂ.ದಾಟಿದೆ.

ಇಎಎಸ್‌ಎ ಅನುಪಾತವು ಶೇ.32.94ಕ್ಕೆ ಏರಿಕೆಯಾಗಿ 1 ಲಕ್ಷ ಕೋಟಿ ರೂ.ಗಡಿ ದಾಟಿದರೆ, ಅನಿವಾಸಿ ಭಾರತೀಯರ ಠೇವಣಿಗಳೂ 1.02 ಲಕ್ಷ ಕೋಟಿ ರೂ. ತಲುಪಿವೆ. ಒಟ್ಟು ಠೇವಣಿಗಳು 3.13 ಲಕ್ಷ ಕೋಟಿ ರೂ.ಹಾಗೂ ಒಟ್ಟು ಸಾಲ ವಿತರಣೆಯು 2.68 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ.

ಆಸ್ತಿ ಗುಣಮಟ್ಟದಲ್ಲೂ ಬ್ಯಾಂಕ್ ಉತ್ತಮ ಪ್ರದರ್ಶನ ನೀಡಿದೆ. 1.62 ಮತ್ತು ಶೇ.0.20 ಎಂಬ ದಾಖಲೆಯ ಕನಿಷ್ಠ ಮಟ್ಟ ತಲುಪಿವೆ. ಶೇ.1.36, ಶೇ.3.74 ಮತ್ತು ಟೈಲ ಶೇ. 13.69 ಆಗಿ ಸುಧಾರಣೆ ಕಂಡಿದೆ. ಈ ತ್ರೈಮಾಸಿಕದಲ್ಲಿ ಬ್ಯಾಂಕ್ 39 ಹೊಸ ಶಾಖೆಗಳನ್ನು ಆರಂಭಿಸಿದ್ದು, ದತ್ತಾಂಶ ಆಧಾರಿತ ವಿಸ್ತರಣೆಯ ಮೂಲಕ ಕಾರ್ಯಾಚರಣಾ ದಕ್ಷತೆಯನ್ನು ಹೆಚ್ಚಿಸಿದೆ. ಜಾಗತಿಕ ಅನಿಶ್ಚಿತತೆಗಳ ನಡುವೆಯೂ, ಸಮತೋಲಿತ ಅಪಾಯ ನಿರ್ವಹಣೆಯಿಂದ ಬ್ಯಾಂಕ್ ಸ್ಥಿರ ಬೆಳವಣಿಗೆಯನ್ನು ಮುಂದುವರೆಸಿದೆ.

ಕೆಎಸ್‌ಡಿಎಲ್‌ಗೆ ₹507 ಕೋಟಿ ನಿವ್ವಳ ಲಾಭ

ಕಾರ್ಮಿಕ ಸಚಿವ ಎಂಬಿಪಿಗೆ ಅಭಿನಂದನೆ

• **ಬೆಂಗಳೂರು:** ಸರಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ (ಕೆಎಸ್‌ಡಿಎಲ್) 2025-26ನೇ ಸಾಲಿನಲ್ಲಿ ಇದೇ ಮೊಟ್ಟಮೊದಲ ಬಾರಿಗೆ 2,016 ಕೋಟಿ ರೂ. ವಹಿವಾಟು ನಡೆಸಿ, 507 ಕೋಟಿ ರೂ. ನಿವ್ವಳ ಲಾಭ ದಾಖಲಿಸಿರುವುದು ಅಭೂತಪೂರ್ವ ಸಾಧನೆ ಯಾಗಿದೆ. ಇದರ ಶ್ರೇಯಸ್ಸು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಅವರ ದೂರ ಗಾಮಿ ಚಿಂತನೆಗಳಿಗೆ ಸಲ್ಲುತ್ತದೆ. ಇದಕ್ಕಾಗಿ ಅವರು ಅಭಿನಂದನಾರ್ಹರು ಎಂದು ಸರಕಾರಿ ಸಾಬೂನು ಕಾರ್ಖಾನೆ ಕಾರ್ಮಿಕರ ಸಂಘವು ಹೇಳಿದೆ.

ತಮ್ಮ ಅಧ್ಯಕ್ಷ ಮೈಕೆಲ್ ಫರ್ನಾಂಡಿಸ್ ನೇತೃತ್ವದಲ್ಲಿ ಸಚಿವರನ್ನು ಗುರುವಾರ ಇಲ್ಲಿನ ಅವರ ನಿವಾಸದಲ್ಲಿ ಭೇಟಿಯಾದ ಸಂಘದ ಪದಾಧಿಕಾರಿಗಳು, ಇದಕ್ಕಾಗಿ ಸಚಿವರನ್ನು ಅಭಿನಂದಿಸಿತು.

ಫರ್ನಾಂಡಿಸ್ ಮಾತನಾಡಿ, ಸಾಬೂನು ಕಾರ್ಖಾನೆಯು ತನ್ನ 110 ವರ್ಷಗಳ ಇತಿಹಾಸದಲ್ಲಿ ಕಳೆದ ಹಣಕಾಸು ವರ್ಷ ದಲ್ಲಿ ಇದೇ ಮೊದಲ ಬಾರಿಗೆ 2 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ವಹಿವಾಟು ನಡೆಸಿದ್ದು, 47,494 ಮೆಟ್ರಿಕ್ ಟನ್ ಉತ್ಪಾದನೆ ದಾಖಲಿಸಿದೆ. ಇದು ಸಾರ್ವಕಾಲಿಕ ದಾಖಲೆಯಾಗಿದೆ. ಇದಕ್ಕೆ ಪಾಟೀಲರ



ದೂರದೃಷ್ಟಿಯ ಚಿಂತನೆಯೇ ಕಾರಣವಾಗಿದೆ. ಇವರ ಜತೆಗೆ ಸಂಸ್ಥೆಯ ಅಧ್ಯಕ್ಷ ಸಿ. ಎಸ್. ಅಪ್ಪಾಜಿ ನಾಡಗೌಡರ ಕೊಡುಗೆಯೂ ಇದೆ. ಇದಕ್ಕೆ ಕಾರಣ ರಾಗಿರುವ ಸಚಿವರು, ಅಧ್ಯಕ್ಷರು, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು ಸಲ್ಲುತ್ತವೆ ಎಂದಿದ್ದಾರೆ.

ಈಗ ಸಿಬ್ಬಂದಿ ಸಂಖ್ಯೆ ಕಡಿಮೆ ಇದೆ. ಆದ್ದರಿಂದ ಸಂಸ್ಥೆಯಲ್ಲಿ ನೇರ ನೇಮಕಾತಿ ಮೂಲಕ ಖಾಲಿ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಬೇಕು. ಇದರಿಂದ ಕಾರ್ಖಾನೆಯ ಸಾಧನೆ ಮತ್ತಷ್ಟು ಎತ್ತರಕ್ಕೆ ಬೆಳೆಯಲಿದೆ. ಈ ನಿಟ್ಟಿನಲ್ಲಿ ಸಚಿವ ಪಾಟೀಲರ ಸಹಕಾರ ಮತ್ತು ಸಲಹೆಗಳು ಅತ್ಯಗತ್ಯವಾಗಿವೆ ಎಂದು ಅವರು ಕಾರ್ಮಿಕರ ಸಂಘದ ಪರವಾಗಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಸಂಸ್ಥೆಯ ಹಲವು ಪದಾಧಿಕಾರಿಗಳಿದ್ದರು.

ಇಂದು ನಗರದಲ್ಲಿ...

- ಬುದ್ಧ ಜಯಂತಿ ಉತ್ಸವ, ಸ್ಥಳ: ಮಹಾ ಬೋಧಿ ಸೊಸೈಟಿ, ಬೆಳಗ್ಗೆ 10
- ಸಮೃದ್ಧ ಸಾಹಿತ್ಯದಿಂದ ಪುಸ್ತಕ ಲೋಕಾರ್ಪಣೆ, ಸ್ಥಳ: ವಾಡಿಯಾ ಸಭಾಂಗಣ, ಬೆಳಗ್ಗೆ 10.30
- ಗ್ರೇಟರ್ ಬೆಂಗಳೂರು ಜನತಾದಳ ಜಾತ್ಯತೀತ ಪಕ್ಷದ ವತಿಯಿಂದ ವಿಶ್ವ ಕಾರ್ಮಿಕರ ದಿನಾಚರಣೆ, ಸ್ಥಳ: ಜೆಪಿ ಭವನ, ಜನತಾದಳ ಜಾತ್ಯತೀತ ಪಕ್ಷದ ಕಚೇರಿ, ಬೆಳಗ್ಗೆ 11:30
- ಪಿ.ಜಿ.ಗೌತಮ್ ವರ್ಮ ಅವರ ಜನ್ಮದಿನಾಚರಣೆ, ಸ್ಥಳ: ಜಯಂತ್ ಕನ್ವೆನ್ಷನ್ ಹಾಲ್, ಸಂಜೆ 5



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	8	6	1	1	13	+1.043
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	9	6	3	0	12	+0.832
ರಾಜಸ್ಥಾನ	9	6	3	0	12	+0.617
ಗುಜರಾತ್	9	5	4	0	10	-0.192
ಚೆನ್ನೈ	8	3	5	0	6	-0.121
ದಿಲ್ಲಿ	8	3	5	0	6	-1.060
ಕೆಕೆಆರ್	8	2	5	1	5	-0.751
ಮುಂಬೈ	7	2	5	0	4	-0.736
ಲಖನೌ	8	2	6	0	4	-1.106

ಬೆಂಗಳೂರಿಗೆ ಸೋಲಿನಾಘಾತ | ರಾಯಲ್ ಓಟಕ್ಕೆ ತಡೆ | ಗಿಲ್, ಬಟ್ಲರ್, ಹೋಲ್ಡರ್ ಮಿಂಚಿನಾಟ

ಗುಜರಾತ್ ಆಟಕ್ಕೆ ಬಸವಳಿದ ಆರ್‌ಸಿಬಿ

• **ಅಹಮದಾಬಾದ್:** ಬೆಂಗಳೂರು ತಂಡದ ರಾಯಲ್ ಓಟಕ್ಕೆ ಗುಜರಾತ್ ಟೈಟಾನ್ಸ್ ಬ್ರೇಕ್ ಹಾಕಿದೆ. ವೇಗಿ ಅರ್ಷದ್ ಖಾನ್, ಜೇಸನ್ ಹೋಲ್ಡರ್ ಅವರ ಮಾರಕ ಬೌಲಿಂಗ್ ದಾಳಿಗೆ ಕುಸಿದ ಆರ್‌ಸಿಬಿ, ಗಿಲ್ ಹಾಗೂ ಬಟ್ಲರ್ ಅಬ್ಬರದ ಮುಂದೆ ಮಂಕಾಯಿತು. ಅಹಮದಾಬಾದ್‌ನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಶುಭಮನ್ ಪಡೆ 4 ವಿಕೆಟ್‌ಗಳಿಂದ ಗೆದ್ದಿದೆ.

ಬ್ಯಾಟಿಂಗ್ ಆಹ್ವಾನ ಪಡೆದ ಆರ್‌ಸಿಬಿ 19.2 ಓವರ್‌ಗಳಲ್ಲಿ 155 ರನ್‌ಗೆ ಪತನಗೊಂಡಿತು. ಪಡಿಕ್ಕಲ್ 40, ಕೊಹ್ಲಿ 28 ರನ್‌ಗಳಿಸಿದರು. ಗುಜರಾತ್ ಪರ ಅರ್ಷದ್ 3, ಹೋಲ್ಡರ್ ಮತ್ತು ರಶೀದ್ 4 ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಗುಜರಾತ್ 15.5 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಗುರಿ ಮುಟ್ಟಿತು.

ಕೊಹ್ಲಿಯಿಂದ ಅಬ್ಬರದ ಆರಂಭ: ಟಾಸ್ ಗೆದ್ದ ಗುಜರಾತ್ ಬೆಂಗಳೂರಿಗೆ ಬ್ಯಾಟಿಂಗ್ ಆಹ್ವಾನ ಕೊಟ್ಟಿತು. ಪಾಟಿದಾರ್ ಪಡೆ ಸಜ್ಜಾಯಿತು. ಮೊದಲಿಗೆ ವಿರಾಟ್ ಕೊಹ್ಲಿ ಅವರ ಬೌಂಡರಿಗಳ ಅಬ್ಬರ ಶುರುವಾಯಿತು. ಮೊದಲನೇ ಓವರ್ ನಿಂದಲೇ ದಂಡಿಸುವ ಮನಸ್ಥಿತಿ ಕೊಹ್ಲಿ ಬ್ಯಾಟನಿಂದ ಗೋಚರಿಸಿದ್ದೇ ತಡ ಇತ್ತ ಜೇಕಬ್ ಬ್ಯಾಥಲ್ ಸಿರಾಜ್‌ಗೆ ಕ್ಯಾಚಿತ್ತರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಗಿಳಿದ ದೇವದತ್ತ ಪಡಿಕ್ಕಲ್ ಕೂಡ ಉತ್ತಮ ಬ್ಯಾಟಿಂಗ್ ಶುರು ಮಾಡಿದರು. ಕೊಹ್ಲಿ ಬೌಂಡರಿಗಳ ಅಬ್ಬರ. ಸಿರಾಜ್ ಎಸೆದ ಓವರ್‌ನಲ್ಲಿ ಒಟ್ಟು 5 ಬೌಂಡರಿ ಬಾರಿಸಿದರು. ಆದರೆ ಮುಂದಿನ ಓವರ್ ನಲ್ಲೇ ವಿರಾಟ್(28; 13ಎ, 1ಸಿ) ರಬಾಡಗೆ ಕ್ಯಾಚಾದರು. ಪಾಟಿದಾರ್ ಮತ್ತು ಪಡಿಕ್ಕಲ್ ಕೊಂಚ ಹೊತ್ತು ಸೆಟ್ ಆಗುತ್ತಿದ್ದಂತೆ ಪವರ್ ಪ್ಲೇ ಮುಕ್ತಾಯಗೊಂಡಿತು. ಆರ್‌ಸಿಬಿ 59/2. ಅಂತಿಮ ಓವರ್‌ಗಳಲ್ಲಿ ಇಂಪ್ಯಾಕ್ಟ್ ಆಟಗಾರರಾಗಿ ವೆಂಕಟೇಶ್ ಅಯ್ಯರ್ ಬಂದರು. ಶೇಫರ್ಡ್ 17 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ವೆಂಕಟೇಶ್ ನಿಧಾನಗತಿ ಬ್ಯಾಟಿಂಗ್ ಶುರು ಮಾಡಿದರು. ಬ್ಯಾಟಿಂಗ್ ಗಿಳಿದ ವೇಗಿ ಭುವನೇಶ್ವರ್ ಕುಮಾರ್ ಎರಡು ಬೌಂಡರಿ ಬಾರಿಸುವಷ್ಟರಲ್ಲಿ 18 ಓವರ್‌ಗಳು ಮುಕ್ತಾಯಗೊಂಡವು. 15 ಬಾಲ್‌ಗಳಲ್ಲಿ 12 ರನ್ ಗಳಿಸಿದ ವೆಂಕಟೇಶ್ ಅಯ್ಯರ್ ಕ್ಯಾಚ್ ಆದರು. ಹ್ಯಾಜೆಲ್ವುಡ್ ಮೊದಲ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದ ನಂತರ ಆರ್‌ಸಿಬಿ ಪತನಗೊಂಡಿತು. 19.2 ಓವರ್‌ಗಳಲ್ಲಿ 155 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರ್

ಆರ್‌ಸಿಬಿ 19.2 ಓವರ್‌ಗಳಲ್ಲಿ 155/10: ಪಡಿಕ್ಕಲ್ 40, ಕೊಹ್ಲಿ 28; ಅರ್ಷದ್ 22/3
ಗುಜರಾತ್ 15.5 ಓವರ್‌ಗಳಲ್ಲಿ 156/6: ಗಿಲ್ 43, ಬಟ್ಲರ್ 39; ಭುವನೇಶ್ವರ್ 28/3



ಕುಸಿದ ಆರ್‌ಸಿಬಿ

ಉತ್ತಮ ಆರಂಭ ಪಡೆದಿದ್ದ ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲಿ ಭಾರೀ ಕುಸಿತ ಕಂಡಿತು. ತಂಡ 79 ರನ್ ಆಗುವಷ್ಟರಲ್ಲಿ ಮೂರನೇ ವಿಕೆಟ್ ಕಳೆದುಕೊಂಡಿತು. ನಾಯಕ ರಜತ್ ಪಾಟಿದಾರ್ ಬೌಂಡರಿ-ಸಿಕ್ಸರ್ ಬಾರಿಸುತ್ತಲೇ ವಿವಾದಿತ ಕ್ಯಾಚ್‌ಗೆ ಬಲಿಯಾದರು. ಒತ್ತಡಕ್ಕೆ ಸಿಲುಕಿಕೊಂಡ ಆರ್‌ಸಿಬಿಗೆ ಪಡಿಕ್ಕಲ್ ಆಸರೆಯಾದರು. ಮಧ್ಯಮ ಓವರ್‌ಗಳಲ್ಲಿ ಸೆಟ್ ಆಗುವ ನಿರೀಕ್ಷೆಯಿಂದಿದ್ದ ಅವರು, ಒಂದೆರಡು ಆಕರ್ಷಕ ಬೌಂಡರಿಗಳನ್ನೂ ಬಾರಿಸಿದರು. ಜಿತೇಶ್ ಶರ್ಮ ಮತ್ತೊಮ್ಮೆ ವೈಫಲ್ಯ ಅನುಭವಿಸಿದರು. ಸ್ಫೋಟಕ ಬ್ಯಾಟಿಗ ಟಿಮ್ ಡೇವಿಡ್ ಆಟ 9 ರನ್‌ಗೆ ಸೀಮಿತವಾಗಿತ್ತು. ಕೃಣಾಲ್ ಪಾಂಡ್ಯ 4 ರನ್‌ಗೆ ವಿಕೆಟ್ ಒಪ್ಪಿಸಿದರು. ಅಲ್ಲಿ ಪಡಿಕ್ಕಲ್‌ಗೆ ಯಾರೊಬ್ಬರೂ ಸಾಥ್ ಕೊಡಲಿಲ್ಲ. ಮಧ್ಯಮ ಓವರ್ ತನಕ ಬ್ಯಾಟಿಂಗ್ ಮಾಡಿದ ಪಡಿಕ್ಕಲ್ 40 ರನ್‌ಗೆ ನಿರ್ಗಮಿಸಿದರು. ಮಧ್ಯಮ ಓವರ್‌ಗಳಲ್ಲಿ ಆರ್‌ಸಿಬಿಯ ಬ್ಯಾಟಿಂಗ್ ಪಡೆಯೇ ಮುರಿದು ಬಿತ್ತು. ಒಟ್ಟು 76 ರನ್ ಗಳಿಸಿದ ಆರ್‌ಸಿಬಿ ಮಧ್ಯಮ ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡಿತು.

ಗುಜರಾತ್ ಅಬ್ಬರ

ಗುರಿ ಬೆನ್ನತ್ತಿದ ಗುಜರಾತ್‌ಗೆ ಸ್ಫೋಟಕ ಆರಂಭ ಸಿಕ್ಕಿತು. ತಮ್ಮ ಸ್ವಾಭಾವಿಕ ಆಟಕ್ಕೂ ಮೀರಿ ಬಿರುಸಿನ ಬ್ಯಾಟಿಂಗ್ ಮಾಡಿದ ಗಿಲ್ ಸೆಟ್ ಆಗುವ ನಿರೀಕ್ಷೆಗೆ ಬೀಳದೆ ದಂಡಿಸಿದರು. ಆದರೆ ಮತ್ತೊಂದು ಬದಿಯಲ್ಲಿ ಸ್ಫೋಟಕ ಬ್ಯಾಟರ್ ಸುದರ್ಶನ್ 6 ರನ್‌ಗೆ ಕ್ಯಾಚಿತ್ತರು. ಮೂರನೇ ಕ್ರಮಾಂಕದಲ್ಲಿ ಬಂದ ಜಾಸ್ ಬಟ್ಲರ್ ಕೂಡ ಗಿಲ್‌ನೊಂದಿಗೆ ದಂಡಿಸುವ ಯೋಜನೆಯಲ್ಲಿ ಸೇರಿಕೊಂಡರು. ಪವರ್‌ಪ್ಲೇ ಉದ್ದಕ್ಕೂ ಇಬ್ಬರೂ ಆರ್‌ಸಿಬಿ ಬೌಲಿಂಗ್ ಪಡೆಯ ಬೆವರಿಳಿಸಿದರು. ಆರಂಭಿಕ ಓವರ್‌ಗಳಲ್ಲಿ ಗುಜರಾತ್ 69 ರನ್‌ಗಳಿಸಿತು. ಭುವನೇಶ್ವರ್ ಕುಮಾರ್ 2 ವಿಕೆಟ್ ಕಿತ್ತರು. ಮಧ್ಯಮ ಓವರ್‌ಗಳಲ್ಲಿ ಬಟ್ಲರ್ ಅಬ್ಬರ. ಸಿಕ್ಸರ್ ಮತ್ತು ಬೌಂಡರಿಗಳೊಂದಿಗೆ ಅಬ್ಬರಿಸಿದ ಅವರಿಗೆ ಗಿಫ್ಟ್ ಕೊಟ್ಟ ಜಿತೇಶ್ ಕ್ಯಾಚ್ ಬಿಟ್ಟರು.

ಆರ್‌ಸಿಬಿ ಕಂಬ್ಯಾಕ್

19 ಬಾಲ್‌ಗಳಲ್ಲಿ ಬಾಸಿನೆತ್ತರದ 4 ಸಿಕ್ಸರ್, 2 ಸ್ಫೋಟಕ ಬೌಂಡರಿ ಬಾರಿಸಿ ಬಟ್ಲರ್ ಪೆವಿಲಿಯನ್ ಹೊರಟರು. ಆದರೆ ಆರ್‌ಸಿಬಿಗೆ ಗೆಲುವು ದೂರವಿತ್ತು. ಗುಜರಾತ್‌ಗೆ ಉಳಿದ ಬಾಲ್‌ಗಿಂತಲೂ ಕಡಿಮೆ ರನ್ ಬೇಕಿದ್ದವು. 11ನೇ ಓವರ್‌ವರೆಗೂ ಗುಜರಾತ್ ಗೆಲುವಿನತ್ತ ಸಾಗಿತ್ತು. 11ನೇ ಓವರ್ ಮಾಡಲು ಬಂದ ರೋಮಾರಿಯೊ ಶೇಫರ್ಡ್ ಸರಸರನೇ 2 ವಿಕೆಟ್ ಕಿತ್ತರು. ಮಧ್ಯಮ ಕ್ರಮಾಂಕದಲ್ಲಿ ವಾಷಿಂಗ್ಟನ್ ಸುಂದರ್ 12 ರನ್‌ಗೆ, ಶಾರುಖ್ ಖಾನ್ 8 ರನ್‌ಗೆ ವಿಕೆಟ್ ಒಪ್ಪಿಸಿದರು. ರಾಹುಲ್ ತೇವಾಟಿಯ, ಜೇಸನ್ ಹೋಲ್ಡರ್ ಮೇಲೆ ಪಂದ್ಯ ಅವಲಂಬಿತವಾಯಿತು. 9 ಓವರ್‌ಗಳಲ್ಲಿ 34 ರನ್ ಮಾತ್ರ ಬೇಕಾಗಿದ್ದವು. ಮುಂದಿನ ಓವರ್‌ನಲ್ಲಿ ಮತ್ತೆರಡು ಬೌಂಡರಿ ಬಾರಿಸಿದ ತೇವಾಟಿಯ(27*) ಪಂದ್ಯ ಕಸಿದರು. ಉಳಿದ ರನ್‌ಗಳನ್ನು ಬಾರಿಸಿ ಪಂದ್ಯ ಗೆಲ್ಲಿಸಿದರು.

ಕಿರುಸುದ್ದಿ

ಏಕದಿನ ತಂಡದಿಂದ ಪಂತ್ ಔಟ್?

• **ಮುಂಬೈ:** ಬ್ಯಾಟಿಂಗ್ ಲಯಕ್ಕಾಗಿ ಪರದಾಡುತ್ತಿರುವ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್‌ಗೆ ಭಾರೀ ಹಿನ್ನಡೆಯಾಗಿದೆ. ಮುಂಬರಲಿರುವ ಏಕದಿನ ಪಂದ್ಯಗಳಲ್ಲಿ ಅವರನ್ನು ಕೈಬಿಡಲು ಚಿಂತನೆ ನಡೆದಿದೆ. ಅಜಿತ್ ಅಗರ್ಕರ್ ಈ ಬಗ್ಗೆ ಚಿಂತನೆ ನಡೆಸುತ್ತಿದ್ದು, ಅವರ ಬದಲಿಗೆ ಸಂಜು ಸ್ಯಾಮ್ಸನ್ ಅವರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ ಎಂದು ವರದಿಯಾಗಿದೆ.



ಕಳೆದ ಎರಡು ಆವೃತ್ತಿಗಳಿಂದಲೂ ರಿಷಭ್ ಪಂತ್ ಅಷ್ಟೊಂದು ಪ್ರಭಾವಿ ಪ್ರದರ್ಶನ ನೀಡಿಲ್ಲ, ಈ ಆವೃತ್ತಿಯ ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿರುವ ಅವರು, ಲಯದ ಹುಡುಕಾಟದಲ್ಲಿದ್ದಾರೆ. ಈ ನಿಟ್ಟಿನಲ್ಲಿ ಅವರ ಕೈಬಿಡಲಾಗುವುದು ಎಂದು ಹೇಳಲಾಗುತ್ತಿದೆ. ಅದೇ ಮತ್ತೊಂದು ಕಡೆ ಟಿ20 ವಿಶ್ವಕಪ್ ಹಾಗೂ ನಡೆಯುತ್ತಿರುವ ಐಪಿಎಲ್‌ನಲ್ಲಿ ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಭರ್ಜರಿ ಪ್ರದರ್ಶನ ನೀಡುತ್ತಿದ್ದಾರೆ. ಪಂತ್ ಬದಲಿಗೆ ಸಂಜುಗೆ ಅವಕಾಶ ನೀಡುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ವಾಸ್ತವವಾಗಿ ಏಕದಿನ ತಂಡದಲ್ಲಿ ರಿಷಭ್ ಪಂತ್ ರಾಹುಲ್ ಅವರ ಬ್ಯಾಕಪ್ ಆಗಿದ್ದರು.

ಜೂಡೋದಲ್ಲಿ ಅಧಿಕ ಪದಕದ ಗುರಿ: ಯತೀಶ್

• **ಮಂಗಳೂರು:** ಜೂಡೋ ಕ್ರೀಡೆಯ ಅಭಿವೃದ್ಧಿಗಾಗಿ ಕಾರ್ಯತಂತ್ರ ರೂಪಿಸಿ, ಅದನ್ನು ಸರಿಯಾದ ಹಾದಿಗೆ ಮರಳಿಸುವ ನಿಟ್ಟಿನಲ್ಲಿ ತಳಮಟ್ಟದಲ್ಲಿ ವಿವಿಧ ಉಪಕ್ರಮಗಳನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಅಲ್ಲದೆ ಜೂಡೋ ಸ್ಪೋರ್ಟ್ಸ್‌ನಲ್ಲಿ ಭಾರತಕ್ಕೆ ಗರಿಷ್ಠ ಪದಕ ಗೆಲ್ಲಿಸುವ ಗುರಿಯೊಂದಿಗೆ ಆಂದೋಲನ ಆರಂಭಿಸಲಾಗಿದೆ ಎಂದು ಅಂತಾರಾಷ್ಟ್ರೀಯ ರೆಫ್ರಿ ಮತ್ತು ಕರ್ನಾಟಕ ಸ್ಟೇಟ್ ಜೂಡೋ ಸ್ಪೋರ್ಟ್ಸ್ ಎಸೋಸಿಯೇಶನ್ ಅಧ್ಯಕ್ಷ ಯತೀಶ್ ನಾರಾಯಣ ಬಂಗೇರ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ 2030ರಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು 2036ರಲ್ಲಿ ನಡೆಯುವ ಒಲಂಪಿಕ್ಸ್‌ನಲ್ಲಿ ಭಾರತ ತಂಡ ಜೂಡೋ ಸ್ಪೋರ್ಟ್ಸ್‌ನಲ್ಲಿ ಪದಕ ಗೆಲ್ಲುವುದಕ್ಕೆ ಪೂರಕವಾಗಿ ಕರ್ನಾಟಕವನ್ನು ದೇಶದ ಜೂಡೋದ ಶಕ್ತಿಕೇಂದ್ರವಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರಕ್ಕೆ ಸಮಗ್ರ ಪ್ರಸ್ತಾವನೆಯೊಂದನ್ನು ಸಲ್ಲಿಸಲಾಗಿದೆ ಎಂದರು.

» ಕರ್ನಾಟಕ ಜೂಡೋ ಶಕ್ತಿಯಾಗಿಸಲು ಹೊಸ ಆಂದೋಲನ
» ಕ್ರೀಡಾಪಟುಗಳಿಗೆ ವಿಶೇಷ ತರಬೇತಿ ಯೋಜನೆ

ವಿವಿಧೆಡೆ ತರಬೇತಿ ಕೇಂದ್ರ: ಉಡುಪಿ-ಮಂಗಳೂರು ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಅತ್ಯಾಧುನಿಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಹಾಲಿ ಕ್ರೀಡಾ ಪಟುಗಳ ಆ ವೇಳೆ ನಿವೃತ್ತಿ ಅಂಚಿಗೆ ಬರುವುದರಿಂದ ಹೊಸದಾಗಿ ಕ್ರೀಡಾಪಟುಗಳಿಗೆ ತರಬೇತಿ ನೀಡಿ ಸಿದ್ಧಪಡಿಸಲಾಗುವುದು ಎಂದರು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಯುವ ಕ್ರೀಡಾಪಟುಗಳಿಗೆ ತರಬೇತಿ., ಕಾರ್ಪೊರೇಟ್ ಪ್ರಾಯೋಜಕತ್ವ ಮತ್ತು ಕ್ರೀಡಾಪಟುಗಳ ಕಲ್ಯಾಣ, ಅಡಾಪ್ಟ್ ಎ ಚಾಂಪಿಯನ್, ಸಿಎಸ್‌ಆರ್ ಉಪಕ್ರಮಗಳ ಮೂಲಕ ಕ್ರೀಡಾಪಟುಗಳ ಪೋಷಣೆ, ಸಲಕರಣೆ ಮತ್ತು ಕ್ರೀಡಾಪಟುಗಳ ಉದ್ಯೋಗ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುವುದು. ಈ ನಿಟ್ಟಿನಲ್ಲಿ ಎಲ್ಲ ಜಿಲ್ಲೆಗಳಿಗೆ ಭೇಟಿ ನೀಡಲಾಗುವುದು ಎಂದವರು ತಿಳಿಸಿದರು.

ರಿಯಾನ್ ಪರಾಗ್‌ಗೆ ದಂಡ

• **ಮುಂಬೈ:** ಪಂದ್ಯದ ವೇಳೆ ವ್ಯಾಪಿಂಗ್ ಮಾಡಿರುವ ರಿಯಾನ್ ಪರಾಗ್‌ಗೆ ಭಾರತೀಯ ಕ್ರಿಕೆಟ್ ಸಂಸ್ಥೆ ದಂಡ ವಿಧಿಸಿದೆ. ಇ-ಸಿಗರೇಟ್ ಸೇದಿದ ಬೆನ್ನಲ್ಲೇ ರಾಜಸ್ಥಾನ ರಾಯಲ್ಸ್ ತಂಡದ ನಾಯಕನಿಗೆ ಪಂದ್ಯದ ಶೇ. 25ರಷ್ಟು ಮ್ಯಾಚ್ ಶುಲ್ಕವನ್ನು ದಂಡವನ್ನಾಗಿ ವಿಧಿಸಿದೆ.




ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದ ವೇಳೆ ಅವರು ಡ್ರೆಸ್ಸಿಂಗ್ ರೂಮ್‌ನಲ್ಲಿ ಇ-ಸಿಗರೇಟ್ ಸೇದುವ ದೃಶ್ಯ ಸೆರೆಯಾಗಿತ್ತು. ಇದು ಐಪಿಎಲ್ ಮಾನದಂಡಗಳ ಆರ್ಟಿಕಲ್ 2.21ರ ಪ್ರಕಾರ ಅಪರಾಧವಾಗಿದೆ.

ಪಂದ್ಯ ವೀಕ್ಷಿಸಿದ ದಿಲ್ಲಿ ಅಭಿಮಾನಿಗಳು ಅಪಘಾತದಲ್ಲಿ ನಿಧನ

• **ಹೊಸದಿಲ್ಲಿ:** ದಿಲ್ಲಿ ಹಾಗೂ ಬೆಂಗಳೂರು ನಡುವಿನ ಪಂದ್ಯ ವೀಕ್ಷಣೆ ಮಾಡಿಕೊಂಡು ಮನೆಗೆ ಹೊರಡುತ್ತಿದ್ದ ಕ್ಯಾಪಿಟಲ್ಸ್ ಅಭಿಮಾನಿಗಳಿಬ್ಬರು ಅಪಘಾತದಲ್ಲಿ ಮೃತಪಟ್ಟರು. ದಿಲ್ಲಿಯಲ್ಲಿ ನಡೆದಿದ್ದ ಬೆಂಗಳೂರು ವಿರುದ್ಧದ ಪಂದ್ಯವನ್ನು ದಿಲ್ಲಿ ಕ್ಯಾಪಿಟಲ್ಸ್ ತಂಡದ ಅಭಿಮಾನಿಗಳಾದ ಅಭವ್(14) ಹಾಗೂ ಯಶ್ಯಾ(20) ವೀಕ್ಷಣೆಗೆ ಬಂದಿದ್ದರು. ಮರಳಿ ಮನೆಗೆ ಹೋಗುವಾಗ ಬೈಕು ಮತ್ತು ಟ್ರಕ್ಕಿನ ನಡುವೆ ಅಪಘಾತವಾಗಿದೆ. ಇದೇ ವೇಳೆ ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರನ್ನು ಸ್ಥಳೀಯ ಆಸ್ಪತ್ರೆಗೆ ಸೇರಿಸಲಾಗಿದೆ. ಚಿಕಿತ್ಸೆ ಫಲಿಸದೆ ಇಬ್ಬರೂ ಸಾವಿಗೀಡಾಗಿದ್ದಾರೆ. ದಿಲ್ಲಿ ಕ್ಯಾಪಿಟಲ್ಸ್ ಸೇರಿದಂತೆ ಎಲ್ಲಾ ಫ್ರಾಂಚೈಸಿಗಳೂ ಇಬ್ಬರ ಸಾವಿಗೆ ಸಂತಾಪ ಸಲ್ಲಿಸಿವೆ.

ಮುಂಬೈಗೆ ಹೆಡ್‌ಏಕ್



ಸಂಕ್ಷಿಪ್ತ ಸ್ಕೋರ್

ಮುಂಬೈ 20 ಓವರ್‌ಗಳಲ್ಲಿ 243/5: ರಯಾನ್ 123★, ಪಾಂಡ್ಯ 31; ಪ್ರಫುಲ್ 54/2
ಹೈದರಾಬಾದ್ 18.4 ಓವರ್‌ಗಳಲ್ಲಿ 249/4: ಹೆಡ್ 76, ಕ್ಲಾಸೆನ್ 65★, ಸಲೀಲ್ 30★; ಫಜಲ್‌ಫರ್ 51/2

• **ಮುಂಬೈ:** ವಿಶ್ವದ ನಂಬರ್ 1 ಬೌಲರ್ ಜಸ್‌ಪ್ರೀತ್ ಬೂಮ್ರಾ, ಭರವಸೆಯ ವೇಗಿಗಳಾದ ಟ್ರೆಂಟ್ ಬೋಲ್ಟ್, ಹಾರ್ದಿಕ್ ಪಾಂಡ್ಯ ಅಂಥ ಮಹಾ ಬೌಲರ್‌ಗಳನ್ನು ಹೊಂದಿದ್ದ ಮುಂಬೈ ಇಂಡಿಯನ್ಸ್ ತಂಡವು 244 ರನ್‌ಗಳನ್ನು ಉಳಿಸಿಕೊಳ್ಳಲು ವಿಫಲವಾಗಿದ್ದು, ಸನ್‌ರೈಸರ್ಸ್ ಹೈದರಾಬಾದ್ ತಂಡ 6 ವಿಕೆಟ್‌ಗಳ ಜಯಭೇರಿ ಬಾರಿಸಿತು.

ಈ ಬಾರಿಯ ಐಪಿಎಲ್‌ನಲ್ಲಿ ತೀರಾ ಹಿನ್ನಡೆಯೊಂದಿಗೆ ಕಂಗೆಟ್ಟಿರುವ ಮುಂಬೈ ಇಂಡಿಯನ್ಸ್ ತಂಡವು ಆರನೇ ಸೋಲು ಕಂಡಿತು. ಬುಧವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 243 ರನ್ ಗಳಿಸಿತು. ರಯಾನ್ ರಿಕಲ್ಟನ್(123★) ಅಬ್ಬರದ ಶತಕ ಬಾರಿಸಿದರು. ಹಾರ್ದಿಕ್(31) ಮಿಂಚಿದ್ದರು. ಗುರಿ ಬೆನ್ನತ್ತಿದ ಹೈದರಾಬಾದ್ 18.4 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 249 ರನ್ ಗಳಿಸಿ ಗುರಿ ಮುಟ್ಟಿತು. ಟ್ರಾವಿಸ್ ಹೆಡ್ 76 ರನ್ ಗಳಿಸಿದರು. ಹೆನ್ರಿಕ್ ಕ್ಲಾಸೆನ್ 65★ ರನ್ ಬಾರಿಸಿದರು. ಸಲೀಲ್ ಅರೋರಾ(30★) ಪಂದ್ಯ ಮುಗಿಸಿದರು. ಟ್ರಾವಿಸ್ ಹೆಡ್ ಪಂದ್ಯದ ಹೀರೋ. ಕ್ಲಾಸೆನ್ ಗೆಲುವಿನಲ್ಲಿ ಮಿಂಚಿದರು. ಸಲೀಲ್ ಅರೋರಾ ಸ್ಫೋಟಕ ಬ್ಯಾಟಿಂಗ್ ಮಾಡಿ ಗೆಲುವಿನ ರೂವಾರಿಗಳಲ್ಲಿ ಒಬ್ಬರಾದರು. ಮುಂಬೈ ತಂಡದ ಪ್ರತಿಯೊಬ್ಬ ಬೌಲರ್ ಕೂಡ 10ಕ್ಕೂ ಹೆಚ್ಚು ಎಕಾನಮಿ ಹೊಂದಿದ್ದರು. ಫಜಲ್‌ಫರ್ ಮಾತ್ರ 2 ವಿಕೆಟ್ ಪಡೆದರು. ಬ್ಯಾಟಿಂಗ್ ಮಾಡುವ ವೇಳೆ ಮುಂಬೈ ಪರ ರಯಾನ್ ಅಬ್ಬರಿಸಿದರು.

ರನ್ ಮಟ್ಟ

ಪವರ್‌ಪ್ಲೇನಲ್ಲಿ ಆಕಡೆ ರಯಾನ್ ಅಬ್ಬರಿಸಿದರು. ಅವರಿಗೆ ಜ್ಯಾಕ್ಸ್ ಸಾಥ್ ಸಿಕ್ಕ ನಂತರ ಮುಂಬೈ 78 ರನ್ ಗಳಿಸಿತ್ತು. ಇತ್ತ ಹೈದರಾಬಾದ್ ಪರ ಇಬ್ಬರೂ ಬ್ಯಾಟರ್‌ಗಳು ಬಿರುಸಿನ ಬ್ಯಾಟಿಂಗ್ ಮಾಡಿದರು. ಇಷ್ಟು ದಿನ ಮರೆ ಮಾಚಿದ್ದ ಹೆಡ್ ಅಸಲು ಆಟ ಬಯಲಾಯಿತು. ಹೈದರಾಬಾದ್ 92 ರನ್ ಗಳಿಸಿತು. ಇದರಲ್ಲಿ ಹೆಡ್ ಅರ್ಧಶತಕ ಪೂರೈಸಿಕೊಂಡರು. ಮಧ್ಯಮ ಓವರ್‌ಗಳಲ್ಲಿ ರಿಕಲ್ಟನ್ ಅವರದ್ದೇ ಅಬ್ಬರ. ಸಿಕ್ಸರ್ ಹಾಗೂ ಬೌಂಡರಿಗಳೊಂದಿಗೆ ಅಬ್ಬರಿಸಿ ಶತಕ ಪೂರೈಸಿದರು. ಮುಂಬೈ ಮಧ್ಯಮ ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡಿತಾದರೂ 124 ರನ್ ಗಳಿಸಿತು. ಹೈದರಾಬಾದ್‌ಗೆ ನಾಗಾಲೋಟ, ಹೆಡ್ 76, ಅಭಿ 46 ರನ್ ಗಳಿಸಿ ಅರ್ಧ ಕೆಲಸ ಮುಗಿಸಿದ್ದರು. ಇಬ್ಬರೂ ವಿಕೆಟ್ ಒಪ್ಪಿಸಿದ ನಂತರ ಕಿಶನ್ ಹೆಚ್ಚಿನ ಕೊಡುಗೆ ನೀಡಲೇ ಇಲ್ಲ. ಆದರೆ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಕ್ಲಾಸೆನ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಹೈದರಾಬಾದ್ 18 ಸಿಕ್ಸರ್‌ಗಳನ್ನು ಸುರಿಯಿತು. ಮಧ್ಯಮ ಓವರ್‌ಗಳಲ್ಲಿ 123 ರನ್ ಆದವು. ಡೆತ್ ಓವರ್‌ಗಳಲ್ಲಿ ಮುಂಬೈ ಪರ ಹಾರ್ದಿಕ್ ಪಾಂಡ್ಯ ಅಬ್ಬರಿಸಿದರು. ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಸ್ಕೋರ್ ಹಿಗ್ಗಿಸುವ ಕೆಲಸ ಮಾಡಿದರು. ರಯಾನ್ ಕೂಡ ಒಂದಿಷ್ಟು ಬೌಂಡರಿಗಳನ್ನು ಬಾರಿಸಿದ ನಂತರ ಮುಂಬೈ ಅಲ್ಲಿ 41 ರನ್ ಗಳಿಸಿತು. ಇತ್ತ ಹೈದರಾಬಾದ್ ಡೆತ್‌ನಲ್ಲಿ 37 ರನ್ ಗಳಿಸಬೇಕಿತ್ತು. ಕ್ಲಾಸೆನ್ ಅರ್ಧ ಶತಕ ಬಾರಿಸಿದ್ದರು. ಸಲೀಲ್ ಅರೋರಾ ಸ್ಫೋಟಕ ಬ್ಯಾಟಿಂಗ್ ಮಾಡತೊಡಗಿದರು. 30 ರನ್ ಬಾರಿಸಿದ ಅವರು, ಹೈದರಾಬಾದ್ ಮಡಿಲಿಗೆ ಪಂದ್ಯ ಹಾಕಿದರು. ಡೆತ್ ಮುಗಿಯುವ ಹೊತ್ತಿಗೆ ಹೈದರಾಬಾದ್ ಪಂದ್ಯ ಗೆದ್ದಿತು.

ಥಾಮಸ್: ಭಾರತಕ್ಕೆ ತೈವಾನ್ ಎದುರು



• **ಹೊಸದಿಲ್ಲಿ:** ಥಾಮಸ್ ಕಪ್ ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ತಂಡವು ತೈವಾನ್ ವಿರುದ್ಧ ಮುಖಾಮುಖಿಯಾಗಲಿದೆ. ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆದ ಡ್ರಾ ಬಳಿಕ ಈ ಪೈಪೋಟಿ ನಿಗದಿಯಾಗಿದೆ. 2022ರ ಚಾಂಪಿಯನ್ ಭಾರತ ತಂಡವು ತನ್ನ ಅಭಿಯಾನವನ್ನು ಕೆನಡಾ ವಿರುದ್ಧ 4-1 ಗೆಲುವಿನಿಂದ ಆರಂಭಿಸಿ, ಆಸ್ಟ್ರೇಲಿಯಾ ವಿರುದ್ಧ 5-0 ಅಂತರದ ಭರ್ಜರಿ ಜಯ ಸಾಧಿಸಿತು. ಆದರೆ ಕೊನೆಯ ಗುಂಪು ಹಂತದ ಪಂದ್ಯದಲ್ಲಿ ಚೀನಾ ವಿರುದ್ಧ 2-3 ಅಂತರದಲ್ಲಿ ಸೋಲು ಕಂಡಿತು.

ಭಾರತ, ಗುಂಪು ಎ'ಯಲ್ಲಿ ಹಾಲಿ ಚಾಂಪಿಯನ್ ಚೀನಾ ಹಿಂದೆ ಎರಡನೇ ಸ್ಥಾನ ಪಡೆದರೆ, ಚೈನೀಸ್ ತೈಪೆ ಗುಂಪು ಸಿ'ಯಲ್ಲಿ ಅಗ್ರಸ್ಥಾನ ಪಡೆದಿದೆ. ಇತರ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಚೀನಾ ಮಲೇಷ್ಯಾ, ಥೈಲ್ಯಾಂಡ್ ಆತಿಥೇಯ ಡೆನ್ಮಾರ್ಕ್ ಮತ್ತು ಜಪಾನ್ ಫ್ರಾನ್ಸ್ ಮುಖಾಮುಖಿಯಾಗಲಿವೆ. ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ರನ್ನರ್‌ಅಪ್ ಆಗಿ ಬಂದಿರುವ ಆಯುಷ್ ಶೆಟ್ಟಿ ಉತ್ತಮ ಲಯದಲ್ಲಿದ್ದು, ಮೂರು ಸಿಂಗಲ್ಸ್ ಪಂದ್ಯಗಳನ್ನೂ ಗೆದ್ದಿದ್ದಾರೆ. ಆದರೆ ಭಾರತದ ಪ್ರಮುಖ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್, ಕೆನಡಾದ ವಿಕ್ಟರ್ ಲೈ ಹಾಗೂ ಚೀನಾದ ಲಿ ಶಿ ಫೆಂಗ್ ವಿರುದ್ಧ ಸೋಲು ಅನುಭವಿಸಿದ್ದಾರೆ.

ಯಾರು v/s ಯಾರು?: ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್-ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಚೀನಾದ ಲಿಯಾಂಗ್ ವೇಯ್ ಕೆಂಗ್ ವಾಂಗ್ ಚಾಂಗ್ ವಿರುದ್ಧ 13-21, 21-13, 24-26 ಅಂತರದಲ್ಲಿ ಹೋರಾಟದ ಸೋಲು ಕಂಡು ನಾಕೌಟ್ ಹಂತಕ್ಕೆ ಪ್ರವೇಶಿಸುತ್ತಿದೆ. ಅನುಭವಿಗಳಾದ ಕಿದಂಬಿ ಶ್ರೀಕಾಂತ್ ಮತ್ತು ಎಚ್. ಎಸ್. ಪ್ರಣಯ್ ತಂಡದಲ್ಲಿದ್ದರೂ, ಕ್ವಾರ್ಟರ್ ಫೈನಲ್‌ನಲ್ಲಿ ಭಾರತವನ್ನು ಗೆಲುವಿನತ್ತ ಮುನ್ನಡೆಸುವ ಹೊಣೆ ಲಕ್ಷ್ಯ, ಆಯುಷ್ ಹಾಗೂ ಸಾತ್ವಿಕ್-ಚಿರಾಗ್ ಜೋಡಿಯ ಮೇಲಿದೆ. ಚೈನೀಸ್ ತೈಪೆ ತಂಡದಲ್ಲಿ ವಿಶ್ವಕ್ರಮಾಂಕ 6ರ ಚೌ ತಿಯೆನ್ ಚೆನ್, 8ರ ಲಿನ್ ಚುನ್-ಯಿ ಮತ್ತು 21ರ ಚಿ ಯು ಜೆನ್ ಪ್ರಮುಖ ಸಿಂಗಲ್ಸ್ ಆಟಗಾರರು. ಇತ್ತೀಚಿನ ಆಲ್ ಇಂಗ್ಲೆಂಡ್ ಓಪನ್‌ನಲ್ಲಿ ಚುನ್-ಯಿ, ಲಕ್ಷ್ಯ ಸೇನ್ ಅವರನ್ನು ಸೋಲಿಸಿದ್ದರು. ಇದಲ್ಲದೆ 2025ರ ಆಲ್ ಇಂಗ್ಲೆಂಡ್ ರನ್ನರ್‌ಅಪ್ ಚಿಯಾ ಹಾವೋ ಲೀ ಕೂಡ ಸಿಂಗಲ್ಸ್ ಆಯ್ಕೆಯಾಗಿ ಇದ್ದಾರೆ. ಡಬಲ್ಸ್‌ನಲ್ಲಿ ಚಿಯು ಹ್ಸಿಯಾಂಗ್ ಚಿಹ್ ವಾಂಗ್ ಚಿ-ಲಿನ್ ಮೊದಲ ಜೋಡಿ ಆಗಿದ್ದು, ಲಿಯು ಕ್ವಾಂಗ್ ಹೆಂಗ್ ಯಾಂಗ್ ಪೋ ಹಾನ್ ಎರಡನೇ ಜೋಡಿಯಾಗಿದ್ದಾರೆ.

ಚೀನಾ ವಿರುದ್ಧದ ಲೀಗ್ ಹಂತ ಪಂದ್ಯದಲ್ಲಿ ಸೋಲು

ಗುಂಪು ಹಂತದಲ್ಲಿ, ಚೈನೀಸ್ ತೈಪೆ ಸ್ವೀಡನ್ ವಿರುದ್ಧ 5-0 ಅಂತರದ ಜಯ ಸಾಧಿಸಿತು. ಕೊರಿಯಾ ವಿರುದ್ಧ 2-0 ಮುನ್ನಡೆಯಿದ್ದರೂ ಸೋಲು ಕಂಡಿತು. ಆದರೆ ಕೊನೆಯ ಪಂದ್ಯದಲ್ಲಿ ಡೆನ್ಮಾರ್ಕ್ ವಿರುದ್ಧ 3-2 ಗೆದ್ದು ಗುಂಪಿನ ಅಗ್ರಸ್ಥಾನವನ್ನು ಕಾಪಾಡಿಕೊಂಡಿತು. ಆ ಪಂದ್ಯದಲ್ಲಿ ಚಿ ಯು ಜೆನ್ ಐದು ಮ್ಯಾಚ್ ಪಾಯಿಂಟ್‌ಗಳನ್ನು ಉಳಿಸಿಕೊಂಡು ಡಿಟ್ಲೆವ್ ಜೇಗರ್ ಹೋಮ್ ವಿರುದ್ಧ 21-11, 9-11, 27-25 ಅಂತರದಲ್ಲಿ ಗೆದ್ದು ತಂಡಕ್ಕೆ ನಿರ್ಣಾಯಕ ಜಯ ತಂದುಕೊಟ್ಟರು.

ಗೆಲುವಿನ ಲಯಕ್ಕೆ ಮರಳೀತೇ ದಿಲ್ಲಿ?

• **ಜೈಪುರ:** ಯಾರೂ ಸೋಲಿಸಲಾಗದ ಪಂಜಾಬ್ ಕಿಂಗ್ಸ್ ತಂಡವನ್ನು ಸೋಲಿಸಿ ಆತ್ಮವಿಶ್ವಾಸವನ್ನು ಹೆಚ್ಚಿಸಿ ಕೊಂಡಿರುವ ರಾಜಸ್ಥಾನ ರಾಯಲ್ಸ್ ತಂಡವು ಶುಕ್ರವಾರದ ಐಪಿಎಲ್ ಪಂದ್ಯದಲ್ಲಿ ದಿಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲು ಸಿದ್ಧವಾಗಿದೆ. ಅರ್ಧಾವಧಿಯ ಐಪಿಎಲ್ ಮುಕ್ತಾಯಗೊಂಡಿರುವ ನಡುವೆ ತಂಡಗಳ ಪೈಪೋಟಿ ಈಗ ಹೆಚ್ಚಿದ್ದು, ಟೇಬಲ್ ಹೋರಾಟ ಶುರುವಾಗಿದೆ. ರಾಜಸ್ಥಾನಕ್ಕೆ ಹೆಡೆಮುರಿ ಕಟ್ಟುವವರಿಲ್ಲ, ಗೆಲುವುಗಳೊಂದಿಗೆ ನಾಗಾಲೋಟ ಮುಂದುವರಿಸಿದೆ. ಕಳೆದ ಪಂದ್ಯದಲ್ಲಿ ಬಲಿಷ್ಠ ಪಂಜಾಬ್ ತಂಡವನ್ನು ಸೋಲಿಸಿ ಮೆರೆದಾಡಿದೆ. ಇತ್ತ ದಿಲ್ಲಿ ಕ್ಯಾಪಿಟಲ್ಸ್ ಬೆಂಗಳೂರು ತಂಡದೊಂದಿಗೆ ಹೀನಾಯ ಸೋಲನುಭವಿಸಿದೆ. ಮುಖ್ಯವಾಗಿ ದಿಲ್ಲಿಗೆ ಪ್ಲೇಆಫ್‌ಗೇರಲು ಎಲ್ಲಾ ಪಂದ್ಯಗಳನ್ನು ಗೆಲ್ಲುವುದು ಅನಿವಾರ್ಯವಾಗಿದೆ. ಗೆಲುವಿನ ಹಳಿಗೆ ಮರಳುವ ತವಕ ದಿಲ್ಲಿಗಿದ್ದರೆ, ರಾಜಸ್ಥಾನಕ್ಕೆ ಗೆಲುವಿನೋಟದ ಸವಾಲಿದೆ.

ರಾಜಸ್ಥಾನಕ್ಕೆ ಭರವಸೆ: ತಂಡದಲ್ಲಿ ಬಲವಾದ ಬದಲಾವಣೆ ಮಾಡಿಕೊಂಡಿರುವ ರಾಜಸ್ಥಾನ ಈ ಬಾರಿ ಭರ್ಜರಿ ಪ್ರದರ್ಶನ ನೀಡುತ್ತಿದೆ. ಪ್ರತಿ ಬೌಲರ್ ಅನ್ನು ದಂಡಿಸುತ್ತಿರುವ ವೈಭವ್ ಸೂರ್ಯವಂಶಿಗೆ ಯಶಸ್ವಿ ಜೈಸ್ವಾಲ್ ಸಾಥ್ ಸಿಗುತ್ತಿದೆ. ಕಳೆದ ಪಂದ್ಯದಲ್ಲಿ ಫೆರೀರಾ ಕೂಡ ಮಿಂಚಿರುವುದು ವಿಶ್ವಾಸ ಹೆಚ್ಚಿಸಿದೆ. ಜಡೇಜಾ, ರಿಯಾನ್ ಇರುವುದು ತಂಡಕ್ಕೆ ಹೆಚ್ಚಿನ ಬಲ. ಬೌಲಿಂಗ್‌ನಲ್ಲಿ ಆರ್ಚರ್ ತಮ್ಮ ಪ್ರೈಮ್ ಮೋಡ್‌ಗೆ ಬಂದಿದ್ದಾರೆ. ನಾಂಡ್ರೆ ಬರ್ಗರ್, ಬ್ರಿಜೇಶ್ ಶರ್ಮ ಕೂಡ ವಿಕೆಟ್ ಕಿತ್ತಿದ್ದಾರೆ. ಸ್ಪಿನ್ ವಿಭಾಗವನ್ನು ಜಡೇಜಾ, ರವಿ ಬಿಷ್ಣೋಯ್ ಗಟ್ಟಿಗೊಳಿಸಿದ್ದಾರೆ.



ಪಂದ್ಯದ ವಿವರ

ಯಾವಾಗ: ಶುಕ್ರವಾರ
ಎಲ್ಲಿ: ಜೈಪುರ
ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಪಿಚ್: ಜೈಪುರದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಗರಿಗೆ ಲಾಭ. ಹಿಂದಿನ ಐಪಿಎಲ್ ಪಂದ್ಯಗಳಲ್ಲಿ ದೊಡ್ಡ ಸ್ಕೋರ್‌ಗಳು ಮೂಡಿಬಂದಿವೆ. ಸ್ಪಿನ್ನರ್‌ಗಳಿಗೆ ಕೊಂಚ ಸಹಾಯ ಸಿಗಲಿದೆ.

ದಿಲ್ಲಿಗೆ ಗೆಲ್ಲಬೇಕಾದ ಒತ್ತಡ

ದಿಲ್ಲಿ ಕ್ಯಾಪಿಟಲ್ಸ್ ತಂಡ ಭಾರೀ ಸೋಲನುಭವಿಸಿದೆ. ಆರ್‌ಸಿಬಿಯೊಂದಿಗಿನ ಸೋಲು ಬರೀ ಸೋಲಾಗಿರದೆ, ದೊಡ್ಡ ಹಿನ್ನಡೆಯಾಗಿದೆ. 75 ರನ್‌ಗಳಿಗೆ ಆಲೌಟ್ ಆಗಿರುವುದು ಬ್ಯಾಟರ್‌ಗಳ ವಿಶ್ವಾಸ ಕುಗ್ಗಿಸಿದ್ದಲ್ಲದೆ, ಅಂಕಪಟ್ಟಿಯಲ್ಲಿ ದೊಡ್ಡ ಹೊಡೆತ ಕೊಟ್ಟಿದೆ. ಹೀಗಿರುವಾಗ ದಿಲ್ಲಿಗೆ ಗೆಲ್ಲುವ ರಾಹುಲ್ ಹೊರತುಪಡಿಸಿ ಹೆಚ್ಚಿನ ಬ್ಯಾಟಿಗರು ಲಯದಲ್ಲಿಲ್ಲ. ಬೌಲಿಂಗ್ ವಿಭಾಗದಲ್ಲಿ ಎನ್‌ಗಿಡಿ ಹೊರಗಿರುವುದು ಸವಾಲು. ಸ್ಪಿನ್ನರ್‌ಗಳಲ್ಲಿ ಅಕ್ಷರ್ ಅಲ್ಲ ಉತ್ತಮ ಬೌಲಿಂಗ್ ಮಾಡಿದ್ದಾರೆ. ಇನ್ನುಳಿದಂತೆ ಸಮೀರ್ ರಿಜ್ವಿ, ಪೋರೆಲ್ ಮೊದಲಾದವರು ಲಯದ ಹುಡುಕಾಟದಲ್ಲಿದ್ದಾರೆ. ಮಿಲ್ಲರ್ ತಂಡಕ್ಕೆ ಬಲ ತಂದಿದ್ದಾರೆ.

ಇಪಿಎಲ್: ಫ್ರಾಂಚೈಸಿ ಖರೀದಿಸಿದ ಫಾಫ್, ಜಾಂಟಿ, ಹೆನ್ರಿಕ್ ಕ್ಲಾಸೆನ್

• **ರೊಟರ್ ಡ್ಯಾಮ್:** ವಿಶ್ವ ಕ್ರಿಕೆಟ್ ಮೈದಾನದಲ್ಲಿ ಮಿಂಚಿದ್ದ ದಕ್ಷಿಣ ಆಫ್ರಿಕಾದ ದಿಗ್ಗಜ ಆಟಗಾರರು ಈಗ ಯುರೋಪಿಯನ್ ಕ್ರಿಕೆಟ್ ನಲ್ಲೂ ಹೊಸ ಇತಿಹಾಸ ಬರೆಯಲು ಸಜ್ಜಾಗಿದ್ದಾರೆ. ನೆದರ್‌ಲೆಂಡ್ಸ್‌ನ ರೊಟರ್ ಡ್ಯಾಮ್ ಮೂಲದ, ಐಸಿಸಿ ಅನುಮೋದಿತ ಯುರೋಪಿಯನ್ ಟಿ20 ಪ್ರೀಮಿಯರ್ ಲೀಗ್ (ಇಟಿಪಿಎಲ್)ನ ಐದನೇ ಫ್ರಾಂಚೈಸಿಯನ್ನು ಜಾಂಟಿ ರೋಡ್ಸ್, ಫಾಫ್ ಡು ಪ್ಲೆಸಿಸ್ ಮತ್ತು ಹೆನ್ರಿಕ್ ಕ್ಲಾಸೆನ್ ಅವರು ಜಂಟಿಯಾಗಿ ಖರೀದಿಸಿದರು.




ದಕ್ಷಿಣ ಆಫ್ರಿಕಾದ ಈ ಮೂವರು ತಾರೆಯರು ಒಂದು ಒಕ್ಕೂಟವನ್ನು ರಚಿಸಿಕೊಂಡು ತಂಡದ ಮಾಲೀಕತ್ವ ವಹಿಸಿಕೊಂಡಿದ್ದು, ಮಧುಕರ್ ಅವರು ಮ್ಯಾನೇಜಿಂಗ್ ಪಾರ್ಟ್‌ನರ್ ಆಗಿ ಈ ತಂಡವನ್ನು ಸೇರಿಕೊಂಡಿದ್ದಾರೆ. ಐಸಿಸಿ ಮಾನ್ಯತೆ ಪಡೆದ ಯುರೋಪಿನ ಮೊದಲ ಅಧಿಕೃತ ಟಿ20 ಲೀಗ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಇಟಿಪಿಎಲ್, ಈ ಹಿರಿಯ ಆಟಗಾರರ ಪ್ರವೇಶದೊಂದಿಗೆ ಭಾರಿ ಕುತೂಹಲ ಮೂಡಿಸಿದೆ. ಯುರೋಪಿಯನ್ ಟಿ20 ಲೀಗ್‌ನ ಚೊಚ್ಚಲ ಸೀಸನ್ ಆಗಸ್ಟ್ 26 ರಿಂದ ಸೆಪ್ಟೆಂಬರ್ 20, 2026 ರವರೆಗೆ ನಡೆಯಲಿದೆ. ಈ ಪ್ರತಿಷ್ಠಿತ ಟೂರ್ನಿಯಲ್ಲಿ ರೊಟರ್ ಡ್ಯಾಮ್ ತಂಡವೂ ಸೇರಿದಂತೆ ಗ್ಲಾಸ್ಗೋ, ಆಮ್ ಸ್ಟರ್ ಡ್ಯಾಮ್, ಎಡಿನ್ ಬರ್ಗ್, ಡಬ್ಲಿನ್ ಮತ್ತು ಬೆಲ್ ಫಾಸ್ಟ್ ಎಂಬ ಆರು ನಗರಗಳ ತಂಡಗಳು ಕಣಕ್ಕಿಳಿಯಲಿವೆ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ

5970



ಎಡದಿಂದ ಬಲಕ್ಕೆ
2.ಅಂದು ಬಡವಿಗೆ ತೋರಿಸಿದ ಕಾಡು (3)
5.ತಾನು ಪಡೆವ ಪ್ರಯೋಜನದ ಬಗ್ಗೆ ಮಾತ್ರ ಚಿಂತಿಸುವವ (4)
6.ವನದ ನಡುವೆ ಆದ ಅಭಿವೃದ್ಧಿ (4)
7.ಧಾರ್ಮಿಕ ಕಾರ್ಯದಲ್ಲಿ ನೀಡುವ ಕಾಣಿಕೆ (3)
8.ಅಭರಣ ಮೊದಲಿರುವ ರೋಮ ಹಣ (3)
10.ಐದು ಜನರಲ್ಲೊಕ ತುಂಬ ಕಿಲಾಡಿ (3)
12.ಅಜಗಳ ನಡುವೆ ಕುಳಿತಿರುವ ತಮ್ಮ (3)
14.ಲಕ್ಷ್ಯವೂ ಹೋದು-ನಡಿಗೆಯೂ ಹೋದು (3)
15.ಇಂಚಾದುದು ತಿರುಗಿ ಕೇಳುತ್ತಿದೆ (3)
16.ಶಿವ ಒಬ್ಬ ಯಾಚಕ (3)
17.ಆಮೇಲೆ ನನಗೆ ಕಾಣಿಸಿದ ಮುಖ (3)
18.ನೀರು ಮೊದಲಿರುವ ಸಂತೋಷಕೂಟ (3)

ಮೇಲಿನಿಂದ ಕೆಳಕ್ಕೆ
1.ಎಣ್ಣೆಯನ್ನು ಹುಟ್ಟಿಕೊಂಡು ಮಾಡುವ ಸ್ನಾನ (5)
2.ನಿರ್ಮಲತೆ-ಪಾವಿತ್ರ್ಯದ ಸಂಕೇತವಾದ ಕಮಲ (4)
3.ವಿವರವಾಗಿ ನೀಡಿದ ಸ್ಪಷ್ಟನೆ (4)
4. ಇದು ನಿವಾಸ ಪ್ರದೇಶ (5)
9. ಆನೆಯಂತಹ ಗಂಭೀರ ನಡಿಗೆಯನ್ನು ಹೀಗೆನ್ನುತ್ತೇವೆ (5)
11.ಸರ್ವದೇವತೆಯ ಪ್ರೀತಿಗಾಗಿ ಮಾಡುವ ಹಬ್ಬ (5)
12.ಸ್ವಲ್ಪ-ಕೊಂಚ ಎಂಬರ್ಥದ ಶಬ್ದ (3)
13.ಉತ್ತರಕರ್ನಾಟಕದವರ ಸ್ನಾನ (3)

5969 ಉತ್ತರ

ಎಡದಿಂದ ಬಲಕ್ಕೆ:
1.ನಡುಹಗಲು
3.ಕಳಸ 6.ನಗೆಗೇಡಿ
8.ಉತ್ತರಪ್ರದೇಶ
10.ಮಾನವದಾನವ
13.ಕುರಿಗಾಹಿ 16.ಗುರುತು
17.ಪುರಸ್ಕರಿಸು

ಮೇಲಿನಿಂದ ಕೆಳಕ್ಕೆ :
1.ನಯನ 2.ಕಾಲು
3.ಪ್ರಯೋಗಿಕ
4.ಸಮಾವೇಶ 6.ಗೆಳೆತನ
7.ಉಡಿ 9.ದೇಶಾವರಿ
10.ಮಾಯವಾಗು
11.ವನಾವತು 12.ವಹಿ
14.ಕುಣಿಸು 15.ತೋಟು

ಸಿನಿ ದಿಗಂತ

ಕೆಡಿ ಧ್ರುವ ಸರ್ಜಾ ಕಾಳಿದಾಸನ ರಕ್ತ ಚರಿತ್ರೆ

ಚಿತ್ರ ವಿಮರ್ಶೆ

▸ ಸತ್ಯಮೂರ್ತಿ

ಧ್ರುವ ಸರ್ಜಾ ಅಭಿನಯದ ಆರನೇ ಚಿತ್ರ ಕೆಡಿ ಗುರುವಾರ ತೆರೆಕಂಡಿದ್ದು, ರಾಜ್ಯಾದ್ಯಂತ ಅದ್ಭುತ ಪ್ರತಿಕ್ರಿಯೆ ಪಡೆದುಕೊಳ್ಳುತ್ತಿದೆ, ಕನ್ನಡದಲ್ಲಿ ಬ್ಯಾಕ್ ಟು ಬ್ಯಾಕ್ 6 ಬಿಗ್ ಹಿಟ್ ಚಿತ್ರಗಳನ್ನು ಕೊಟ್ಟಂತಹ ಏಕೈಕ ನಟ ಎಂದರೆ ಧ್ರುವ ಸರ್ಜಾ, ಈ ಚಿತ್ರದಲ್ಲೂ ಸಹ ಎಲ್ಲಾ ಫ್ರೇಮ್‌ಗಳಲ್ಲಿ ಅವರೇ ತುಂಬಿಕೊಂಡಿದ್ದಾರೆ, ಜತೆಗೆ ನಿರ್ದೇಶಕ ಪ್ರೇಮ್ ಇಡೀ ಚಿತ್ರವನ್ನು ಅದ್ಭುತವಾಗಿ ಕಟ್ಟಿಕೊಡುವಲ್ಲಿ ತುಂಬಾ ಎಫರ್ಟ್ ಹಾಕಿದ್ದಾರೆ. ರೆಟ್ರೋ ಶೈಲಿಯ ಕಥೆಗಳನ್ನು ಹೇಳುವಾಗ ಸಣ್ಣ ಮಿಸ್ಟೇಕನ್ನು ಸಹ ಪ್ರೇಕ್ಷಕ ಗುರುತಿಸಿಬಿಡುತ್ತಾನೆ, 1980ರ ದಶಕದಲ್ಲಿ ನಡೆಯುವ ಕಥೆ ಇದಾಗಿದ್ದು, ಕಾಳಿ(ಧ್ರುವ ಸರ್ಜಾ) ಹಾಗೂ ಡಾಕ ದೇವ(ಸಂಜಯ್‌ದತ್) ಈ ಎರಡು ಪಾತ್ರಗಳ ಸುತ್ತ ನಡೆಯುವ ರಣರೋಚಕ ಕಥೆಯಿದು, ಚಿತ್ರದ ನಾಯಕ ಕಾಳಿದಾಸ, ಕಾಳಿ ಆತನ ನಿಕ್ ನೇಮ್, ಡಾಕ್ ದೇವಾ ಪವರ್‌ಫುಲ್ ಗ್ಯಾಂಗ್‌ಸ್ಟರ್, ಮಂತ್ರಿಯಿಂದ ಸಿಎಂವರೆಗೂ ಈತನಿಗೆ ಗೊತ್ತು. ಈತನನ್ನ ಮಟ್ಟ ಹಾಕಲು ಪೊಲೀಸರು ಸಾಕಷ್ಟು ತಂತ್ರಗಳನ್ನು ಹೂಡುತ್ತಾರೆ. ಮಕ್ಕಳಿಗೆ ಪಾಠ ಮಾಡುವ ಮೇಷ್ಟ್ರು ಧರ್ಮ(ರಮೇಶ ಅರವಿಂದ್), ಸೀಮೆಎಣ್ಣೆ, ಹಾಲಿನ ವ್ಯಾಪಾರ ನಡೆಸುತ್ತಾ ತನ್ನದೇ ಲೋಕದಲ್ಲಿ ವಿಹರಿಸುತ್ತಿರೋ ಕಾಳಿದಾಸ ಈತನ ತಮ್ಮ, ಮುಗ್ಧ ಕಾಳಿದಾಸನ ಶೈಲಿ ಮಚ್ಚು ಬರೋದು ಯಾವ ಕಾರಣಕ್ಕೆ ? ಆತ ಹೇಗೆ ಬದಲಾಗೋದ ಎನ್ನುವುದೇ ಚಿತ್ರದ ಕಥೆ.45 ವರ್ಷಗಳ ಹಿಂದಿನ ಬೆಂಗಳೂರನ್ನ ತೆರೆಮೇಲೆ ನೀಟಾಗಿ ಕಟ್ಟಿಕೊಟ್ಟಿದ್ದಾರೆ ನಿರ್ದೇಶಕ ಪ್ರೇಮ್. ಹಳೇ ಬೆಂಗಳೂರಿನ ಶಿವಾಜಿ ಥಿಯೇಟರ್ ಹಾಗೂ ಕೆಆರ್.ಮಾರ್ಕೆಟ್ ಸೆಟ್ ಗಮನ ಸೆಳೆಯುತ್ತದೆ. ವಿಂಟೇಜ್ ಕಾರುಗಳು, ಹಳೇ ಬೈಕುಗಳು, ಡಬಲ್ ಡೆಕ್ಕರ್ ಬಸ್‌ಗಳು, ಪಾತ್ರಗಳ ಕಾಸ್ಟ್ಯೂಮ್ ಹಾಗೂ ಹೇರ್‌ಸ್ಟೈಲ್, ಪ್ರತಿಯೊಂದನ್ನೂ ತುಂಬಾ ಕಾಳಜಿಯಿಂದ ನಿರ್ವಹಿಸಿದ್ದಾರೆ. ಚಿತ್ರದ ಅದ್ದೂರಿತನಕ್ಕೆ ಯಾವುದೇ ಕೊರತೆ ಬಾರದ ಹಾಗೆ ಕೆವಿಎನ್ ಸಂಸ್ಥೆ ನೋಡಿಕೊಂಡಿದೆ.

ನಾಯಕನಟ ಧ್ರುವ ಸರ್ಜಾ ಹಿಂದೆಂದೂ ಕಾಣಿಸದ ರೀತಿಯಲ್ಲಿ ತೆರೆಮೇಲೆ ಕಾಣಿಸಿಕೊಂಡಿದ್ದು ಉಳಿದೆಲ್ಲ ಪಾತ್ರಗಳನ್ನು ತಿಂದು ಹಾಕಿದ್ದಾರೆ ಎಂದರೆ ಉತ್ಪ್ರೇಕ್ಷೆಯಾಗಲಾರದು, ಇಂಥ ಸಿನಿಮಾ ಮಾಡಲು ಮೂರು ವರ್ಷ ಸಮಯ ತಗೊಂಡಿದ್ದು ಏಕೆ ಎನ್ನುವುದು ಚಿತ್ರದ ಅದ್ದೂರಿ ಮೇಕಿಂಗ್, ಕಥೆಗೆ ತಕ್ಕಂತೆ ಪಾತ್ರಗಳನ್ನು ಕಟ್ಟಿಕೊಟ್ಟಿರುವ ನಿರ್ದೇಶಕರ ಬದ್ಧತೆ ಎಲ್ಲವೂ ಇಲ್ಲಿ ಕೌಂಟ್ ಆಗುತ್ತದೆ, ಧ್ರುವ ಸರ್ಜಾ ಅವರ ವಿಶೇಷ ಗೆಟಪ್ ಗಮನ ಸೆಳೆಯುತ್ತದೆ, ಉದ್ದನೆಯ ಕೂದಲು, ರೆಟ್ರೋ ಲುಕ್ ಅವರಿಗೆ ಸೂಟ್ ಆಗಿದೆ. ಅಣ್ಣನ ಪ್ರೀತಿಗಾಗಿ ಹಂಬಲಿಸುವ ಮುಗ್ಧ ತಮ್ಮನಾಗಿ, ಓದು ಬಾರದ ಅಮಾಯಕನಾಗಿ, ತನ್ನ ಕುಟುಂಬವನ್ನು ಸಂರಕ್ಷಿಸಲು ಉಗ್ರನರಸಿಂಹನಾಗಿ ಘೋರರೂಪ ತಾಳುವ ಅವರ ಪಾತ್ರದ ಚೇಂಜೋವರ್, ಅದಕ್ಕೆ ಹಾಕಿರುವ ಎಫರ್ಟ್ ಸುಲಭದ್ದೇನಲ್ಲ, ರಾಶಿ ಹೊಂದ ಮೇಲೆ ಕೂತು ಮೀಸೆ ತಿರುಗಿಸುವ ಕೆಡಿಯಾಗಿ, ರಾಕ್ಷಸನೊಬ್ಬನನ್ನು ದೇವರು ಅಂತ ಪೂಜಿಸೋ ಹುಚ್ಚು ಅಭಿಮಾನಿಯಾಗಿ ಧ್ರುವ ಸರ್ಜಾ ಇಷ್ಟವಾಗುತ್ತಾರೆ. ಧ್ರುವ ಸರ್ಜಾ ಹೇಳಿಕೇಳಿ ಆಕ್ಷನ್ ಪ್ರಿನ್ಸ್, ಆಕ್ಷನ್ ದೃಶ್ಯಗಳಲ್ಲಿ ಅವರನ್ನು ಮೀರಿಸುವ ವರ್‍ಯಾರೂ ಇಲ್ಲ, ಜತೆಗೆ ಸೆಂಟಿಮೆಂಟ್ ದೃಶ್ಯಗಳಲ್ಲೂ ಸಹ ಧ್ರುವ ಸರ್ಜಾ ವೀಕ್ಷಕರ ಮನಸನ್ನು ತಟ್ಟುತ್ತಾರೆ. ಅವರ ಡೈಲಾಗ್ ಡೆಲಿವರಿ, ಮ್ಯಾನರಿಸಂ ಹಾಗೂ ಕಾಮಿಡಿ ಟೈಮಿಂಗ್ ಎಲ್ಲವೂ ಅದ್ಭುತವಾಗಿದೆ. ಸಂಜಯದತ್, ಶಿಲ್ಪಾ ಶೆಟ್ಟಿ, ರಮೇಶ್, ರವಿಚಂದ್ರನ್ ಎಲ್ಲರ ಕ್ಯಾರೆಕ್ಟರ್‌ಗಳೂ ನಾಯಕನ ಪಾತ್ರದ ಸುತ್ತ ಕಥೆ ಹೇಳುತ್ತ ಸಾಗುತ್ತವೆ, ವಿಲಿಯಂ ಡೇವಿಡ್ ಅವರ ಕ್ಯಾಮರಾ ವರ್ಕ್ ಚೆನ್ನಾಗಿ ಬಂದಿದೆ. ಮೋಹನ್ ಬಿ. ಕೆರೆ ಅವರ ಕಲಾನಿರ್ದೇಶನ ಚಿತ್ರದ ಶ್ರೀಮಂತಿಕೆಯನ್ನು ಹೆಚ್ಚಿಸಿದೆ. ಅರ್ಜುನ್ ಜನ್ಯ ಅವರ ಹಾಡುಗಳು ಬಿಜಿಎಂ ಬಗ್ಗೆ ಹೇಳುವಂತೆಯೇ ಇಲ್ಲ, ಕೆಡಿ ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಪ್ರೇಮ್ ರೋಚಕ ತಿರುವನ್ನು ಇಟ್ಟಿದ್ದಾರೆ. ಕಿಚ್ಚ ಸುದೀಪ್ ಕಾಲ ಭೈರವನಾಗಿ ಎಂಟ್ರಿ ಕೊಡುವ ಮೂಲಕ ಚಿತ್ರ ಎಂಡ್ ಆಗುತ್ತದೆ. ಕೆಡಿ 2 ಚಿತ್ರಕ್ಕೆ ಲೀಡ್ ಕೊಡುತ್ತದೆ.







ಶ್ರೀಮತಿ ಸಿಂಧೂರ ಟೀಸರ್ ಬಿಡುಗಡೆ



ಆರ್ ಅಂಡ್ ಆರ್. ಎಂಟರ್‌ಪ್ರೈಸಸ್ ಮೂಲಕ ಡಿ.ಎನ್.ನಾಗಿರೆಡ್ಡಿ ಅವರು ಕಥೆ ಬರೆದು ನಿರ್ಮಿಸಿರುವ ಶ್ರೀಮತಿ ಸಿಂಧೂರ ಚಿತ್ರದ ಟೀಸರ್, ಆಡಿಯೋ ಬಿಡುಗಡೆ ಸಮಾರಂಭ ಬುಧವಾರ ಸಂಜೆ ಹೊರಗೆ ಸುರಿಯುತ್ತಿರುವ ಜೋರು ಮಳೆಯ ನಡುವೆ ಎಸ್.ಆರ್.ವಿ. ಥಿಯೇಟರಿನಲ್ಲಿ ನೆರವೇರಿತು. ಆರ್. ಅನಂತರಾಜು ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರದಲ್ಲಿ, ಚಿನ್ನಾರಿ ಮುತ್ತ ವಿಜಯ ರಾಘವೇಂದ್ರ ಅವರು ನಾಯಕನಾಗಿ ನಟಿಸಿದ್ದಾರೆ. ಪ್ರಿಯಾ ಹೆಗಡೆ ಹಾಗೂ ರೇಷ್ಮಾ.ವಿ.ಗೌಡ ಅವರು ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ನಿರ್ಮಾಪಕ ಡಿ.ಎನ್. ನಾಗಿರೆಡ್ಡಿ ಮಾತನಾಡುತ್ತ 20 ವರ್ಷಗಳ ಹಿಂದೆ ಗ್ರೀನ್ ಸಿಗ್ನಲ್ ಎಂಬ ಚಿತ್ರವನ್ನು ನಿರ್ಮಾಣ ಮಾಡಿದ್ದೆ. ಮುಂದೆ ಆರೋಗ್ಯ ಸಮಸ್ಯೆಯಿಂದಾಗಿ ಚಿತ್ರ ಮಾಡಿರಲಿಲ್ಲ, ಈಗ ಉತ್ತಮ ನಾಯಕ, ನಾಯಕಿ, ಒಳ್ಳೆಯ ತಂಡ ದೊರಕಿದ್ದರಿಂದ ಚಿತ್ರ ಮಾಡಲು ಸಹಾಯವಾಯಿತು. ಮುಖ್ಯವಾಗಿ ಸಿನಿಮಾ ಕಾರ್ಮಿಕರಿಗೆ ಕೆಲಸ ಕೊಡುವ ಉದ್ದೇಶದಿಂದ ಈ ಚಿತ್ರ ಮಾಡಿದೆ. ತೊಂದರೆಗೊಳಗಾದ ಭಕ್ತನನ್ನು ಕಾಪಾಡಲು ಶ್ರೀ ಆಂಜನೇಯ ಸ್ವಾಮಿಯೇ ಭೂಮಿಗೆ ಬರುತ್ತಾನೆ, ಇಂಥ ದೈವಿಕ ಎಳೆಯನ್ನಿಟ್ಟುಕೊಂಡು ಮಾಡಿದ ಚಿತ್ರ ಇದಾಗಿದೆ, ಚಿತ್ರದಲ್ಲಿ ಹನುಮಾನ್ ಚಾಲಿಸಾವನ್ನು ಕೈಲಾಶ್ ಖೇರ್ ಅವರಿಂದ ಹಾಡಿಸಬೇಕೆಂದು ಅವರನ್ನು ಕೇಳಿದಾಗ ಒಪ್ಪಿ ಪ್ರೀತಿಯಿಂದ ಹಾಡಿದ್ದಾರೆ. ಇದು ಕನ್ನಡಕ್ಕಷ್ಟೇ ಅಲ್ಲದೆ ಇಡೀ ಭಾರತವೇ ಗುನುಗುವಂಥ ಹಾಡಾಗುವುದು, ಚಿತ್ರಕ್ಕೆ ಎಲ್ಲರೂ ಸಹಕರಿಸಿದ್ದು, ಚಿತ್ರದಿಂದ ಬರುವ ಲಾಭದ ಹಣವನ್ನು ಸಿನಿಮಾ ಕಾರ್ಮಿಕರ ಏಳಿಗೆಗೆ ನೀಡುವುದಾಗಿ ತಿಳಿಸಿದರು.

ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಅನಂತರಾಜು ಮಾತನಾಡುತ್ತ ಇಂದಿನ ಸಂದರ್ಭದಲ್ಲಿ ಹೊಡಿಬಡಿ ರಕ್ತಪಾತವೇ ತುಂಬಿರುವ ಚಿತ್ರಗಳ ಮಧ್ಯೆ ಒಂದೊಳ್ಳೆ ಫ್ಯಾಮಿಲಿ ಎಂಟರ್‌ಟೈನರ್ ಚಿತ್ರ ಮಾಡಬೇಕು ಎಂದಾಗ ನಮಗೆ ಜೊತೆಯಾದವರು ನಾಗಿರೆಡ್ಡಿಯವರು. ನಾಯಕನ ಪಾತ್ರಕ್ಕೆ ವಿಜಯ ರಾಘವೇಂದ್ರ ಅವರೇ ಸೂಕ್ತವೆನಿಸಿತು. ಚಿತ್ರಕ್ಕೆ ರಾಜೇಶ್ ರಾಮ್‌ನಾಥ್ ಉತ್ತಮ ಸಂಗೀತ ನೀಡಿದ್ದಾರೆ, ನಾನು ಎರಡು ಹಾಡಿಗೆ ಸಾಹಿತ್ಯ ಬರೆದಿದ್ದೇನೆ ಎಂದು ತಿಳಿಸಿದರು. ಕವಿರಾಜ್ ಅವರ ಸಾಹಿತ್ಯ ಕೂಡ ಇದೆ, ಹಾಡುಗಳಿಗೆ ಫೈವ್ ಸ್ಟಾರ್ ಗಣೇಶ ಚೆನ್ನಾಗಿ ಕೋರಿಯೋಗ್ರಫಿ ಮಾಡಿದ್ದಾರೆ, ಮುಖ್ಯವಾಗಿ ಚಿತ್ರಕ್ಕೆ ಪೂರಕವಾಗಿ ಆಂಜನೇಯ ಪಾತ್ರಕ್ಕೆ ಒಬ್ಬರನ್ನು ಗಂಗು ಅವರ ಸಲಹೆಯಂತೆ ಕರೆಸಿದೆವು. ಅವರ ನ್ಯಾಷನಲ್ ಲೆವೆಲ್ ಬಾಡಿಬಿಲ್ಡರ್, ಹಿಂದಿಯಲ್ಲಿ ಆಂಜನೇಯನ ಪಾತ್ರ ಮಾಡಿ ಗುರುತಿಸಿಕೊಂಡಿದ್ದಾರೆ, ಮೂಲತಃ ಅವರು ಹೊಸಪೇಟೆಯವರಾಗಿದ್ದು, ತೆರೆಯ ಮೇಲೆ ಅವರ ಪಾತ್ರ ನೋಡಿದರೆ ಸಾಕ್ಷಾತ್ ಆಂಜನೇಯನನ್ನೇ ನೋಡಿದ ಹಾಗೆ ಅನಿಸುತ್ತೆ, ಒಟ್ಟಾರೆಯಾಗಿ ಎಲ್ಲರೂ ಚಿತ್ರಕ್ಕಾಗಿ ಕಷ್ಟಪಟ್ಟಿದ್ದು ಚಿತ್ರ ಚೆನ್ನಾಗಿ ಮೂಡಿ ಬಂದಿದೆ ಎಂದು ಹೇಳಿದರು.



ವಿಜಯ ರಾಘವೇಂದ್ರ ಮಾತನಾಡಿ ಇಂದಿನ ಫಾಸ್ಟ್ ದುನಿಯಾದಲ್ಲಿ ಒಂದೊಳ್ಳೆ ಫ್ಯಾಮಿಲಿ ಎಂಟರ್‌ಟೈನರ್ ಚಿತ್ರ ಇದಾಗಿದೆ, ಈ ಚಿತ್ರದಲ್ಲಿ ನನ್ನದು ಮನೆಯ ಜವಾಬ್ದಾರಿಯುತ ವ್ಯಕ್ತಿಯ ಪಾತ್ರ. ಮನೆಯ ಒಳಗೆ ಮತ್ತು ಹೊರಗೆ ಸಮಸ್ಯೆ ಉಂಟಾದಾಗ ಅದನ್ನು ಹೇಗೆ ಬಗೆಹರಿಸುತ್ತಾನೆ ಎನ್ನುವ ಜವಾಬ್ದಾರಿಯುತ ಪಾತ್ರ ಎಂದರು. ನಾಯಕಿ ಪ್ರಿಯಾ ಹೆಗಡೆ ಹಾಗೂ ರೇಷ್ಮಾ ತಮ್ಮ ಪಾತ್ರಗಳ ಕುರಿತಂತೆ ಮಾತನಾಡಿದರು,

ನಾಯಕಿ ಪ್ರಿಯಾ ಹೆಗಡೆ,ಮಾತನಾಡಿ ಸ್ಕ್ರೀನ್ ಮೇಲೆ ರಕ್ಷಿತಾ ರಮ್ಯಾ ಅವರ ಲುಕ್ ನೋಡಿ ಬೆಳೆದವಳು ನಾನು ಸ್ಕ್ರೀನ್ ಮೇಲೆ ಹೇಗೆ ಕಾಣಬಹುದೆಂಬ ನಿರೀಕ್ಷೆ ಇತ್ತು ಹಾಗೆ ಪಾತ್ರ ತುಂಬಾ ಚೆನ್ನಾಗಿ ಮೂಡಿ ಬಂದಿದೆ ಶ್ರೀ ಮತಿ ಸಿಂಧೂರ ಚಿತ್ರಕ್ಕೆ ಸಪೋರ್ಟ್ ಮಾಡಬೇಕೆಂದು ಹೇಳಿದರು ಚಿತ್ರ ತಂಡದ ಪ್ರತಿಯೊಬ್ಬರು ಮಾತನಾಡಿ ತಮ್ಮ ಅಭಿಪ್ರಾಯ ಹಂಚಿ ಕೊಂಡರು

ಪಿಕೆಹೆಚ್.ದಾಸ್ ಅವರ ಕ್ಯಾಮೆರಾ ವರ್ಕ, ಸಂಜೀವ್ ರೆಡ್ಡಿ ಅವರ ಸಂಕಲನ, ರಾಜೇಶ್ ರಾಮನಾಥ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ, ರೇಷ್ಮಾ.ವಿ.ಗೌಡ, ಪ್ರಸನ್ನ ಬಾಗಿನ, ಗಣೇಶ್‌ರಾವ್, ಮಾನಸ ಸುಧೀರ್, ರತೀಶ್, ಸ್ನೇಹ ಜಾದವ್ ಹಾಗೂ ಇತರರು ಚಿತ್ರದ ಉಳಿದ ಪಾತ್ರಗಳಲ್ಲಿದ್ದಾರೆ. ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿ ಆರ್. ಗಂಗಾಧರ್ ಕೈಜೋಡಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, I Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26